ಕರ್ನಾಟಕ ಸರ್ಕಾರ

# ಸಿರಿ ಕನ್ನಡ

## ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ

## ಭಾಗ-2

## ೭

## ಏಳನೆಯ ತರಗತಿ

@KTBS NOT TO BE REPUBLISHED

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
೬ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-೫೬೦ ೦೦೩.

# ಪರಿವಿಡಿ

F7C8U4


| ಕ್ರ.ಸಂ. | ಗದ್ಯ ಭಾಗ | ಕೃತಿಕಾರರು | ಪು.ಸಂ. |
|---|---|---|---|
| ೫ | ಪರಿಸರ ಸಮತೋಲನ | ಕೃಷ್ಣಾನಂದ ಕಾಮತ್ | ೧ |
| ೬ | ಜಗಳಿ ಇರುವೆ | ಕೆ.ಪಿ. ಪೂರ್ಣಚಂದ್ರ ತೇಜಸ್ವಿ | ೧೦ |
| ೭ | ಬಿಲ್ಲಹಬ್ಬ | ಎಚ್.ಎಸ್. ವೆಂಕಟೇಶಮೂರ್ತಿ | ೧೯ |
| ೮ | ಸಂಕ್ರಾಂತಿಯಂದು ಸುಖ-ದುಃಖ | ಎ.ಆರ್. ಮಣಿಕಾಂತ್ | ೩೩ |
| | **ಪದ್ಯ ಭಾಗ** | | |
| ೫ | ಹಚ್ಚೇವು ಕನ್ನಡದ ದೀಪ | ಡಿ.ಎಸ್. ಕರ್ಕಿ | ೪೦ |
| ೬ | ಬಿಡುಗಡೆಯ ಹಾಡು | ಮುದೇನೂರು ಸಂಗಣ್ಣ | ೫೦ |
| ೭ | ತಿರುಕನ ಕನಸು | ಮುಪ್ಪಿನ ಷಡಕ್ಷರಿ | ೫೬ |
| ೮ | ಅಭಿಮನ್ಯು ಪರಾಕ್ರಮ | ಕುಮಾರವ್ಯಾಸ | ೬೩ |
| | **ಪೂರಕ ಪಾಠಗಳು** | | |
| ೩ | ಸಾವಿತ್ರಿಬಾಯಿ ಫುಲೆ (ಗದ್ಯ) | ಡಾ. ಎಚ್.ಎಸ್.ಅನುಪಮ | ೭೮ |
| ೪ | ರಮ್ಯ ಸೃಷ್ಟಿ (ಪದ್ಯ) | ಮಧುರಚೆನ್ನ | ೮೧ |
| ೫ | ನನ್ನ ಬಾಲ್ಯ (ಗದ್ಯ) | ಡಾ. ಗಣೇಶ ಅಮೀನಗಡ | ೮೩ |


@KTBS NOT TO BE REPUBLISHED


# ೫. ಪರಿಸರ ಸಮತೋಲನ

I4X5Q7

– ಕೃಷ್ಣಾನಂದ ಕಾಮತ್

**ಪ್ರವೇಶ :** ನಾವು ಇಂದು ಪ್ರತಿಯೊಂದಕ್ಕೂ ಪ್ರಕೃತಿಯನ್ನೇ ಅವಲಂಬಿಸಿದ್ದೇವೆ. ಪ್ರಾಕೃತಿಕ ಪರಿಸರ ಹಾಗೂ ಜೀವಪರಿಸರದ ನಡುವೆ ಅವಿನಾಭಾವ ಸಂಬಂಧವಿದೆ. ನಾವು ನಮ್ಮ ದಿನನಿತ್ಯದ ಅಗತ್ಯಗಳಾದ ಆಹಾರ, ಬಟ್ಟೆ, ಗಾಳಿ, ಬೆಳಕು, ಔಷಧ ಮುಂತಾದ ಜೀವನಾವಶ್ಯಕ ಸಕಲ ಸೌಕರ್ಯಗಳಿಗೂ ಪ್ರಕೃತಿಯೇ ಜೀವನಾಧಾರವಾಗಿದೆ. ಈ ನೈಸರ್ಗಿಕ ಸಂಪತ್ತು ಎಲ್ಲಾ ಜೀವರಾಶಿಗಳನ್ನು ತನ್ನ ಮಡಿಲಿನಲ್ಲಿಟ್ಟುಕೊಂಡು ತಾಯಿಯಂತೆ ಪೋಷಿಸುತ್ತದೆ. ಮಾನವರಾದ ನಾವು ನಮ್ಮ ಅಜ್ಞಾನ, ದುರಾಸೆ, ದುಂದುಗಾರಿಕೆ ಹಾಗೂ ಮೋಜುಮಸ್ತಿಗಳಿಗಾಗಿ ಇಂತಹ ಅಮೂಲ್ಯವಾದ ಪರಿಸರವನ್ನು ನಾಶಮಾಡಿದರೆ ಅಸಮತೋಲನ ಉಂಟಾಗುತ್ತದೆ. ಈ ಸುಂದರ ಭೂಮಿ, ಇಲ್ಲಿನ ಜೀವಜಾಲದ ವ್ಯವಸ್ಥೆ ನಾಶವಾಗಿ ನಮ್ಮ ನಾಶಕ್ಕೆ ನಾವೇ ಪರೋಕ್ಷವಾಗಿ ಕಾರಣವಾಗುತ್ತಿದ್ದೇವೆ. ಆದ್ದರಿಂದ ಈ ಸುಂದರ ಪರಿಸರದ ಸಂರಕ್ಷಣೆಯ ಜವಾಬ್ದಾರಿ ನಮ್ಮ ಮೇಲಿದೆ ಎನ್ನುವ ಸಾಮಾನ್ಯ ಅರಿವು ಎಲ್ಲರದ್ದಾಗಬೇಕು. ಈ ಪರಿಸರದಲ್ಲಿ ಬದುಕುವ ಹಕ್ಕು ನಮಗೆ ಮಾತ್ರವಲ್ಲ ಎಲ್ಲಾ ಪ್ರಾಣಿ, ಪಕ್ಷಿ, ಗಿಡ, ಮರ ಹಾಗೂ ಸಕಲ ಜೀವರಾಶಿಗೂ ಇದೆ ಎಂಬ ಅರಿವು ಅತ್ಯಗತ್ಯ. ಈ ನಿಟ್ಟಿನಲ್ಲಿ ಚಿಂತಿಸಿ ಕಾರ್ಯ ಪ್ರವೃತ್ತರಾಗಬೇಕಾದ ಅನಿವಾರ್ಯತೆಯನ್ನು ಈ ವೈಜ್ಞಾನಿಕ ಲೇಖನದಲ್ಲಿ ಲೇಖಕರು ಮನಮುಟ್ಟುವಂತೆ ವಿವರಿಸಿದ್ದಾರೆ.

© KTBS NOT TO BE REPUBLISHED




ಭೂಮಂಡಲದಲ್ಲಿ ಪ್ರತಿಯೊಂದು ಪ್ರಾಣಿಯೂ ತನಗಿರುವ ಸಂತಾನ ಸಾಮರ್ಥ್ಯವನ್ನು ಬಳಸಿದ್ದರೆ, ಇಲ್ಲವೇ ಅವುಗಳ ಮರಿಗಳೆಲ್ಲಾ ಬದುಕಿ ಇರುವಂತಾಗಿದ್ದರೆ, ಯಾವ ಪ್ರಾಣಿಗೂ ಹೊಟ್ಟೆತುಂಬ ಆಹಾರ ಸಿಗುತ್ತಿರಲಿಲ್ಲ. ಐದು ವರ್ಷಕ್ಕೊಮ್ಮೆ ಒಂದು ಮರಿಗೆ ಜನ್ಮಕೊಡುವ ಆನೆ, ಸಂತತಿ ನಿರ್ಮಿತಿಯಲ್ಲಿ ಅತಿ ಮಂದಗತಿಯದು ಎಂದು ಪರಿಗಣಿಸಿದೆ. ಹೀಗಿದ್ದರೂ ಆನೆಯು ಎಲ್ಲ ಮರಿಗಳೂ ಸರಿಯಾಗಿ ಬೆಳೆದು ಐದು ವರ್ಷಕ್ಕೆ ಒಂದು ಮರಿಗೆ ಜನ್ಮ ಕೊಡುತ್ತಾ ಹೋದರೆ ಒಂದೇ ಶತಮಾನದಲ್ಲಿ ಜಗತ್ತೆಲ್ಲಾ ಆನೆಮಯವಾಗಿ ಹೋಗುತ್ತಿತ್ತು. ಪ್ರತಿಯೊಂದು ಪ್ರಾಣಿಯೂ ತನ್ನ ವಂಶಜರೂ ಬಾಳಬೇಕೆಂದು ಹೆಚ್ಚೆಚ್ಚು ಪ್ರಮಾಣದಲ್ಲಿ ಸಂತಾನ ಅಭಿವೃದ್ಧಿ ಮಾಡುತ್ತದೆ. ಇದರಿಂದಾಗಿ ಆಹಾರ ಆಚ್ಛಾದನಗಳಿಗಾಗಿ ಸ್ಪರ್ಧೆ ಏರ್ಪಡುವುದು.

ಸಾಮರ್ಥ್ಯವುಳ್ಳ ವರ್ಗ ಬದುಕಿ ಬಾಳಿದರೆ ಅಸಮರ್ಥ ಗುಂಪು ನಿರ್ನಾಮವಾಗುತ್ತದೆ. ಉದಾಹರಣೆಗೆ ಒಂದು ಪ್ರದೇಶದಲ್ಲಿ ಕುದುರೆ, ಒಂಟೆ, ಜಿರಾಫೆಗಳು ಬದುಕುತ್ತವೆ ಎಂದಿಟ್ಟುಕೊಳ್ಳೋಣ. ಈ ಮೂರೂ ಪ್ರಾಣಿಗಳು ಹೆಚ್ಚಿನ ಸಂತಾನ ನಿರ್ಮಾಣ ಮಾಡಿದ್ದರಿಂದ ಅಲ್ಲಿದ್ದ ಆಹಾರ ಕಡಿಮೆಯಾಗುತ್ತಾ ಹೋಗುತ್ತದೆ. ಐದಾರು ಅಡಿ ಎತ್ತರದಲ್ಲಿದ್ದ ಪರ್ಣ(ಎಲೆ)ಗಳು ತೀರಿದವೆಂದರೆ ಕುದುರೆಗಳು ಹಸಿವೆಯಿಂದ ಬಳಲಿ ಸಾಯುತ್ತವೆ. ಆದರೆ ಉದ್ದಕತ್ತುಳ್ಳ ಒಂಟೆ–ಜಿರಾಫೆಗಳು ಎಂಟು–ಹತ್ತು ಅಡಿ ಎತ್ತರದಲ್ಲಿರುವ ಪರ್ಣಗಳನ್ನು ತಿಂದು ಬದುಕುತ್ತವೆ. ಅಲ್ಲಿಯ ಆಹಾರ ತೀರಲು ಒಂಟೆಗೂ ಉಪವಾಸ ಕಟ್ಟಿಟ್ಟದ್ದೇ. ಆದರೆ ಜಿರಾಫೆ ಹನ್ನೆರಡು ಅಡಿಗೂ ಎತ್ತರದಲ್ಲಿದ್ದ ಪರ್ಣ ತಿನ್ನುವಷ್ಟು ಉದ್ದ ಕಾಲು, ಗೋಣು ಪಡೆದಿದ್ದರಿಂದ ಆಹಾರ–ಸ್ಪರ್ಧೆಯಲ್ಲಿ ಕೊನೆಗೆ ಇದೇ ವರ್ಗ ಯಶಸ್ವಿಯಾಗುವುದೆಂದು ಒಂದು ಸಿದ್ಧಾಂತ. ಈ ಶತಮಾನದಲ್ಲಿ ಪ್ರಾಣಿ–ಪರಿಸರಗಳ ಸಂಬಂಧ ಕೂಲಂಕಷವಾಗಿ ಅಭ್ಯಸಿಸಿದ್ದರಿಂದ ಮಾನವನು ಅದರ ಸಂಪೂರ್ಣ ಲಾಭ ಪಡೆದುಕೊಳ್ಳಬಹುದು.

ಜಿರಾಫೆ ವರ್ಗದಲ್ಲಿಯೂ ಅತಿಸಂತಾನ ಇರುವುದರಿಂದ ಇವುಗಳಲ್ಲಿಯೂ ಸ್ಪರ್ಧೆ ಇದ್ದೇ ಇರುತ್ತದೆ. ಇಲ್ಲಿ ಜಿರಾಫೆಗಳಿಗೂ ಉದ್ದಕಾಲು, ಉದ್ದಗೋಣು ಇರುವುದರಿಂದ ಅವುಗಳಲ್ಲಿಯ ಸ್ಪರ್ಧೆ, ಕುದುರೆ, ಒಂಟೆಗಳೊಡನೆ ಇರುವ ಸ್ಪರ್ಧೆಗಿಂತ ತೀಕ್ಷ್ಣವಾಗಿರುತ್ತದೆ. ಆದ್ದರಿಂದ ಜಿರಾಫೆಗಳಲ್ಲಿಯೇ ಸ್ವಲ್ಪ ಉದ್ದಕಾಲು, ಗೋಣುಗಳು ಇದ್ದವುಗಳ ವಂಶ ಮುಂದುವರಿಯುವುದೆಂದೂ ಉಳಿದವು ಅಳಿದು ಹೋಗುವುದೆಂದೂ ನಂಬಿದೆ. ಆದರೆ ಆ ಪಿತೃಗಳ ಸಾಧನೆ ವಂಶ ಪರಂಪರಾಗತವಾಗಿ ಮಕ್ಕಳಿಗೆ ಬರುತ್ತದೆ ಎಂಬುದಕ್ಕೆ ಯಾವ ಆಧಾರವೂ ಇಲ್ಲ. ಶತಮಾನಗಳಿಂದ ಕನ್ನಡಿಗರು ವೀಳ್ಯ ಚರ್ವಣದಿಂದ ತುಟಿಗಳನ್ನು ಕೆಂಪು ಮಾಡಿಕೊಂಡರೂ ಅವರ ಮಕ್ಕಳು ಕೆಂದುಟಿ ಪಡೆದೇನು ಹುಟ್ಟುವುದಿಲ್ಲ. ಅದರಂತೆ ಹಿಂದಿನ ಚೀನೀ ಹೆಂಗಳೆಯರು ಶತಮಾನಗಳಿಂದ ತಮ್ಮ ಕಾಲುಗಳನ್ನು ಕೃತಕವಾಗಿ ಕಿರಿದು ಮಾಡಿಕೊಳ್ಳುತ್ತ ಬಂದಿದ್ದರೂ ಅವರ ಮಕ್ಕಳ ಕಾಲು ಕಿರಿದಾಗಲೇ ಇಲ್ಲ! ಇದರಂತೆ ಪ್ರಯೋಗಾಲಯದಲ್ಲಿ ಇಲಿಗಳ ನೂರು ತಲೆಮಾರಿನವರೆಗೆ ಬಾಲಕಡಿದರೂ ಯಾವ ತಲೆಮಾರಿನ ಇಲಿಗಳೂ ಬಾಲವಿಲ್ಲದೆ ಜನಿಸಲೇ ಇಲ್ಲ, ಬಹಳ ಆಳವಾದ ಸಂಶೋಧನೆಯ ಅನಂತರ ಇದಕ್ಕೆ ಉತ್ತರ ಕಂಡುಹಿಡಿಯಲಾಗಿದೆ. ಪ್ರತಿಯೊಂದು ಪ್ರಾಣಿಯ ವ್ಯಕ್ತಿತ್ವವನ್ನು ಅದರ ಪ್ರತಿಯೊಂದು ಜೀವಾಣುವಿನಲ್ಲಿ ಇರುವ ಕ್ರೋಮೋಝೋಮುಗಳು ನಿಯಂತ್ರಿಸುತ್ತವೆ.

ಪ್ರಾಣಿಗಳಂತೆ ಸಸ್ಯಗಳೂ ತಮ್ಮ ವಂಶ ಮುಂದುವರಿಯಬೇಕೆಂದು ಯತ್ನಿಸುವ ವರ್ಗಕ್ಕೆ ಸೇರಿವೆ. ಕೀಟ, ವಾಯು, ನೀರು ಮೊದಲಾದವುಗಳ ಮೂಲಕ ಬೀಜಗಳನ್ನು ವಿತರಣೆ ಮಾಡುತ್ತವೆ. ಈ ಬೀಜಗಳು ಎಲ್ಲ ಭೂಜಲ–ಪ್ರದೇಶದಲ್ಲಿ ಹರಡಿಕೊಂಡರೂ ಅವು ತಮಗೆ ಅನುಕೂಲವಾದ ವಾತಾವರಣ ದೊರೆತರೆ ಮಾತ್ರ ಬೆಳವಣಿಗೆ ಹೊಂದುತ್ತವೆ. ವಿಪುಲವಾದ ನೀರು, ಆರ್ದ್ರತೆ ಇರುವಲ್ಲಿ ದಟ್ಟವಾದ ಕಾಡು ಬೆಳೆದರೆ, ಬಯಲು ಪ್ರದೇಶದಲ್ಲಿ ಜಾಲಿ ಗಿಡಗಳೇ ವೃಕ್ಷರಾಜ ಎನಿಸಿಕೊಳ್ಳುವುವು. ಇವೇ ಬೀಜಗಳು ಮರುಭೂಮಿ, ರಸ್ತೆ, ಕಟ್ಟಡಗಳ ಮೇಲೆ ಬಿದ್ದರೆ ಅವುಗಳ ಬೆಳವಣಿಗೆಗೆ ಅವಕಾಶವೇ ದೊರೆಯುವುದಿಲ್ಲವಾದ್ದರಿಂದ ನಾಶವಾಗುವುವು.

© KTBS NOT TO BE REPUBLISHED



©KTBS NOT TO BE REPUBLISHED

ಮಾನವ ತನ್ನ ಸ್ವಾರ್ಥಕ್ಕಾಗಿ ಎಷ್ಟೋ ಪ್ರಾಣಿಗಳನ್ನು ನಿರ್ನಾಮ ಮಾಡಿದ್ದಾನೆ, ಮಾಡುತ್ತಿದ್ದಾನೆ. ಜೀವಿತ ಪ್ರಾಣಿಗಳಲ್ಲಿಯೇ ದೊಡ್ಡದು ಎನಿಸಿಕೊಂಡ ದೇಹ-ಆಕಾರ ದೊಡ್ಡದಿದ್ದರೂ ಅತಿ ಸಣ್ಣದಾಗಿರುವ ಸಸ್ಯಾಹಾರವನ್ನೇ ಭಕ್ಷಿಸುವ ಮಾನವನಿಗೆ ಯಾವ ರೀತಿಯಿಂದಲೂ ಕೇಡು ಮಾಡದ ತಿಮಿಂಗಿಲಗಳನ್ನು ಅದರ ಕೊಬ್ಬಿಗಾಗಿ ಬೇಟೆಯಾಡಿ ಇಂದು ಅದರ ಜಾತಿಯೇ ನಿರ್ನಾಮವಾಗುವಷ್ಟು ಕಡಿಮೆ ತಿಮಿಂಗಿಲಗಳು ಉಳಿದಿವೆ. ಮೊಸಳೆಗಳ ಚರ್ಮಕ್ಕೆ ಪಾಶ್ಚಾತ್ಯ ಮಹಿಳೆಯರು ಮನಸೋತಿದ್ದಾರೆ ಎಂಬ ಒಂದೇ ಕಾರಣಕ್ಕಾಗಿ ಮೊಸಳೆಗಳನ್ನು ಅತಿಯಾಗಿ ಬೇಟೆಯಾಡಿ ಇಂದು ಕರ್ನಾಟಕದ ಬನ್ನೇರುಘಟ್ಟದಲ್ಲಿ ಮೊಸಳೆಗಳಿಗಾಗಿಯೇ ಮಾಡಿದ ಆಲಯದಲ್ಲಿ ಹೆಚ್ಚಿನ ದಕ್ಷತೆಯಿಂದ ಪಾಲನೆ-ಪೋಷಣೆ ಮಾಡುವ ಪ್ರಸಂಗ ಬರಲಿಲ್ಲವೇ? ಅದರಂತೆ ಹುಲಿ, ಸಿಂಹ, ಚಿರತೆಗಳ ಮೈದೊಗಲು, ಅಪಾರ ಧನ ತರುವುದರಿಂದ ಅವುಗಳನ್ನು ಹೆಚ್ಚಾಗಿ ಬೇಟೆಯಾಡಿದ್ದರಿಂದ ಅವುಗಳ ಸಂತತಿ ಕಡಿಮೆಯಾಗಿದೆ. ಹಾವುಗಳನ್ನಂತೂ ಆಜನ್ಮ ವೈರಿಗಳಂತೆ ಭಾವಿಸಿ ಸಿಕ್ಕಲ್ಲಿ ಕೊಂದು ಕೆಲವು ಜಾತಿಯ ಹಾವುಗಳು ಇಂದು ನಶಿಸಿ ಹೋಗಿದ್ದರಿಂದ ವಿಷಕಾರಿ ಹಾವುಗಳನ್ನು ಸಾಕುವ ಕೇಂದ್ರಗಳನ್ನು ಮುಂಬಯಿ ಮತ್ತು ಮದ್ರಾಸಿನಲ್ಲಿ ಪ್ರಾರಂಭಿಸಬೇಕಾದ ಪ್ರಸಂಗ ಬಂತು.

ಹೊಲಗಳಲ್ಲಿ ಹಾವುಗಳು ಇಲಿಗಳನ್ನು ತಿಂದು ಜೀವಿಸುತ್ತಿದ್ದವು. ಅವುಗಳನ್ನು ನಾಶ ಮಾಡಿದ್ದರಿಂದ ವಿನಾಯಕನ-ವಾಹನಗಳು ಅತಿಯಾಗಿ ಬೆಳೆದು ಗುಲ್ಬರ್ಗಾ ಜಿಲ್ಲೆಯಲ್ಲಿ ಮಾನವನ

ಆಹಾರವನ್ನೇ ಭಕ್ಷಿಸಿ ಅವನು ಹೌಹಾರುವಂತೆ ಮಾಡಿವೆ. ಟ್ರಾಂವ್ ಟ್ರಾಂವ್ ಎಂದು ಹಾಡಿ ಮಳೆರಾಯನನ್ನು ಬರ ಮಾಡಿಕೊಳ್ಳುವ ಕಪ್ಪೆಯರಸನ ಮೇಲೆ ಮಾನವನು ಕೊಲೆಗಡುಕನ ಕತ್ತಿಯನ್ನೆತ್ತಿದ್ದಾನೆ. ಅವುಗಳ ಕಾಲುಗಳಿಗೆ ಪಾಶ್ಚಾತ್ಯ ದೇಶದಲ್ಲಿ ಬೇಡಿಕೆ ಇರುವುದರಿಂದ ಅವುಗಳನ್ನು ಸಿಕ್ಕಲ್ಲಿ ಹಿಡಿದು ಕೊಂದು ಕಿಸೆ ತುಂಬಿಸಿಕೊಳ್ಳುತ್ತಿದ್ದಾನೆ. ಮಾನವನು ಬೆಳೆದ ಆಹಾರ ಧಾನ್ಯದಲ್ಲಿ ಶೇಕಡ ೧೦-೧೫ರಷ್ಟು ಬೆಳೆಗಳನ್ನು ಕ್ರಿಮಿಕೀಟಗಳು ನಾಶ ಮಾಡುತ್ತವೆ ಎಂದು ಲೆಕ್ಕಾಚಾರ ಹಾಕಿದ್ದಾರೆ. ಒಂದು ಕಪ್ಪೆ ದಿನವೊಂದಕ್ಕೆ ೧೦೦-೨೦೦ತನಕ ಕ್ರಿಮಿಕೀಟಗಳನ್ನು ಭಕ್ಷಿಸಿ ಎಷ್ಟೋ ಆಹಾರ ಧಾನ್ಯವನ್ನು ಸಂರಕ್ಷಿಸುತ್ತದೆ. ಈಗ ಅವುಗಳ ಹತ್ಯೆಯನ್ನು ಪ್ರಾರಂಭಿಸಿದರೆ ಅನ್ನದೇವರು ಮೆಚ್ಚುವನೇ?

ಒಂದು ದಟ್ಟವಾದ ಕಾಡನ್ನು ಮಾನವ ಕಡಿದನೆಂದು ಇಟ್ಟುಕೊಳ್ಳೋಣ. ಅಲ್ಲಿದ್ದ ಹಕ್ಕಿಗಳು ಬೇರೆ ತಾಣ ಹುಡುಕಿಕೊಳ್ಳಬೇಕಾಗುತ್ತದೆ. ಮೇವು ಇಲ್ಲದ್ದರಿಂದ ಚಿಗರೆಗಳು ಮಾಯವಾಗುತ್ತವೆ. ಚಿಗರೆಗಳನ್ನು ಬೇಟೆಯಾಡಿ ಜೀವಿಸಿದ್ದ ಹುಲಿ, ಚಿರತೆ, ಸಿಂಹಗಳೂ ತೊಲಗಬೇಕಾಗುತ್ತದೆ. ಅವಿತುಕೊಳ್ಳಲು ಮರೆ ಇಲ್ಲದ್ದರಿಂದ ತೋಳ-ಕರಡಿಗಳು ಓಡಿಹೋಗುತ್ತವೆ. ಹಣ್ಣು-ಹಂಪಲುಗಳು ಸಿಗದಿದ್ದರಿಂದ ಇಣಚಿ-ಕಣ್ಣು ಕಪ್ಪಡಿಗಳು ಪ್ರಯಾಣ ಬೆಳೆಸುತ್ತವೆ. ಬೋಳು ಮಾಡಿದ ಕಾಡಿನಲ್ಲಿ ವಾಸಿಸಿ ಏನು ಪ್ರಯೋಜನವೆಂದು ಇಲಿಗಳೂ ಹೊರಡುತ್ತವೆ. ಇಲಿಗಳನ್ನು ನಂಬಿದ್ದ ಹಾವೂ ಹಿಂಬಾಲಿಸುತ್ತದೆ. ಕೊರೆಯುವ ಚಳಿ, ಸುಡುವ ಬಿಸಿಲು, ಹರಿವ ನೀರಿಗೆ ನೆಲದೊಳಗಿನ ಪ್ರಾಣಿಗಳು ಸಾವಿಗೀಡಾಗುತ್ತವೆ. ಇಂತಹ ಭೂಮಿಯನ್ನು ಹೊಲಗಳಿಗೆ ಬಳಸಿದರೆ ಅಲ್ಲಿ ಹೊಸ ಪ್ರಾಣಿಗಳು ಬೀಡು ಬಿಡುವುವು.

ಮಾನವನು ವಿಮಾನ, ರೈಲ್ವೇ, ಮೋಟಾರು ನಿಲ್ದಾಣಗಳನ್ನು ಕಟ್ಟುವುದರಿಂದ, ಹೆದ್ದಾರಿಗಳನ್ನು ಮಾಡುವುದರಿಂದ ಬಹಳ ಕಾಲದಿಂದ ಇದ್ದ ಸರೋವರ, ಕೆರೆ, ಹೊಂಡಗಳನ್ನು ಬೇರೆಯೇ ಕೆಲಸಕ್ಕೆ ಬಳಸುವುದು ವಾಡಿಕೆ. ಆದ್ದರಿಂದ ಕಾರ್ಖಾನೆ-ಊರುಗಳನ್ನು ಬೆಳೆಸುವುದಕ್ಕೆ ಕಾಡು-ಗಿಡ-ಗಂಟಿಗಳನ್ನು ಕಡಿಯುವುದರಿಂದ ಆಗುವ ಲಾಭಕ್ಕಿಂತ ಹಾನಿಯೇ ಹೆಚ್ಚು ಎಂಬುದು ಜನಸಾಮಾನ್ಯರಿಗೆ ಅರಿವಾಗುವುದೇ ಇಲ್ಲ. ಆದ್ದರಿಂದ ಅಧಿಕಾರದಲ್ಲಿದ್ದವರು, ಅದಕ್ಕಿಂತ ಮಿಗಿಲಾಗಿ ಮುಂದಿನ ಪೀಳಿಗೆಗೆ ಇಂದೇ ಯೋಜನೆಯನ್ನು ತಯಾರಿಸುವ ವಿಜ್ಞಾನಿಗಳು ನಿಸರ್ಗದ ಆಗುಹೋಗುಗಳನ್ನು ವಿವರವಾಗಿ ಅಭ್ಯಸಿಸಿ ಮಾನವನ ಚಟುವಟಿಕೆ ಮಾನವನಿಗೇ ಕಂಟಕಪ್ರಾಯವಾಗದಂತೆ ಮುನ್ನೆಚ್ಚರಿಕೆ ವಹಿಸಿ, ವಿಧಾಯಕವಾಗಿ ಕಾರ್ಯಕ್ರಮಗಳನ್ನು ಕೈಗೊಂಡರೆ ಮಾತ್ರ ಈ ಹಿಂದೆ ಮಾಡಿದ ತಪ್ಪುಗಳೆಲ್ಲಾ ಮುಂದೆಯೂ ಆಗುವುದು ನಿಂತೀತು.

© KTBS NOT TO BE REPUBLISHED


**ಕೌಶಲ :** ಮಾತನಾಡುವುದು.

**ಸಾಮರ್ಥ್ಯ : ವಿಷಯಾನುಸಾರ ಸಹಜ ಚರ್ಚೆ, ಸಂವಾದ ವಿವರಣೆಗಳೊಂದಿಗೆ ಮಾತನಾಡುವುದು.**

**ಆಶಯ :** ಪ್ರಕೃತಿ ಒಂದು ಅದ್ಭುತ ಸೃಷ್ಟಿ. ಪ್ರಕೃತಿಯಲ್ಲಿ ಕ್ರಿಮಿ, ಕೀಟ, ಪ್ರಾಣಿ, ಪಕ್ಷಿಗಳು ಒಂದು ಮಿತಿಯಲ್ಲಿದ್ದರೆ ಮಾತ್ರ ಪರಿಸರ ಸಮತೋಲನವಾಗಿರುತ್ತದೆ, ಇಲ್ಲದಿದ್ದರೆ ಪರಿಸರದಲ್ಲಿ ಅಸಮತೋಲನವುಂಟಾಗಿ ಜೀವರಾಶಿಗಳಿಗೆಲ್ಲ ಅಪಾಯ ಕಟ್ಟಿಟ್ಟದ್ದು. ಎಲ್ಲಾ ಪ್ರಾಣಿ ಪಕ್ಷಿಗಳು ತಮ್ಮ ಸಂತತಿ ವೃದ್ಧಿಸಿಕೊಳ್ಳಲು ಪ್ರಯತ್ನಿಸುತ್ತವೆ. ಜನಿಸಿದ ಎಲ್ಲಾ ಪ್ರಾಣಿ ಪಕ್ಷಿಗಳು ಉಳಿಯುವುದಿಲ್ಲ. ಅವು ಬದುಕಿಗಾಗಿ ಇತರ ಪ್ರಾಣಿ ಪಕ್ಷಿಗಳೊಂದಿಗೆ ಹೋರಾಟ ನಡೆಸಿ, ಶಕ್ತಿಯುತವಾದವು ಉಳಿಯುತ್ತವೆ. ದುರ್ಬಲ ಪ್ರಾಣಿಗಳು ನಶಿಸಿ ಹೋಗುತ್ತವೆ. ಬದುಕುಳಿದ ಪ್ರಾಣಿ ಪಕ್ಷಿಗಳನ್ನು ಮಾನವ ದುರಾಸೆ, ಮೋಜು ಅಥವಾ ಹೊಟ್ಟೆಪಾಡಿಗಾಗಿ ನಾಶಮಾಡುತ್ತಿದ್ದಾನೆ. ಜನಸಂಖ್ಯಾ ಏರಿಕೆ, ಕೈಗಾರಿಕೀಕರಣ, ನಗರೀಕರಣ, ಆಧುನೀಕರಣಗಳ ಭರಾಟೆಯಲ್ಲಿ ಸುಂದರ ಸಸ್ಯ – ಪ್ರಾಣಿ – ಪಕ್ಷಿಸಂಕುಲ ನಶಿಸಿ ಹೋಗುತ್ತಿದೆ. ನಾವು ಬದುಕಿ ಇತರರನ್ನು ಬದುಕಲು ಬಿಡಬೇಕು. ನಾಳಿನ ಸುಂದರ ಬದುಕನ್ನು ಮುಂದಿನ ಪೀಳಿಗೆ ಕಾಣಬೇಕೆಂಬುದು ಎಲ್ಲರ ಸದಾಶಯವಾಗಬೇಕು. ಇದೇ ಪಾಠದ ಮುಖ್ಯ ಭಾವ.

NOT TO BE REPUBLISHED @KTBS

## ಕೃತಿಕಾರರ ಪರಿಚಯ



**ಡಾ. ಕೃಷ್ಣಾನಂದ ಕಾಮತ್** ಅವರು **ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ೨೯.೦೯.೧೯೩೪** ರಲ್ಲಿ ಜನಿಸಿದರು. ೧೯೫೫ ರಲ್ಲಿ ಎಂ.ಎಸ್ಸಿ. ಪದವಿಯಲ್ಲಿ ಉತ್ತೀರ್ಣರಾದ ಕಾಮತ್ ಅವರು ಕರ್ನಾಟಕ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇವೆ ಪ್ರಾರಂಭಿಸಿದರು. ೧೯೬೧ ರಲ್ಲಿ ಡಾಕ್ಟರೇಟ್ ಪದವಿ ಪಡೆದರು. ಉದಯಪುರ ಮತ್ತು ಪಶ್ಚಿಮ ಬಂಗಾಳದ ಪ್ಲಾಸಿಯಲ್ಲಿ ಕಾಮನ್ ವೆಲ್ತ್ ಇನ್ಸ್‌ಟ್ಯೂಟ್ ಆಫ್ ಬಯಲಾಜಿಕಲ್ ಕಂಟ್ರೋಲ್ ಸಂಸ್ಥೆಯ ಕೀಟ ಸಂಶೋಧನಾಧಿಕಾರಿ ಮತ್ತು ಮುಖ್ಯಸ್ಥರಾಗಿ ಸೇವೆ ಸಲ್ಲಿಸಿರುವರು. ಬೆಂಗಳೂರಿನಲ್ಲಿ ವೈಜ್ಞಾನಿಕ ಛಾಯಾಗ್ರಹಣ ಲ್ಯಾಬೊರೇಟರಿ ಪ್ರಾರಂಭಿಸಿ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಚಿತ್ರಗಳ ಛಾಯಾಗ್ರಹಣ ಮಾಡಿದ್ದಾರೆ. ಡಾ. ಕೃಷ್ಣಾನಂದ ಕಾಮತ್ ಅವರ ಕೃತಿಗಳೆಂದರೆ – **ನಾನೂ ಅಮೆರಿಕಾಗೆ ಹೋಗಿದ್ದೆ, ಪ್ರಾಣಿ ಪರಿಸರ, ಕೀಟ ಜಗತ್ತು, ಪಶು ಪಕ್ಷಿ ಪ್ರಪಂಚ, ಸಸ್ಯ ಪರಿಸರ, ಇರುವೆಯ ಇರವು, ಸರ್ಪ ಸಂಕುಲ ಮತ್ತು ಕಾವಿ ಕಲೆ** ಇತ್ಯಾದಿ. ಇವರಿಗೆ **ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ** ಲಭಿಸಿದೆ. ೨೦.೦೨. ೨೦೦೨ ರಂದು ಇಹಲೋಕ ತ್ಯಜಿಸಿದರು.

## ಪದಗಳ ಅರ್ಥ

ಆಚ್ಛಾದನ – ಬಟ್ಟೆ, ವಸ್ತ್ರ; ಪರ್ಣ – ಎಲೆ; ಗೋಣು – ಕುತ್ತಿಗೆ; ಪಿತೃ – ತಂದೆ; ವೀಳ್ಯ – ತಾಂಬೂಲ (ಎಲೆ, ಅಡಿಕೆ); ಚರ್ವಣ – ಅಗಿದು ತಿನ್ನುವುದು; ಶತಮಾನ – ನೂರು ವರ್ಷಗಳು; ಕ್ರೋಮೋಜೋಮು – ವರ್ಣತಂತು; ರಾಜಿ – ಗುಂಪು; ವಿಪುಲ – ಹೆಚ್ಚು, ಜಾಸ್ತಿ; ಆರ್ದ್ರತೆ – ನೀರಿನ ಅಂಶ, ತೇವಾಂಶ; ಪಾಶ್ಚಾತ್ಯ – ಪಶ್ಚಿಮದೇಶ; ಕಿಸೆ– ಜೇಬು; ತಾಣ– ಜಾಗ, ಸ್ಥಳ; ಚಿಗರೆ – ಜಿಂಕೆ; ಅವಿತು – ಬಚ್ಚಿಟ್ಟುಕೊಳ್ಳುವುದು; ಕಣ್ಣು ಕಪ್ಪಡಿ – ಬಾವಲಿ; ವಿಧಾಯಕ– ರಚನಾತ್ಮಕ.

## ಭಾಷಾಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಆನೆ ಎಷ್ಟು ವರ್ಷಕ್ಕೊಮ್ಮೆ ಮರಿ ಹಾಕುತ್ತದೆ?

೨. ಪ್ರಾಣಿ – ಪ್ರಾಣಿಗಳ ನಡುವೆ ಯಾವುದಕ್ಕಾಗಿ ಸ್ಪರ್ಧೆ ನಡೆಯುತ್ತದೆ?

೩. ಬೀಜ ಪ್ರಸರಣ ಯಾವುದರ ಮೂಲಕ ನಡೆಯುತ್ತದೆ?

೪. ದಟ್ಟವಾದ ಕಾಡು ಎಲ್ಲಿ ಬೆಳೆಯುತ್ತದೆ?

೫. ಎಲ್ಲಿ ಬಿದ್ದ ಬೀಜಗಳು ನಾಶವಾಗುತ್ತವೆ?

೬. ಪ್ರಾಣಿಗಳಲ್ಲಿಯೇ ದೊಡ್ಡ ಪ್ರಾಣಿ ಯಾವುದು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಜಿರಾಫೆ ಹೇಗೆ ಆಹಾರ ಸ್ಪರ್ಧೆಯಲ್ಲಿ ಯಶಸ್ವಿಯಾಗುತ್ತದೆ?

೨. ವನ್ಯಜೀವಿ ಸಂರಕ್ಷಣೆಯನ್ನು ಹೇಗೆ ಮಾಡುತ್ತಿದ್ದಾರೆ?

೩. ಸರೋವರ, ಕೆರೆ ಮತ್ತು ಹೊಂಡಗಳು ಬೇರೆ ಕೆಲಸಕ್ಕೆ ಬಳಕೆಯಾಗುತ್ತಿವೆ, ಏಕೆ?

೪. ಯೋಜನೆ ತಯಾರಿಸುವ ವಿಜ್ಞಾನಿಗಳು ಯಾವ ರೀತಿಯ ಮುನ್ನೆಚ್ಚರಿಕೆ ವಹಿಸಬೇಕು?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ.**

೧. ಮೊಸಳೆ, ಹಾವುಗಳ ಸಂರಕ್ಷಣಾ ಕ್ರಮಗಳನ್ನು ತಿಳಿಸಿ.

೨. ಕಾಡನ್ನು ನಾಶ ಮಾಡುವುದರಿಂದ ಆಗುವ ದುಷ್ಪರಿಣಾಮಗಳೇನು?

© KTBS NOT TO BE REPUBLISHED

**ಈ. ಕೊಟ್ಟಿರುವ ಪದಗಳನ್ನು ಬಳಸಿ ಅರ್ಥಪೂರ್ಣ ವಾಕ್ಯಗಳನ್ನು ರಚಿಸಿ.**

ನಿರ್ಮಾಣ ಶತಮಾನ ಮನಸೋಲು ಹಿಂಬಾಲಿಸು

## ಭಾಷಾಚಟುವಟಿಕೆ

**ಅ. ಕೆಳಗಿನ ಗಾದೆ ಮಾತುಗಳನ್ನು ಪೂರ್ಣಗೊಳಿಸಿ.**

೧. ದೂರದ ಬೆಟ್ಟ __________

೨. ಹಿತ್ತಲ ಗಿಡ __________

೩. ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ __________

೪. ಕೂತು ಉಣ್ಣುವವನಿಗೆ __________

೫. ಹಸು ಕಪ್ಪಾದರೆ __________

**ಆ. ಪ್ರಾಣಿಗಳ ಹೆಸರುಗಳನ್ನು ಆವರಣದಲ್ಲಿ ನೀಡಲಾಗಿದೆ. ಇವುಗಳಲ್ಲಿ ಸಸ್ಯಾಹಾರಿ ಪ್ರಾಣಿಗಳು ಮಾಂಸಾಹಾರಿ ಪ್ರಾಣಿಗಳು ಹಾಗೂ ಮಿಶ್ರಾಹಾರಿ ಪ್ರಾಣಿಗಳನ್ನು ವರ್ಗೀಕರಿಸಿ ಬರೆಯಿರಿ.**

(ಹುಲಿ, ನಾಯಿ, ಚಿರತೆ, ಆನೆ, ಮೊಲ, ಸಿಂಹ, ಜಿಂಕೆ, ತೋಳ, ಹಸು, ಒಂಟೆ, ಬೆಕ್ಕು, ಕುದುರೆ, ಮಾನವ, ಮೊಸಳೆ)

**ಇ. ಕೆಳಗೆ ಸಸ್ಯಗಳಿಗೆ ಸಂಬಂಧಿಸಿದ ಮತ್ತು ನೀರಿಗೆ ಸಂಬಂಧಿಸಿದ ಪದಗಳನ್ನು ನೀಡಲಾಗಿದೆ. ಸಸ್ಯಗಳಿಗೆ ಸಂಬಂಧಿಸಿದ ಪದಗಳಿಗೆ ನೀಲಿ ಶಾಯಿಯಲ್ಲೂ ನೀರಿಗೆ ಸಂಬಂಧಿಸಿದ ಪದಗಳಿಗೆ ಕೆಂಪು ಶಾಯಿಯಲ್ಲೂ ವೃತ್ತ ಹಾಕಿ, ಎರಡೂ ಗುಂಪಿನ ಪದಗಳನ್ನು ಪ್ರತ್ಯೇಕವಾಗಿ ಅಕಾರಾದಿ ಕ್ರಮದಲ್ಲಿ ಜೋಡಿಸಿ.**

| | | | | | |
|---|---|---|---|---|---|
| ಚಿಗುರು | ಬಳ್ಳಿ | ಪ್ರವಾಹ | ತೆಂಗು | ಜಲಪಾತ | ಭತ್ತ |
| ಬಾವಿ | ಬೇರು | ನದಿ | ಸೊಪ್ಪು | ಹೊಲ | ಕಡಲು |
| ಗದ್ದೆ | ಗರಿಕೆ | ನಲ್ಲಿ | ರೆಂಬೆ | ಸರೋವರ | ಕೊಂಬೆ |
| ತಳಿರು | ಕೊಳ | ಗರಿಕೆ | ಬಳ್ಳಿ | ಹೊಳೆ | ಕಾಂಡ |
| ಹಳ್ಳ | ಪತ್ರೆ | ಅಣೆಕಟ್ಟು | ಮಲ್ಲಿಗೆ | ಹೊಂಡ | ಕಣಿವೆ |

© KTBS NOT TO BE REPUBLISHED

## ಚಟುವಟಿಕೆ

೧. ಕಾಡು ನಾಶವಾಗುವುದರಿಂದ ಉಂಟಾಗುವ ತೊಂದರೆಗಳನ್ನು ಪಟ್ಟಿ ಮಾಡಿ.

೨. ಗಿಡ-ಮರ, ಸೂರ್ಯೋದಯ, ಪ್ರಾಣಿ ಪಕ್ಷಿಗಳು ಇರುವಂತೆ ಕಲ್ಪಿಸಿಕೊಂಡು ಪ್ರಕೃತಿ ಚಿತ್ರವನ್ನು ಬರೆಯಿರಿ.

೩. ಪರಿಸರ ಸಂರಕ್ಷಣೆಯ ಅವಶ್ಯಕತೆ ಕುರಿತು ಒಂದು ಪ್ರಬಂಧವನ್ನು ಬರೆಯಿರಿ.

## ವ್ಯಾಕರಣ ಮಾಹಿತಿ

### ಕನ್ನಡ ಸಂಧಿಗಳು

ಒಂದು ಊರಲ್ಲಿ ಒಬ್ಬ ಜಿಪುಣ ವ್ಯಕ್ತಿ ಇದ್ದನು. ಅವನಿಗೆ ಹಣದಾಸೆ ಬಹಳ. ಅವನ ಬಳಿ ಒಂದು ಕೋಳಿ ಇತ್ತು. ಅದು ಚಿನ್ನದ ಮೊಟ್ಟೆಯಿಡುತ್ತಿತ್ತು. ಹಾಗಾಗಿ ಅವನು ಅದನ್ನು ಊರಾಚೆಗಿನ ಬೆಟ್ಟದಾವರೆಯ ಕೊಳದ ಬಳಿ ಬಚ್ಚಿಟ್ಟಿದ್ದನು. ಅದು ದಿನವೊಂದಕ್ಕೆ ಒಂದೊಂದು ಮೊಟ್ಟೆಯಂತೆ ನೂರಾರು ಮೊಟ್ಟೆಗಳನ್ನು ಕೊಟ್ಟಿತ್ತು. ಆದರೂ ಅವನಿಗೆ ಆಸೆ. ಅದನ್ನು ಕೊಂದುಬಿಟ್ಟರೆ ಅದರ ಹೊಟ್ಟೆಯೊಳಗೆ ತುಂಬಾ ಚಿನ್ನದ ಮೊಟ್ಟೆ ಸಿಗಬಹುದು ಎಂದುಕೊಂಡು ಒಂದು ದಿನ ಕೊಂದುಬಿಟ್ಟನು. ಮುಂದೇನಾಯಿತು ಯೋಚಿಸಿ.

ಊರಲ್ಲಿ, ಮೊಟ್ಟೆಯಿಡು, ಬೆಟ್ಟದಾವರೆ ಮೊದಲಾದ ಪದಗಳನ್ನು ಊರು, ಅಲ್ಲಿ, ಮೊಟ್ಟೆ, ಇಡು, ಬೆಟ್ಟ, ತಾವರೆ ಎಂದು ಓದಬಹುದಾದರೂ ನಾವು ಮಾತನಾಡುವಾಗ ಸುಲಭವಾಗಲು ಈ ಪದಗಳನ್ನು ಕೂಡಿಸಿ ಊರಲ್ಲಿ, ಮೊಟ್ಟೆಯಿಡು, ಬೆಟ್ಟದಾವರೆ ಇತ್ಯಾದಿಯಾಗಿ ಓದುತ್ತೇವೆ. ಹೀಗೆ ಪದಗಳನ್ನು ಎಡೆಬಿಡದೆ ಒಟ್ಟಿಗೆ ಕೂಡಿಸಿ ಓದುವುದಕ್ಕೆ ಅಥವಾ ಹೇಳುವುದಕ್ಕೆ 'ಸಂಧಿ' ಎಂದು ಹೆಸರು.

ಈ ಪದಗಳನ್ನು ಸೇರಿಸಿ ಹೇಳುವಾಗ ಆ ಪದಗಳಲ್ಲಿ ಇರುವ ಅಕ್ಷರಗಳಲ್ಲಿ ಒಂದು ಅಕ್ಷರ ಬಿಟ್ಟುಹೋಗಬಹುದು (ಉದಾಹರಣೆ ಗಮನಿಸಿ), ಇಲ್ಲವೇ ಇರುವ ಅಕ್ಷರಗಳ ಜೊತೆಗೆ ಒಂದು ಅಕ್ಷರ ಹೊಸದಾಗಿ ಸೇರಿಕೊಳ್ಳಬಹುದು ಅಥವಾ ಒಂದು ಅಕ್ಷರದ ಬದಲಿಗೆ ಮತ್ತೊಂದು ಅಕ್ಷರ ಬರಬಹುದು. ಹೀಗೆ ಸಂಧಿಯಾಗುವಾಗ ಅಕ್ಷರಗಳು ಲೋಪವಾಗುವುದು, ಅಕ್ಷರ ಬಂದು ಸೇರುವುದು ಅಥವಾ ಒಂದು ಅಕ್ಷರದ ಬದಲಿಗೆ ಮತ್ತೊಂದು ಅಕ್ಷರ ಬಂದು ಸೇರುವುದಕ್ಕೆ 'ಸಂಧಿಕಾರ್ಯ' ಎನ್ನುವರು.

© KTBS NOT TO BE REPUBLISHED

## ಕನ್ನಡ ಸಂಧಿಗಳು

ಎರಡು ಕನ್ನಡ ಶಬ್ದಗಳು ಅಥವಾ ಕನ್ನಡ–ಸಂಸ್ಕೃತ ಶಬ್ದಗಳು ಸೇರಿದಾಗ ಪರಸ್ಪರ ಎದುರಾದ ಅಕ್ಷರಗಳ ನಡುವೆ ಸಂಧಿಯಾದರೆ ಕನ್ನಡ ಸಂಧಿಯಾಗುತ್ತದೆ.

ಕನ್ನಡ ಸಂಧಿಗಳಲ್ಲಿ ಮೂರು ವಿಧ

೧. **ಲೋಪಸಂಧಿ :** ಸಂಧಿಯಾಗುವಾಗ ಅಕ್ಷರ ಲೋಪವಾದರೆ ಅದನ್ನು 'ಲೋಪಸಂಧಿ' ಎನ್ನುವರು. ಉದಾ: ಊರು+ಅಲ್ಲಿ = ಊರಲ್ಲಿ

೨. **ಆಗಮ ಸಂಧಿ :** ಸಂಧಿಯಾಗುವಾಗ ಒಂದು ಅಕ್ಷರ ಹೊಸದಾಗಿ ಬಂದರೆ ಅದನ್ನು 'ಆಗಮ ಸಂಧಿ' ಎನ್ನುವರು. ಉದಾ: ಮೊಟ್ಟೆ+ಇಡು=ಮೊಟ್ಟೆಯಿಡು.

೩. **ಆದೇಶ ಸಂಧಿ :** ಸಂಧಿಯಾಗುವಾಗ ಒಂದು ಅಕ್ಷರದ ಬದಲಿಗೆ ಮತ್ತೊಂದು ಅಕ್ಷರ ಬಂದರೆ ಅದನ್ನು 'ಆದೇಶ ಸಂಧಿ' ಎನ್ನುವರು. ಉದಾ: ಬೆಟ್ಟ+ತಾವರೆ = ಬೆಟ್ಟದಾವರೆ

### ಅಭ್ಯಾಸ

**ಅ. ಕೆಳಗಿನ ವಾಕ್ಯಗಳಲ್ಲಿ ಸಂಧಿಯಾಗಿರುವ ಪದಗಳನ್ನು ಗುರುತಿಸಿ, ಸಂಧಿಯ ಹೆಸರು ತಿಳಿಸಿ.**

ಉದಾ: ನೀನೇಕೆ ನಮ್ಮೊಡನೆ ಊರಿಗೆ ಬರುವುದಿಲ್ಲ?

ನೀನೇಕೆ, ನಮ್ಮೊಡನೆ, ಊರಿಗೆ – ಲೋಪಸಂಧಿ

೧ ಹಾಸಿಗೆಯಿದ್ದಷ್ಟು ಕಾಲನ್ನು ಚಾಚು.

೨ ದೇವನೊಲಿದಾತನೇ ಜಾತ ಸರ್ವಜ್ಞ.

೩ ಬಾಯಿದ್ದವರು ಬರದಲ್ಲೂ ಬದುಕಿದರು.

©KTBS NOT TO BE REPUBLISHED

# ೬. ಚಗಳಿ ಇರುವೆ

– ಕೆ.ಪಿ. ಪೂರ್ಣಚಂದ್ರ ತೇಜಸ್ವಿ

**ಪ್ರವೇಶ :** ಕನ್ನಡದ ಪ್ರಖ್ಯಾತ ಸಾಹಿತಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಪ್ರಸಿದ್ಧ ಮಿಲೇನಿಯಮ್ ಸರಣಿಯ ಪುಸ್ತಕಗಳಲ್ಲಿ ಐದನೆಯ 'ಪುಸ್ತಕ' 'ನೆರೆಹೊರೆ ಗೆಳೆಯರು'. ಅದರಲ್ಲಿ ಒಂದು ಬರೆಹ 'ಮೂರು ಇರುವೆಗಳು'. ಇದರಲ್ಲಿ ತೇಜಸ್ವಿಯವರು ಒಂದು ಪ್ರಸಂಗವನ್ನು ಹೀಗೆ ವಿವರಿಸುತ್ತಾರೆ.

"ಒಂದು ದಿನ ನಾನು, ನನ್ನ ತಮ್ಮ ಚೈತ್ರ ಮೈಸೂರಿನಲ್ಲಿ ಮನೆ ಮುಂದೆ ಇದ್ದ ಪನ್ನೇರಲು ಮರ ಹತ್ತಿ ಹಣ್ಣುಗಳಿವೆಯೇ ಎಂದು ಹುಡುಕುತ್ತಿದ್ದಾಗ ಇದ್ದಕ್ಕಿದ್ದಂತೆ ಇರುವೆಗಳ ದಂಡೊಂದು ನಮ್ಮ ಮೇಲೆ ಎರಗಿತು. ಮರದ ಮೇಲೆ ಎಲ್ಲಿಂದ ಬಂತು ಇರುವೆ ಎಂದು ಅತ್ತಿತ್ತ ನೋಡಿದೆ. ಕೊಂಬೆಗಳ ಮೇಲೆ ಸಾಲು ಸಾಲಾಗಿ ಕೆಂಪು ಇರುವೆಗಳು ನಮ್ಮತ್ತ ನುಗ್ಗುತ್ತಿದ್ದವು. ಅಲ್ಲದೆ ನಮ್ಮ ತಲೆಯ ಮೇಲೆ ಎಲೆಗಳನ್ನೆ ಸುತ್ತಿ ಮಾಡಿದ ದೊಡ್ಡ ಗಂಟಿನಿಂದ ಇರುವೆಗಳು ತುಪು ತುಪು ಉದುರುತ್ತಿದ್ದವು. ಸಾವಿರಾರು ಇರುವೆಗಳು ಇದ್ದುದರಿಂದ ಕಚ್ಚುತ್ತಿದ್ದ ಅವನ್ನು ಹೊಸಕಿ ಹಾಕಿ ಮುಯ್ಯಿ ತೀರಿಸಲು ಸಾಧ್ಯವಿರಲಿಲ್ಲ. ಕೊಂಬೆಯಿಂದ ಒಂದೇ ಏಟಿಗೆ ಕೆಳಗೆ ಹಾರಿ ಮೈ ಕೈಯೆಲ್ಲಾ ಮುತ್ತಿಕೊಂಡು ಕಚ್ಚುತ್ತಿದ್ದ ಇರುವೆಗಳನ್ನು ಕೊಡವಿಕೊಂಡೆವು. ಗೂಡಿನಿಂದ ಇರುವೆಗಳು ಹೊರಬಂದು ಗೂಡಿನ ಮೇಲೆಲ್ಲ ನೆರೆದಿದ್ದರಿಂದ ಹಸುರೆಲೆಗಳನ್ನು ಅಂಟಿಸಿ ಮಾಡಿದ್ದ ಗೂಡು ಈಗ ಕೆಂಪಗೆ ಕಾಣುತ್ತಿತ್ತು.

ಅಂಗಿಯ ಒಳಗೆ, ಚಡ್ಡಿಯ ಒಳಗೆ, ಎಲ್ಲ ಕಡೆಯೂ ಸೇರಿಕೊಂಡು ಕಚ್ಚುತ್ತಿದ್ದ ಅವನ್ನು ಆ ಮರದಿಂದ ಹೇಗಾದರೂ ಉಚ್ಚಾಟಿಸಲೇಬೇಕೆಂದು ದೃಢನಿಶ್ಚಯ ಮಾಡಿ ಮರವನ್ನು ಗಟ್ಟಿಯಾಗಿ ಹಿಡಿದು ಅಲ್ಲಾಡಿಸತೊಡಗಿದೆವು. ಆಗ ಗೂಡಿನಿಂದ ಧಾರಾಕಾರವಾಗಿ ಇರುವೆಗಳು ಹೊರಬಂದು ದಾಳಿಗೆ ಸಜ್ಜಾದವು.

ನಮ್ಮ ಪ್ರಯತ್ನ ಸತತವಾಗಿ ಮುಂದುವರಿಯಿತು. ಗೂಡಿಗೆ ಅಂಟಿಸಿದ್ದ ಎಲೆಗಳು ಬೇರೆ ಬೇರೆಯಾಗಿ ಇರುವೆಗಳು ಎಲ್ಲಾ ಉದುರಿ ಬಿದ್ದು ಹರಿದಾಡತೊಡಗಿದವು. ಇರುವೆಗಳಿಗೆ ತಕ್ಕ ಶಾಸ್ತಿಯಾಯಿತೆಂದು ನಮಗೆ ಸಮಾಧಾನವಾಯಿತು. ನಮ್ಮ ತಂದೆಯವರಿಗೆ ನಾವು ಈ ವಿಷಯ ತಿಳಿಸಿದಾಗ ಅವು ಚಗಳಿ ಇರುವೆಗಳೆಂದೂ ಮಲೆನಾಡಿನಲ್ಲಿ ಅವುಗಳ ಮೊಟ್ಟೆ ಮರಿಗಳನ್ನೆಲ್ಲಾ ಹಿಡಿದು ಅರೆದು ಚಟ್ನಿ ಮಾಡಿ ಊಟಕ್ಕೆ ನಂಚಿಕೊಳ್ಳುತ್ತಾರೆಂದೂ ಹೇಳಿದರು."

ಅವರೇ ವಿವರಿಸಿದಂತೆ ಮಲೆನಾಡಿಗರ ಪ್ರಿಯ ಇರುವೆಗಳ ಪರಿಚಯ ಈ "ಚಗಳಿ ಇರುವೆ" ಪಾಠ.

© KTBS NOT TO BE REPUBLISHED

ಇರುವೆಗಳ ವರ್ಗದಲ್ಲೇ ಅದ್ಭುತವೆಂದು ವರ್ಣನೆಗೊಳಗಾಗಿರುವ ಚಗಳಿ ಇರುವೆಗಳು ಮಲೆನಾಡಿಗರಿಗೆ ಚಿರಪರಿಚಿತ. ಇವು ಕಾಡಿನಲ್ಲಿ, ತೋಟದಲ್ಲಿ ಅಗಾಧವಾದ ಗೂಡುಗಳನ್ನು ಕಟ್ಟಿಕೊಂಡು ವಾಸಿಸುತ್ತವೆ. ಎಲೆಗಳನ್ನು ಒಂದಕ್ಕೊಂದು ಸೇರಿಸಿ ಇವು ಕಟ್ಟುವ ಗೂಡುಗಳನ್ನು 'ಕೊಟ್ಟೆ' ಎನ್ನುತ್ತಾರೆ. ಅತ್ಯಂತ ಸಂಕೀರ್ಣ ಸಂದೇಶಗಳನ್ನು ತಿಳಿಸಬಲ್ಲ ಭಾಷೆ ಅಥವಾ ಸಂವಹನ

ಮಾಧ್ಯಮ ಇಲ್ಲದೆ ಈ ಇರುವೆಗಳು ಇಷ್ಟೆಲ್ಲ ಕೆಲಸ ಮಾಡಲು ಸಾಧ್ಯವಿಲ್ಲ ಎನ್ನುವುದು ಇದರಿಂದ ತಿಳಿದುಬರುತ್ತದೆ. ಸಂಘಜೀವಿಗಳಾದ ಈ ಇರುವೆಗಳು ಇಡೀ ಗೂಡು ಒಂದೇ ಎನ್ನುವಷ್ಟು ಶಿಸ್ತಿನಿಂದ ವರ್ತಿಸುತ್ತವೆ.



ಉದಾಹರಣೆಗೆ, ಇವು ಕೊಟ್ಟೆಗಳನ್ನು ರಚಿಸುವ ರೀತಿಯನ್ನೇ ನೋಡಿ. ಒಂದು ಕೊಂಬೆಯ ಎಲೆಗಳನ್ನು ಬಗ್ಗಿಸಿ ಒಂದಕ್ಕೊಂದು ತಾಗಿಸಿ ಹೊಲಿದಿರುತ್ತವೆ. ನಮಗೆ ಹೊರಗಿನಿಂದ ನೋಡಿದಾಗ ಇದೇನು ಮಹಾ ಅನ್ನಿಸಬಹುದು. ಆದರೆ ಇರುವೆಯಂಥ ಅತ್ಯಂತ ಸಣ್ಣ ಶರೀರದ ಪ್ರಾಣಿ ಅದರ ನೂರಾರು ಪಟ್ಟು ವಿಸ್ತಾರವಾಗಿಯೂ ಬಲವಾಗಿಯೂ ಇರುವ ಎಲೆಗಳನ್ನು ಬಗ್ಗಿಸುವುದು ಹೇಗೆ? ಯಾವ ಎಲೆಗಳನ್ನು ಬಗ್ಗಿಸಬೇಕಾಗಿದೆಯೋ ಆ ಎಲೆಯ ಮೇಲೆ ನೂರಾರು ಇರುವೆಗಳು ಜಮಾಯಿಸುತ್ತವೆ. ಅನಂತರ ಒಂದರ ಕಾಲು ಒಂದು ಹಿಡಿದುಕೊಂಡು ಜೋತಾಡುತ್ತಾ ಕೆಳಗಿಳಿಯುತ್ತವೆ. ಕೆಳಗಿನ ಎಲೆಯ ಅಂಚು ಸಿಕ್ಕಿದ ಕೂಡಲೆ ನೇತಾಡುವ ದಾರದ ಕೊನೆಯಲ್ಲಿರುವ ಇರುವೆ ಎಲೆಯ ಅಂಚನ್ನು ಹಿಡಿಯುತ್ತದೆ. ಮೇಲಿನಿಂದ ಕೆಳಗೆ ನೇತುಕೊಂಡಿರುವ ಹಲವಾರು ದಾರಗಳು ನಿರ್ಮಾಣವಾದ ಕೂಡಲೇ ನೀಡಿರುವ ತಮ್ಮ ಕೈ ಕಾಲುಗಳನ್ನು ಎಲ್ಲ ಇರುವೆಗಳೂ ನಿಧಾನವಾಗಿ ಮಡಚುತ್ತವೆ. ದಾರದ ಸೆಳೆತಕ್ಕೆ ಎಲೆ ಮೆಲ್ಲಗೆ ಕೆಳಗೆ ಬಾಗುತ್ತದೆ. ಮೊದಲ ಇರುವೆಗಳ ದಾರ ಸಂಕುಚಿಸಿ ಎಲೆ ಕೆಳಕ್ಕೆ ಬಾಗಿರಬೇಕಾದರೆ ಮತ್ತೆ ಎರಡನೇ ಸುತ್ತಿನ ಇರುವೆಗಳ ದಾರ ನಿರ್ಮಾಣವಾಗುತ್ತದೆ. ಮೊದಲನೆಯ ಸರಣಿ ಎಳೆದು ಹಿಡಿದಿರುವ ಎಲೆಯಿಂದ ಮತ್ತೊಂದು ಸುತ್ತಿನ ದಾರಗಳು ಬಂದು ಎಲೆಯನ್ನು ಮತ್ತಷ್ಟು ಕೆಳಗೆ ಎಳೆಯುತ್ತವೆ. ಕೆಲಹೊತ್ತಿನಲ್ಲೇ ಆ ಎಲೆಯನ್ನು ಪೊಟ್ಟಣದಂತೆ ಬಗ್ಗಿಸಿ ಕೆಳಗಿನ ಎಲೆಗೆ ಒತ್ತಿ ಹಿಡಿಯುತ್ತವೆ.

ಹಲಸಿನ ಮತ್ತು ಮಾವಿನ ಮರದಲ್ಲಿ ನೇತಾಡುತ್ತಿರುವ ಸಾಮಾನ್ಯ ಗಾತ್ರದ ಚಗಳಿ ಕೊಟ್ಟೆಯ ಚಿಕ್ಕೆಲೆಗಳು ಒಂದಕ್ಕೊಂದು ತಾಗುತ್ತಿದ್ದಂತೆಯೇ ಇರುವೆಗಳು ತಮ್ಮ ಹಳೆಗೂಡಿಗೆ ಓಡಿ ಅಲ್ಲಿ ಇನ್ನೂ ಕೋಶಾವಸ್ಥೆಯಲ್ಲಿರುವ ಲಾರ್ವಾಗಳನ್ನು ತಮ್ಮ ದವಡೆಯಲ್ಲಿ ಮೃದುವಾಗಿ ಹಿಡಿದು ತರುತ್ತವೆ. ಆ ಲಾರ್ವಾಗಳನ್ನು ಎಲೆಗೆ ಎಲೆ ಅಂಟಿಸಬೇಕಾದ ಜಾಗದಲ್ಲಿ ವಿಚಿತ್ರವಾಗಿ ನೇವರಿಸುತ್ತಾ ಮೇಲೂ ಕೆಳಗೂ ಮಗ್ಗದ ಲಾಳ ಆಡಿಸುವಂತೆ ಅತ್ತಿಂದಿತ್ತ ಆಡಿಸುತ್ತವೆ. ಲಾರ್ವಾಗಳನ್ನು ನೇವರಿಸುವುದರಿಂದ ಅವು ರೇಷ್ಮೆಯಂಥ ನೂಲನ್ನು ಸತತವಾಗಿ ಸ್ರವಿಸಲು ಶುರು ಮಾಡುತ್ತವೆ. ಜೇಡರ ಬಲೆಯಂತೆ ಎರಡನ್ನೂ ಬೆಸೆಯುವ ಈ ನೂಲು ಕೆಲಸ ಮುಗಿಯುವ ಹೊತ್ತಿಗೆ ರೇಷ್ಮೆ ಬಟ್ಟೆಯಂತೆಯೇ ದಟ್ಟವಾಗಿ ದಪ್ಪಗಿದ್ದು ಎಲೆಗಳೆರಡನ್ನು ಅಂಟಿಸಿರುತ್ತದೆ.

© KTBS NOT TO BE REPUBLISHED







ಚಗಳಿ ಇರುವೆಗಳು ಮೊದಲು ಎರಡೋ ಮೂರೋ ಅಕ್ಕಪಕ್ಕದ ಎಲೆಗಳನ್ನು ಸೇರಿಸಿ ಪೊಟ್ಟಣ ಕಟ್ಟಿದಂತೆ ಚಿಕ್ಕಗೂಡು ಕಟ್ಟುತ್ತವೆ. ಇವುಗಳ ಸಂಖ್ಯೆ ಬೆಳೆದಂತೆಲ್ಲಾ ಮೇಲಿನ ಮತ್ತು ಅಕ್ಕಪಕ್ಕದ ಎಲೆಗಳನ್ನು ಹೊಂದಿಸಿ ಮಾಳಿಗೆಗಳನ್ನು ನಿರ್ಮಿಸುತ್ತಾ ಗೂಡನ್ನು ದೊಡ್ಡವನ್ನಾಗಿ ಮಾಡುತ್ತವೆ. ದೊಡ್ಡ ಗೂಡುಗಳಲ್ಲಿ ಐದರಿಂದ ಹತ್ತು ಲಕ್ಷ ಇರುವೆಗಳವರೆಗೂ ಇರುತ್ತವೆ. ಇರುವೆಗಳ ಸಂಖ್ಯೆ ಇದನ್ನೂ ಮೀರಿ ಬೆಳೆದರೆ ಆಗ ಅದೇ ಮರದ ಬೇರೆ ಕೊಂಬೆಯಲ್ಲೋ ಅಥವಾ ಸಮೀಪದ ಇನ್ನೊಂದು ಮರದಲ್ಲೋ ಹೊಸ ಉಪಕೊಟ್ಟೆಗಳನ್ನು ಕಟ್ಟುತ್ತವೆ.

ಈ ಇರುವೆಗಳ ಶಿಸ್ತು, ಧೈರ್ಯ ಮತ್ತು ಒಗ್ಗಟ್ಟುಗಳ ದೆಸೆಯಿಂದ ಇವನ್ನು ಮನುಷ್ಯರಿಗೂ ಸಹ ಹಿಮ್ಮೆಟ್ಟಿಸುವುದು ಕಷ್ಟ. ಬೇರೆ ಇರುವೆಗಳನ್ನು ನೀವು ಹಿಡಿಯಲು ಹೋದರೆ ಅವು ತಲೆ ತಪ್ಪಿಸಿಕೊಂಡು ಓಡಿಹೋಗಲು ನೋಡುತ್ತವೆ. ಆದರೆ ಚಗಳಿ ಇರುವೆಗಳನ್ನು ಹಿಡಿಯಲು ಹೋದರೆ ಅವು ಓಡುವುದಿಲ್ಲ. ಬದಲಿಗೆ ತಿರುಗಿ ನಿಂತು ನೆಗೆದು ಕಚ್ಚಲು ಸಿದ್ಧವಾಗುತ್ತವೆ. ಅಷ್ಟೇ ಅಲ್ಲದೆ ತನ್ನ ಹಿಂಭಾಗವನ್ನು ಮೇಲೆತ್ತಿ ಹೊಟ್ಟೆ ಅಡಿಯಲ್ಲಿರುವ ಗ್ರಂಥಿಗಳಿಂದ ಅಪಾಯದ ಫಿರಮೋನ್ ರಾಸಾಯನಿಕವನ್ನು ಗಾಳಿಯಲ್ಲಿ ಸಿಂಪರಿಸುತ್ತವೆ. ಕೆಲವೇ ಕ್ಷಣಗಳಲ್ಲಿ ಆಜುಬಾಜಿನಲ್ಲಿರುವ ಎಲ್ಲ ಚಗಳಿ ಇರುವೆಗಳೂ ಯುದ್ಧ ಸನ್ನದ್ಧರಾಗಿ ಹಾಜರಾಗುತ್ತವೆ.

ಈ ಇರುವೆಗಳು ತಮ್ಮಲ್ಲೇ ದನ ಸಾಕುವ ಗೋಪಾಲಕರಂಥ ಕೆಲಸಗಾರ ಇರುವೆಗಳನ್ನು ರೂಪಿಸಿವೆ. ಇವುಗಳ ಕೆಲಸವೆಂದರೆ ಗಿಡದ ರಸ ಹೀರಿ ಬದುಕುವ ತಿಗಣೆ ಮತ್ತು ಜಿಗಿ ಹುಳುಗಳನ್ನು ಹಿಡಿತಂದು ತಾವು ಕೊಟ್ಟೆ ಕಟ್ಟಿದ ಮರದ ಕೊಂಬೆಗಳ ಮೇಲೆ ಸಾಕುವುದು. ಚಗಳಿಗಳ ಜೀವನದಲ್ಲಿ ಇವಕ್ಕೆ ಅಪಾರ ಪ್ರಾಮುಖ್ಯತೆ ಇದೆ. ಅವುಗಳ ಉಚ್ಛಿಷ್ಠ ಸಿಹಿಯಾದ ಮಧುವಾಗಿರುವುದರಿಂದ ಅದು ಇರುವೆಗಳ ಆಹಾರವೂ ಹೌದು. ನಾವು ದನ ಸಾಕಿ ಅವುಗಳಿಂದ ಹಾಲು ಕರೆದುಕೊಳ್ಳುವಂತೆ ತಮಗೆ ಆಹಾರೋತ್ಪತ್ತಿ ಮಾಡುವ ಈ ಕೀಟಗಳನ್ನು ಚಗಳಿ ಇರುವೆಗಳು ಸಾಕುತ್ತವೆ. ಇದರಿಂದಾಗಿ ಚಗಳಿ ಇರುವೆಗಳು ಲಕ್ಷಾಂತರ ಕೀಟಗಳನ್ನು ಹಿಡಿದು ಕೊಂದು ರೈತರಿಗೆ ಸಹಾಯ ಮಾಡಿದರೂ ಜಿಗಿ ಹುಳುಗಳನ್ನೂ ತಿಗಣೆಗಳನ್ನೂ ಇವು ಗೂಡು ಮಾಡಿರುವ ಮರಗಿಡಗಳಲ್ಲೆಲ್ಲ ತಂದಿಟ್ಟು ಸಾಕುವುದರಿಂದ ಈ ಉಪದ್ರವಕಾರಿ ಕೀಟಗಳನ್ನು ಗಿಡದಿಂದ ಗಿಡಕ್ಕೆ ಹಬ್ಬಿಸಿ ಸಾಕುವ ವಾಹಕಗಳಾಗಿವೆ.

©KTBS NOT TO BE REPUBLISHED

ಚಗಳಿ ಇರುವೆಗಳಿಗೆ ಇತರ ಸಂಘಜೀವಿಗಳಾದ ಕೀಟಗಳಲ್ಲಿರುವಂತೆಯೇ ಒಂದು ರಾಣಿ ಇರುವೆ ಇರುತ್ತದೆ. ಇಡೀ ಇರುವೆಗಳ ಗುಂಪಿಗೆ ಇದೇ ಮೂಲ. ಇದರ ಕೆಲಸ ಸತತವಾಗಿ ಮೊಟ್ಟೆ ಇಡುವುದು. ರಾಣಿ ಇರುವೆಯ ಮೈಯಲ್ಲಿ ಅನೇಕ ಗ್ರಂಥಿಗಳಿಂದ ಹಲವಾರು ಬಗೆಯ ಫಿರಮೋನ್ ರಾಸಾಯನಿಕ ಒಸರುತ್ತದೆ. ಈ ರಾಸಾಯನಿಕಗಳು ಒಂದು ಇರುವೆಯ ಸಮುದಾಯದ ರೂಪುರೇಷೆಗಳನ್ನು ನಿಯಂತ್ರಿಸುವವು. ಗಂಡು ಇರುವೆಗಳು, ಕಾವಲುಗಾರ ಇರುವೆಗಳು, ಸೈನಿಕ ಇರುವೆಗಳು ಸಹ ಈ ರಾಸಾಯನಿಕ ಸಂಯೋಜನೆಯಲ್ಲಿ ರೂಪುಗೊಳ್ಳುವವು.

ರಾಣಿಯ ಮೇಲೆ ಸದಾ ಇರುವೆಗಳು ಮುತ್ತಿಕೊಂಡಿರುತ್ತವೆ. ಅದರ ಮೈಮೇಲೆ ಒಸರುವ ರಾಸಾಯನಿಕವನ್ನು ತಾವು ನೆಕ್ಕುವುದಲ್ಲದೆ ಅದನ್ನು ಸಂಗ್ರಹಿಸಿ ಬೇರೆ ಬೇರೆ ಇರುವೆಗಳಿಗೆ ಒಯ್ದು ತಿನ್ನಿಸುತ್ತವೆ. ತಾವು ಹೊರಗಿನಿಂದ ಸಂಗ್ರಹಿಸಿ ತಂದ ಆಹಾರವನ್ನು ಕೆಲಸಗಾರ ಇರುವೆಗಳು ರಾಣಿಗೆ ತಿನ್ನಿಸುತ್ತಲೂ ಇರುತ್ತವೆ. ಚಗಳಿ ಇರುವೆಗಳದ್ದು ಸ್ತ್ರೀ ಪ್ರಧಾನವಾದ ಸಮಾಜ.


**ಕೌಶಲ :** ಮಾತನಾಡುವುದು.

**ಸಾಮರ್ಥ್ಯ : ಸನ್ನಿವೇಶ ಮತ್ತು ಘಟನೆಗಳನ್ನು ಕುರಿತು ನಿರರ್ಗಳವಾಗಿ ಹಾಗೂ ಸ್ಪಷ್ಟವಾಗಿ ಮಾತನಾಡುವುದು.**

**ಆಶಯ :** ಇಂದು ನಮ್ಮ ಸುತ್ತಮುತ್ತಲು ಅನೇಕ ಕೌತುಕಗಳು ನಡೆಯುತ್ತಿರುತ್ತವೆ. ವಿಚಿತ್ರ ಸಂಗತಿಗಳು ಘಟಿಸುತ್ತಿರುತ್ತವೆ. ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿರುವ ಅನೇಕ ಜೀವಿಗಳ ಜೀವನದಿಂದ ನಾವು ಕಲಿಯಬೇಕಾದುದು ಬಹಳ ಇದೆ. ಅಂತಹ ಕೌತುಕಗಳಲ್ಲಿ ಒಂದಾದ ಚಗಳಿ ಇರುವೆಗಳ ಪರಿಚಯ ಮಾಡಿಕೊಡುವುದು ಇಲ್ಲಿನ ಉದ್ದೇಶ.

@KTBS NOT TO BE REPUBLISHED

## ಕೃತಿಕಾರರ ಪರಿಚಯ



**ಪೂರ್ಣಚಂದ್ರ ತೇಜಸ್ವಿ (೧೯೩೮–೨೦೦೭) ರಾಷ್ಟ್ರಕವಿ ಕುವೆಂಪು ರವರ ಪುತ್ರ. ೧೯೩೮ರ ಸೆಪ್ಟೆಂಬರ್ ೦೮ರಂದು ಶಿವಮೊಗ್ಗ**ದಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯಲ್ಲಿ ನೆಲೆಸಿದರು. **ತೋಟಗಾರಿಕೆ, ಛಾಯಾಗ್ರಹಣ, ಬರವಣಿಗೆ ಮತ್ತು ಚಿತ್ರಕಲೆ ತೇಜಸ್ವಿಯವರ ಹವ್ಯಾಸ. ಕಥೆ, ಕವಿತೆ, ನಾಟಕ, ಕಾದಂಬರಿ, ವೈಚಾರಿಕ ಲೇಖನಗಳು, ಪರಿಸರ, ಶಿಕಾರಿ ಸಂಬಂಧಿತ ಬರೆಹಗಳು, ಇತಿಹಾಸ, ತತ್ವಜ್ಞಾನ, ಮಾನವಶಾಸ್ತ್ರ, ಅರ್ಥಶಾಸ್ತ್ರ, ವಿಜ್ಞಾನ** ಹೀಗೆ ಹಲವು ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಅಲ್ಲದೆ **ಕರ್ವಾಲೊ, ಅಬಚೂರಿನ ಪೋಸ್ಟಾಫೀಸ್, ಚಿದಂಬರ ರಹಸ್ಯ, ಕಿರಗೂರಿನ ಗಯ್ಯಾಳಿಗಳು, ತಬರನ ಕಥೆ, ಜುಗಾರಿ ಕ್ರಾಸ್, ಮಾಯಾಲೋಕ, ಪರಿಸರದ ಕತೆ, ಅಲೆಮಾರಿಯ ಅಂಡಮಾನ್ ಮತ್ತು**

**ಮಹಾನದಿ ನೈಲ್, ಅಣ್ಣನ ನೆನಪು** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. **ತೇಜಸ್ವಿಯವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ** ದೊರೆತಿವೆ. ಇವರ ಸಮಗ್ರ ಸಾಹಿತ್ಯಕ್ಕಾಗಿ **ಪಂಪ ಪ್ರಶಸ್ತಿ** ನೀಡಲಾಗಿದೆ. ತೇಜಸ್ವಿ ಅವರು ಏಪ್ರಿಲ್ ೫, ೨೦೦೭ ರಂದು ನಿಧನರಾದರು

## ಪದಗಳ ಅರ್ಥ

ವರ್ಗ–ಗುಂಪು, ಸಮೂಹ; ವರ್ಣನೆ–ಬಣ್ಣನೆ; ಸಂಕೀರ್ಣ–ಜಟಿಲವಾದ, ನಾನಾ ವಿಧವಾದ; ಅಂಚು–ಕೊನೆ, ತುದಿ; ಸ್ರವಿಸು–ಒಸರು, ಜಿನುಗು; ಬೆಸೆ–ಕೂಡಿಸು, ಸೇರಿಸು; ಮಾಳಿಗೆ–ಮಹಡಿ; ಹಿಮ್ಮೆಟ್ಟಿಸು–ಹಿಂದಕ್ಕೆ ಸರಿಸು, ಸೋಲಿಸು; ಸಿಂಪರಿಸು–ಚಿಮುಕಿಸು, ಲೇಪಿಸು; ಆಜುಬಾಜು–ಅಕ್ಕಪಕ್ಕ, ನೆರೆಹೊರೆ; ಸನ್ನದ್ಧ–ಸಿದ್ಧವಾಗು; ಉಚ್ಛಿಷ್ಠ–ಎಂಜಲು; ಮಧು–ಸಿಹಿ; ವಾಹಕ–ಸಾಗಿಸುವ.

## ಅಭ್ಯಾಸ

© KTBS NOT TO BE REPUBLISHED

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಕೊಟ್ಟೆ ಎಂದರೇನು?

೨. ಚಗಳಿ ಇರುವೆಗಳು ಎಲೆಗಳನ್ನು ಅಂಟಿಸಲು ಏನನ್ನು ಬಳಸುತ್ತವೆ?

೩. ಚಗಳಿ ಇರುವೆಗಳು ತಮ್ಮ ಸಂಗಡಿಗರಿಗೆ ಯಾವ ರಾಸಾಯನಿಕದ ಮೂಲಕ ಸಂದೇಶಗಳನ್ನು ತಲುಪಿಸುತ್ತವೆ?

೪. ಚಗಳಿ ಇರುವೆಗಳಂತೆಯೇ ಸಂಘಜೀವನವನ್ನು ನಡೆಸುವ ಇತರ ಜೀವಿಗಳು ಯಾವುವು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಚಗಳಿ ಇರುವೆಗಳ ಶಿಸ್ತಿಗೆ ಒಂದು ಉದಾಹರಣೆ ಕೊಡಿ.

೨. ಕೆಲಸಗಾರ ಇರುವೆಗಳ ಕೆಲಸವೇನು?

೩. ಚಗಳಿ ಇರುವೆಗಳನ್ನು ಹಿಮ್ಮೆಟ್ಟಿಸುವುದು ಮನುಷ್ಯರಿಗೂ ಕಷ್ಟ ಏಕೆ?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ.**

೧. ಚಗಳಿ ಇರುವೆಗಳು ತಮ್ಮ ಗೂಡನ್ನು ಹೇಗೆ ನಿರ್ಮಿಸುತ್ತವೆ?

೨. ಚಗಳಿ ಇರುವೆಗಳು ಉಪಕಾರಿಗಳೂ ಹೌದು ಉಪದ್ರವಕಾರಿಗಳೂ ಹೌದು. ಈ ಹೇಳಿಕೆಯನ್ನು ವಿವರಿಸಿ.

೩. ಕಷ್ಟಕ್ಕೆ ಹೆದರಿ ಓಡಬಾರದು, ತಿರುಗಿ ನಿಂತು ಎದುರಿಸಬೇಕೆಂಬ ಸಂದೇಶವನ್ನು ನಾವು ಇರುವೆ ಜೀವನದಿಂದ ಹೇಗೆ ಕಲಿಯಬಹುದು?

**ಈ. ಖಾಲಿ ಜಾಗವನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ.**

೧. ಚಗಳಿ ಇರುವೆಗಳಿಗೆ ಮೂಲ ____________ ಇರುವೆ.

೨. ದನ ಸಾಕುವ ಗೋಪಾಲಕರನ್ನು ಹೋಲುವ ಇರುವೆಗಳು ____________

೩. ಚಗಳಿ ಇರುವೆಗಳ ಗೂಡನ್ನು ____________ ಎಂದು ಕರೆಯುತ್ತಾರೆ.

೪. ಒಂದು ಚಗಳಿ ಇರುವೆ ಗೂಡಿನಲ್ಲಿ ಸುಮಾರು ____________ ಇರುವೆಗಳು ಇರುತ್ತವೆ.

೫. ಇರುವೆಗಳಿಂದ ಒಸರುವ ರಾಸಾಯನಿಕ ____________

@KTBS NOT TO BE REPUBLISHED

## ಭಾಷಾ ಚಟುವಟಿಕೆ

**ಅ. ಕೆಳಗಿನ ಪಟ್ಟಿಯಲ್ಲಿ ಅನೇಕ ವಾಕ್ಯಗಳನ್ನು ಒಳಗೊಂಡಿರುವ ಪದಗಳಿವೆ. ನಿಮ್ಮಿಂದ ಎಷ್ಟು ವಾಕ್ಯಗಳನ್ನು ಪತ್ತೆ ಹಚ್ಚಲು ಸಾಧ್ಯ? ಪ್ರಯತ್ನಿಸಿ.**

| | | | |
|---|---|---|---|
| ರಮೇಶ | ಸೂರ್ಯ | ಕೋಳಿಯು | ವಿಮಲ |
| ಭಾನುವಾರ | ಮುಂಜಾನೆ | ಬೇಗ | ಏಳಬೇಕು |
| ಕೂಗುತ್ತದೆ | ಬೆಳಕು | ಶಾಲೆಗೆ | ಸಲೀಮ |
| ರಜೆ | ಬೀರುತ್ತದೆ | ಒಳ್ಳೆಯವನು | ಹೋದನು |

**ಮಾದರಿ :** ಮುಂಜಾನೆ ಬೇಗ ಏಳಬೇಕು.

ಆ. ಕೆಳಗಿನ ವಾಕ್ಯಗಳನ್ನು ಗಮನಿಸಿ ಓದಿ. ಅಲ್ಲಿ ಯಾವ ಭಾವನೆ ಪ್ರಮುಖವಾಗಿ ವ್ಯಕ್ತವಾಗಿದೆ ಎಂಬುದನ್ನು ಗಮನಿಸಿ. ಅಂತಹದ್ದೇ ಇನ್ನೊಂದು ವಾಕ್ಯವನ್ನು ನೀವು ರಚಿಸಿ.

೧. ಸ್ವಾಮಿ! ಈ ಕುರ್ಚಿಯಲ್ಲಿ ದಯಮಾಡಿ ಕುಳಿತುಕೊಳ್ಳಿ (ಗೌರವ)

೨. ದೇವ ! ದೇವ! ನಮಗೆ ಒಳಿತನ್ನು ಮಾಡು. (ಪ್ರಾರ್ಥನೆ)

೩. ಅಯ್ಯಯ್ಯೋ! ಮಗು ಎಡವಿ ಬಿದ್ದಿದೆ. (ಕಾಳಜಿ)

೪. ಭಲೇ ! ಭಲೇ! ನೀನು ನಮ್ಮ ಊರಿನ ಮಾನ ಕಾಪಾಡಿದೆ. (ಮೆಚ್ಚುಗೆ)

ಇ. ಯಾವ ರೀತಿ ಓದಿದರೂ ಅರ್ಥ ವ್ಯತ್ಯಾಸವಾಗದ ಪದಗಳನ್ನು ಗಮನಿಸಿ. ನೀವೂ ಇಂತಹ ಪದಗಳನ್ನು ಸಂಗ್ರಹಿಸಿ.

| | | |
|---|---|---|
| ಗದಗ | ಕಿಟಕಿ | ನವೀನ |
| ವಿಕಟಕವಿ | ಮದ್ರಾಸಿನ ಸಿದ್ರಾಮ | ಕುಟುಕು |

© KTBS NOT TO BE REPUBLISHED

## ವ್ಯಾಕರಣ ಮಾಹಿತಿ

### ಸಮಾಸಗಳು

**ಕೆಳಗೆ ನೀಡಿರುವ ವಾಕ್ಯವೃಂದವನ್ನು ಗಮನಿಸಿ.**

ಮೈಸೂರಿನಲ್ಲಿ ಅರಸನ ಮನೆ ಇದೆ. ಅರಸನ ಮನೆಯಲ್ಲಿ ಬಿಳಿದು ಕೊಡೆಯೂ ಇದೆ. ಅರಸನ ಮನೆಯನ್ನು ನಾಲ್ಕು ಮಡಿ ಕೃಷ್ಣರಾಜರು ಕಟ್ಟಿಸಿದರು. ಅರಸನ ಮನೆಯಲ್ಲಿ ಓಡಾಡಿ ನನಗೆ ಕಾಲ ಅಡಿ ನೋವು ಬಂದಿತು. ಅರಸನ ಮನೆಯಲ್ಲಿ ಆನೆಯೂ ಕುದುರೆಯೂ ದನವೂ ಇವೆ. ಅರಸನ ಮನೆಯನ್ನು ನೋಡುವಾಗ ನನ್ನ ಜೊತೆ ಚಕ್ರವನ್ನು ಕೈಯಲ್ಲಿ ಹಿಡಿದವನು ಇದ್ದ. ಇಬ್ಬರೂ ಅರಸನ ಮನೆಯನ್ನು ಮೈಯನ್ನು ಮರೆತು ನೋಡಿದೆವು.

ಮೇಲಿನ ವಾಕ್ಯವೃಂದದಲ್ಲಿ ಅರಸನ ಮನೆ, ಬಿಳಿದು ಕೊಡೆ, ನಾಲ್ಕು ಮಡಿ, ಕಾಲ ಅಡಿ, ಆನೆಯೂ ಕುದುರೆಯೂ ದನವೂ ಚಕ್ರವನ್ನು ಕೈಯಲ್ಲಿ ಹಿಡಿದವನು ಎಂಬ ಪದಗಳನ್ನು ಬಿಡಿಸಿ ಬರೆಯಲಾಗಿದೆ. ಈ ಪದಗಳನ್ನು ಕೂಡಿಸಲು ಸಾಧ್ಯ. ಹೀಗೆ ಕೂಡಿಸುವುದರಿಂದ ಅಕ್ಷರಗಳ ಅನಗತ್ಯ ಬಳಕೆ ಮತ್ತು ಉಚ್ಚಾರಣೆಯ ಕಾಲ ಕಡಿಮೆಯಾಗುತ್ತದೆ ಮತ್ತು ಉಚ್ಚಾರಣೆ ಮತ್ತಷ್ಟು ಸುಲಭವಾಗುತ್ತದೆ. ಈಗ ಕೂಡಿಸಿ ನೋಡೋಣ :

ಮೈಸೂರಿನಲ್ಲಿ ಅರಮನೆ ಇದೆ. ಅರಮನೆಯಲ್ಲಿ ಬೆಳ್ಳೊಡೆಯೂ ಇದೆ. ಅರಮನೆಯನ್ನು ನಾಲ್ವಡಿ ಕೃಷ್ಣರಾಜರು ಕಟ್ಟಿಸಿದರು. ಅರಮನೆಯಲ್ಲಿ ಓಡಾಡಿ ನನಗೆ ಅಂಗಾಲು ನೋವು ಬಂದಿತು. ಅರಮನೆಯಲ್ಲಿ ಆನೆ ಕುದುರೆ ದನಗಳು ಇವೆ. ಅರಮನೆಯನ್ನು ನೋಡುವಾಗ ನನ್ನ ಜೊತೆ ಚಕ್ರಪಾಣಿ ಇದ್ದ. ಇಬ್ಬರೂ ಅರಮನೆಯನ್ನು ಮೈಮರೆತು ನೋಡಿದೆವು.

ಹೀಗೆ ಕೂಡಿಸುವುದು ಎಂದರೆ ಸಮಾಸ ಮಾಡುವುದು ಎಂದು ಅರ್ಥ. ಹೀಗೆ ಕೂಡಿಸಿದ ಪದದಲ್ಲಿ ಎರಡು ಭಾಗಗಳಿವೆ. ಒಂದನ್ನು **'ಪೂರ್ವಪದ',** ಅದರ ಎದುರಿಗೆ ಬರುವುದನ್ನು **'ಉತ್ತರಪದ'** ಎಂದೂ ಕರೆಯಲಾಗುತ್ತದೆ. ಕೂಡಿಸಿದ ಪದವನ್ನು ಮತ್ತೆ ಬಿಡಿಸಿ ಬರೆದರೆ ಅದು **'ವಿಗ್ರಹವಾಕ್ಯ'**. ಸಮಾಸವಾದ ಪದವನ್ನು ವಾಕ್ಯದಲ್ಲಿ ಬಳಸಿದಾಗ ಯಾವ ಪದದ ಅರ್ಥ ಮುಖ್ಯವಾಗುತ್ತದೆ ಎಂಬುದರ ಆಧಾರದ ಮೇಲೆ ವಿವಿಧ ಸಮಾಸಗಳನ್ನು ಗುರುತಿಸಲಾಗುತ್ತದೆ.

ಉದಾ : (ಅರಮನೆ = ಅರಸನ + ಮನೆ; ಪೂರ್ವಪದ = ಅರಸನ; ಉತ್ತರಪದ = ಮನೆ) ಅರಸನ ಮನೆಯಲ್ಲಿ ಸಿಂಹಾಸನವಿದೆ. ಈ ವಾಕ್ಯದಲ್ಲಿ ಸಿಂಹಾಸನ ಇರುವುದು ಮನೆಯಲ್ಲಿ, ಆ ಮನೆ ಯಾರದು? ಎಂದಾಗ ಅದು ಅರಸನದು ಎಂಬ ಉತ್ತರ ದೊರೆಯುತ್ತದೆ. ಇಲ್ಲಿ ಮನೆ ಎಂಬ ಪದದ ಅರ್ಥ ಮುಖ್ಯ. ಆದುದರಿಂದ ಇದು ಉತ್ತರ ಪದದ ಅರ್ಥ ಪ್ರಧಾನವಾದ ಸಮಾಸ.

## ತತ್ಪುರುಷ ಸಮಾಸ

೧. ಮಳೆಯ + ಕಾಲ = ಮಳೆಗಾಲ

೨. ತಲೆಯಲ್ಲಿ + ನೋವು = ತಲೆನೋವು

೩. ಮಲ್ಲಿಗೆಯ + ಹೂವು = ಮಲ್ಲಿಗೆ ಹೂವು

೪. ಮನೆಯ + ಕೆಲಸ = ಮನೆಗೆಲಸ

೫. ಅರಸನ + ಮನೆ = ಅರಮನೆ

ಈ ಮೇಲಿನ ಪದಗಳನ್ನು ಗಮನಿಸಿದಾಗ 'ಮಳೆಯ' ಮತ್ತು 'ಕಾಲ' ಎಂಬ ಎರಡು ಪದಗಳನ್ನು ಸೇರಿಸಿ ಮಳೆಗಾಲ ಎಂದು ಹೇಳಲಾಗುತ್ತದೆ. ಹೀಗೆ ಕಾಲದ ಉಳಿತಾಯ ಹಾಗೂ ಸ್ಪಷ್ಟ ಅರ್ಥೈಸುವಿಕೆಗಾಗಿ ಪದಗಳನ್ನು ಕೂಡಿಸಿ ಬಳಸುತ್ತೇವೆ. ಹೀಗೆ ಎರಡು ನಾಮಪದಗಳು ಸೇರಿ ಸಮಾಸವಾದಾಗ ಉತ್ತರಪದದ ಅರ್ಥವು ಪ್ರಧಾನವಾಗಿದ್ದರೆ ಅಂತಹ ಸಮಾಸಗಳಿಗೆ ತತ್ಪುರುಷ ಸಮಾಸ ಎಂದು ಹೆಸರು.

@KTBS NOT TO BE REPUBLISHED

## ಕರ್ಮಧಾರಯ ಸಮಾಸ

೧. ಹಿರಿದು + ಮರ = ಹೆಮ್ಮರ

೨. ಕೆಂಪಾದ + ತಾವರೆ = ಕೆಂದಾವರೆ

೩. ಮೆಲ್ಲಿತು + ನುಡಿ = ಮೆಲ್ನುಡಿ

ಹೀಗೆ ಪೂರ್ವೋತ್ತರ ಪದಗಳು ವಿಶೇಷಣ–ವಿಶೇಷ್ಯ ಸಂಬಂಧದಿಂದ ಕೂಡಿ ಆಗುವ ಸಮಾಸಕ್ಕೆ ಕರ್ಮಧಾರಯ ಸಮಾಸ ಎಂದು ಹೆಸರು.

## ಅಂಶಿ ಸಮಾಸ

೧. ಕೈಯ + ಅಡಿ = ಅಂಗೈ

೨. ತಲೆಯ + ಮುಂದು = ಮುಂದಲೆ

೩. ಕೆಳಗಿನ + ತುಟಿ = ಕೆಳದುಟಿ

೪. ಕಾಲಿನ + ಮುಂದು = ಮುಂಗಾಲು

ಪೂರ್ವೋತ್ತರ ಪದಗಳು ಹೀಗೆ ಅಂಶಿ ಅಂಶ ಭಾವದಿಂದ ಸೇರಿ ಸಮಾಸವಾದರೆ ಅಂತಹ ಸಮಾಸಗಳಿಗೆ ‘ಅಂಶಿ ಸಮಾಸ’ ಎಂದು ಹೆಸರು. ‘ಕಾಲು’ ಅಂಶಿ, ಅದರ ‘ಮುಂದು’ ಅದರ ಅಂಶ.

## ದ್ವಂದ್ವ ಸಮಾಸ

೧. ರಾಮನು + ಲಕ್ಷ್ಮಣನು = ರಾಮಲಕ್ಷ್ಮಣರು

೨. ಕೃಷ್ಣನು + ಅರ್ಜುನನು = ಕೃಷ್ಣಾರ್ಜುನರು

೩. ಗಿಡವೂ + ಮರವೂ + ಬಳ್ಳಿಯೂ = ಗಿಡಮರಬಳ್ಳಿಗಳು

ಹೀಗೆ ಎರಡು ಅಥವಾ ಎರಡಕ್ಕಿಂತಲೂ ಹೆಚ್ಚು ನಾಮಪದಗಳು ಸೇರಿ ಸಮಾಸವಾಗುವಾಗ ಎಲ್ಲ ಪದಗಳ ಅರ್ಥವೂ ಪ್ರಧಾನವಾಗಿದ್ದರೆ ಅಂತಹ ಸಮಾಸಕ್ಕೆ ‘ದ್ವಂದ್ವ ಸಮಾಸ’ ಎಂದು ಹೆಸರು.

© KTBS NOT TO BE REPUBLISHED

# ೭. ಬಿಲ್ಲಹಬ್ಬ (ನಾಟಕ)

N7N3W7

– ಎಚ್.ಎಸ್. ವೆಂಕಟೇಶಮೂರ್ತಿ

**ಪ್ರವೇಶ :** ಕಾವ್ಯಗಳಲ್ಲಿ ನಾಟಕವು ರಮ್ಯವಾದದ್ದು. ನಾಟಕವು ಪ್ರಧಾನವಾಗಿ ದೃಶ್ಯಮಾಧ್ಯಮ. ಜೀವಂತಿಕೆಯೇ ನಾಟಕದ ಪ್ರಧಾನ ಲಕ್ಷಣವಾಗಿದೆ. ನಟರು ತಮ್ಮ ಆಂಗಿಕ, ವಾಚಿಕ, ಆಹಾರ್ಯ ಮತ್ತು ಸಾತ್ವಿಕ ಅಭಿನಯದಿಂದ ಸಹೃದಯರ ಮನಗೆಲ್ಲುವ ಮೂಲಕ ಮನೋರಂಜನೆಯನ್ನು ನೀಡುವುದಲ್ಲದೇ ತಮ್ಮ ಸಂಭಾಷಣೆಗಳ ಮೂಲಕ ಪ್ರೇಕ್ಷಕರ ರಸಭಾವಗಳನ್ನು ಉದ್ದೀಪನ ಗೊಳಿಸುತ್ತಾರೆ. ಜೊತೆಗೆ ಅಂತಃಕರಣವನ್ನು ಕಲಕಿ, ಮನಃಪರಿವರ್ತನೆಗೆ ಅನುವು ಮಾಡಿಕೊಡುತ್ತಾರೆ. ನಾಟಕಗಳು ಆಯಾಯ ಕಾಲಮಾನದ ಸಾಮಾಜಿಕ, ರಾಜಕೀಯ ವ್ಯವಸ್ಥೆಗಳ ಕೈಗನ್ನಡಿಯಾಗಿವೆ.

ನಾಟಕಗಳಿಗೆ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಹಿನ್ನೆಲೆಯ ಕಥಾವಸ್ತುಗಳೇ ಪ್ರೇರಣೆಯಾಗಿರುತ್ತವೆ. ಪ್ರಕೃತ ನಾಟಕವು ಪೌರಾಣಿಕ ಕಥಾಹಿನ್ನೆಲೆಯನ್ನು ಹೊಂದಿದ್ದು, ಇದಕ್ಕೆ ರಾಮಾಯಾಣ ಮಹಾಭಾರತ ಮಹಾಕಾವ್ಯಗಳೇ ಪ್ರೇರಣೆಯಾಗಿವೆ. ಅಂದಿನ ಯುಗಮಾನದಲ್ಲಿನ ರಾಜರ ಅಧಿಕಾರಶಾಹೀ ಆಡಳಿತ ವ್ಯವಸ್ಥೆ, ಅಧಿಕಾರಸ್ಥರ ಆತಂಕ, ಭಯ, ತಲ್ಲಣ, ಶೌರ್ಯಪ್ರದರ್ಶನ ಮೊದಲಾದವುಗಳನ್ನು ಇಲ್ಲಿ ಚಿತ್ರಿಸಲಾಗಿದೆ.

NOT TO BE REPUBLISHED @KTBS

[ರಾತ್ರಿ, ಮಹಾರಾಜ ಕಂಸನ ಅರಮನೆಯ ಬಿಸಿಲುಮಚ್ಚು. ಅಲ್ಲಿ ಮಂತ್ರಿ, ವೈದ್ಯ ಗುಸು ಗುಸು ಮಾತಾಡುತ್ತಿದ್ದಾರೆ. ಒಬ್ಬ ಸೇವಕ ಓಡಿಬಂದು "ಒಡೆಯರು ಬರ್ತಾ ಇದಾರೆ" ಎನ್ನುತ್ತಾನೆ. ಮಂತ್ರಿ ಮತ್ತು ಇತರರು ತಕ್ಷಣ ಎದ್ದು ಕಂಸನನ್ನು ನಿರೀಕ್ಷಿಸುತ್ತಾ ನಿಲ್ಲುತ್ತಾರೆ. ಎರಡೂ ಪಕ್ಕ ದೀವಟಿಗೆಯವರು. ಕಂಸ ರಂಗಕ್ಕೆ ಧಾವಿಸುತ್ತಾನೆ. ಮೆಟ್ಟಿಲು ಹತ್ತಿ ಬಂದಿರೋದರಿಂದ ಏದುಸಿರು ಬಿಡುತ್ತಾ ಇದ್ದಾನೆ.]

**ಕಂಸ :** ಕೃಷ್ಣ ... ಕೃಷ್ಣ... ಕೃಷ್ಣ... ಕೇಳೀ ಕೇಳೀ ನನ್ನ ಕಿವಿ ತೂತು ಬಿದ್ದುಹೋದವು ... ಯಾರು? ಯಾರು? ಈ ಕೃಷ್ಣ..? ಹಾಲು ಕೊಡಲು ಹೋದ ಪೂತನಿಯ ರಕ್ತ ಹೀರಿದನಂತೆ...... ! ಸವಾರಿ ಮಾಡು ಅಂತ ಬೆನ್ನೊಡ್ಡಿದರೆ ಶಕಟನ ಸೊಂಟಾನೆ ಮುರಿದನಂತೆ.. .. .. ! ಅವನ ಕೈಯಲ್ಲಿ ತೃಣಾವರ್ತ ಆಟದ ಬುಗುರಿಯಾಗಿ ಹೋದ..! ಧೇನುಕ ಬೇಲದ ಹಣ್ಣು ಬಡಿಯೋ ಬಡಿಗೆಯಾದ.. .. .. ! ಗೋವರ್ಧನಬೆಟ್ಟ ಯಕ್ಕಶ್ಚಿತ್ ಛತ್ರಿಯಾಗಿ ಹೋಯ್ತು! ಯಾರು....? ಯಾರ್ರಿ ಈ ಕೃಷ್ಣ? ಈ ಗೊಲ್ಲರ ಪೋರನಿಗೆ ಈ ಪಾಟಿ ಶಕ್ತಿನಾ.. .. ..? ಎಲ್ಲಿಂದ ಬಂತು ಈ ಶಕ್ತಿ? ಯಾರು ಕೊಟ್ರು ಈ ಶಕ್ತಿ?

**ಮಂತ್ರಿ :** [ತೊದಲುತ್ತಾ] ನಮ್.. ..ಗೂಢಚಾರ್ರು ಶೋಧನೆ ಮಾಡ್ತಿದ್ದಾರೆ ಒಡೆಯಾ ....!...

**ಕಂಸ :** [ರೇಗಿ] ನಮ್.. ..ಗೂಢಚಾರ್ರು ಶೋಧನೆ ಮಾಡ್ತಿದ್ದಾರೆ ಒಡೆಯಾ ....ಎಷ್ಟು ದಿನಾರಿ ಶೋಧನೆ ಮಾಡೋದು.. ..? ಬೆಂಕಿ, ಕೈ ಇಟ್ಟರೆ ತಕ್ಷಣ ಸುಡುತ್ತೆ...

ಹಾವು, ಕಾಲಿಟ್ಟರೆ ತಕ್ಷಣ ಕಚ್ಚತ್ತೆ... ... ಶೋಧನೆ ಮಾಡ್ತಾರಂತೆ ಶೋಧನೆ.. .. ನಿಮ್ಮ ಮುಖಕ್ಕೆ ಮಂಗಳಾರತಿ ಎತ್ತ .. ...

**ಮಂತ್ರಿ** : [ಮುಖ ತಿಕ್ಕಿಕೊಳ್ಳುತ್ತಾ] ಮಾಹಿತಿ ಸಂಗ್ರಹ ಕೊನೇ ಹಂತಕ್ಕೆ ... ...



**ಕಂಸ** : ಕೊನೇ ಹಂತಕ್ಕೆ ! ಯಾರ ಕೊನೆ ಹಂತಕ್ಕೆ ? (ಅಣಕದ ನಗೆ ನಕ್ಕು) ಅಹ್ಹಾ.. ..ಕೊನೇ ಹಂತಕ್ಕೆ ಬಂದಿದೆ.. (ಇದ್ದಕ್ಕಿದ್ದಂತೆ ಲೋಕಾಭಿರಾಮಕ್ಕೆ ಬಂದು) ಬರ್ಲಿ ಬಿಡಿ.. .. ಬೇಜಾರು ಮಾಡ್ಕೋಬೇಡಿ ಇವ್ರೆ... ...ನಾನು ಹೇಳಿದೆನಲ್ಲ ಆ ಇಬ್ರು.....

**ಮಂತ್ರಿ** : (ಉತ್ಸಾಹಿತನಾಗಿ) ಇವರೇ ಒಡೆಯಾ ಅವರು... ಇವ ಶೈಲಿಕ ...ಇವ ದುರ್ವಿಧ...

**ಶೈಲಿಕ-ದುರ್ವಿಧ** : (ಹಲ್ಲು ಗಿಂಜುತ್ತಾ) ನಮಸ್ಕಾರ ಅನ್ನದಾತ ...(ಕಂಸನ ಕೈ ಮುಟ್ಟಿ ಕಣ್ಣಿಗೆ ಒತ್ತಿಕೊಳ್ಳುತ್ತಾ)

**ಶೈಲಿಕ** : ಇದು ನಿಮ್ಮ ಕೈ ಅಲ್ಲ ನಿಮ್ಮ ಕಾಲು...

**ದುರ್ವಿಧ** : ಕಾಲಲ್ಲ ... ನಿಮ್ಮ ಎಕ್ಕಡ...

**ಕಂಸ** : (ನಕ್ಕು) ಶಹಬ್ಬಾಶ್......(ಇಬ್ಬರಿಗೂ ಬೆನ್ತಟ್ಟಿ... ಕೈತೋರಿಸುತ್ತಾ)...ಇದು ಕಾಲಲ್ಲ..

ಎಕ್ಕಡಾನೂ ಅಲ್ಲ ಯಮಪಾಶ!......ತಿಳ್ಕೊಳ್ಳಿ..... ಹಾ....! ಏರ್ಪಾಡೆಲ್ಲ ಆಗಿದೆಯಾ......?

**ಶೈಲಿಕ** : (ಉಗುಳು ನುಂಗಿ).. ಆಗಿದೆ ಒಡೆಯಾ .. ..ಸಾಹೇಬ್ರೆ ಬಂದು ಖುದ್ದು ಪರಾಂಬರಿಸಿದ್ದಾರೆ.. .

© KTBS NOT TO BE REPUBLISHED

ಮಂತ್ರಿ : ಹೌದು ಒಡೆಯಾ.....ಕ್ರೀಡಾಂಗಣಕ್ಕೆ ಇರೋದು ಒಂದೇ ಹೆಬ್ಬಾಗಿಲು.. ..ಬಾಗಿಲವಾಡದ ಕಮಾನಿಗೆ ಕಿರುಗತ್ತಿ ಅಲಂಕಾರ .. ಬಾಗಿಲವಾಡದ ಕಮಾನಿನ ಮೇಲೆ ಗಾಜಿನ ರಾಜಗೋಪುರ.. ... ಅದೇನಾದ್ರೂ ತಲೇ ಮೇಲೆ ಬಿತ್ತು ಅಂದ್ರೆ.. .. ..ಶ್ರೀಮದ್ ರಮಾರಮಣ ಗೋವಿಂದಾ ಗೋವಿಂದ . . .

ಕಂಸ : ಆದ್ರೆ ಅದು ತಲೇ ಮೇಲೇ ಬೀಳ್ಬೇಕಲ್ಲಾ?

ಶೈಲಿಕ : ಬೀಳತ್ತೆ ಬೀಳತ್ತೆ. . .ಇಡೀ ರಚನೆ ಒಂದು ಸಣ್ಣ ಕೀಲಿನ ಮೇಲೆ ನಿಂತಿರ್ತದೆ. ಆ ಕೀಲು ಎಳೆದುಬಿಟ್ರೆ. . . ಮುಗೀತು.. ..!

ಕಂಸ : ಅಬ್ಬ !. . . ಒಳ್ಳೇ ರಾಕ್ಷಸ ಕಣ್ರೀ ನೀವು. . . ಏನು ಬುದ್ಧಿ ಏನ್ಕತೆ. . ಆ ಪಿಳ್ಳಂಗೋವಿ ಕೃಷ್ಣ ಅದೇ ಬಾಗ್ಲಲ್ಲಿ ತಾನೆ ಬರ್ಬೇಕು ?

ಮಂತ್ರಿ : ಬೇರೆ ದಾರೀನೆ ಇಲ್ಲಾ ಅಂತೀನಿ. . .!

ಕಂಸ : ಅಂತೀರಿ ನನ್ನ ತಲೆ ತಿಂತೀರಿ.. .. ನಿಮಗೆ ತಲೆ ಇದೆಯೇನ್ರಿ? ಸುಮ್ನೇ ಇನ್ನೊಂದು ಬಾಗಿಲು ಇಡಿ.

ಮಂತ್ರಿ : ಇನ್ನೊಂದು ಬಾಗ್ಲಾ. . . ?

ಕಂಸ : ಎಲ್ರೂ ಬರೋ ಬಾಗ್ಲಲ್ಲಿ ನಾನೂ ಬರೋಕಾಗುತ್ತಾ ಮತ್ತೆ . . ?

ಶೈಲಿಕ : ಆದ್ರೆ ಒಡೆಯಾ. . .

ಕಂಸ : ನಿನ್ನ ಬುರುಡೆ ಒಡೆಯಾ. . .ಸರ್ಕಳ್ರಯ್ಯ ಆಚೆ. . . . . ಏಯ್. .. ನೀನು ಬಾ ಈ ಕಡೆ. . .

ದುರ್ವಿಧ : ಅಪ್ಪಣೆಯಾಗಬೇಕು ಅನ್ನದಾತ. . .

ಕಂಸ : ನಮ್ಮ ಪಟ್ಟದ ಆನೆ ಹೇಗಿದೆ ಹೇಳು. . ಏನು ಅದರ ಹೆಸರು. . .? ಹಾ. . ಕುವಲಯಾಪೀಡ ... .....!ಕುವಲಯಾ ಪೀ. . .ಡ. .!

ದುರ್ವಿಧ : ಔಷಧ – ಪಥ್ಯ ಎಲ್ಲ ಮಾಡಿದೀನಿ . . ಹಳದಿ ಬಣ್ಣ ನೋಡಿದ್ರೆ ಸಾಕು . . ಘೀ. . .ಅಂತ ಮೈಮೇಲೇ ಬೀಳತ್ತೆ. . .

ಕಂಸ : ಬೀಳಬೇಕು ಮತ್ತೆ. . ಬೀಳಬೇಕು...ಕೆಲ್ಸ ಆದಮೇಲೆ ಮದ್ದು ಹಾರ್ಸಿ ಸುಟ್ಟುಬಿಡಿ ಅದನ್ನ ಬೇರೆ ಇನ್ನೇನಾದ್ರೂ ಧಾಂದ್ಲೆ ಮಾಡೀತು . . ಮಕ್ಕಳು ಮರಿ ಇರ್ತಾವೆ..... ಪಾಪ. . .

ದುರ್ವಿಧ : (ಲೊಚಗುಟ್ಟಿ) ಅಲ್ವೇ ಮತ್ತೇ. . . !

ಕಂಸ : ನೀವಿನ್ನು ಹೊರಡಿ. .. .(ಹೊರಡುತ್ತಾರೆ) ಸ್ವಲ್ಪ ಇರಿ . . .ಕೊಯ್ದ ಮೋಟು ಯಾರಿಗೂ ಗೊತ್ತಾಗಬಾರದು. . ಹಾಂ. ..ನಮ್ಮೂರಲ್ಲಿ ಕಂಬ ಕಂಬಕ್ಕೂ ಕಿವಿ. ಕಮಕ್

@KTBS NOT TO BE REPUBLISHED

ಕಿಮಕ್ ಅಂದ್ರೆ (ಕೈ ತೋರಿಸಿ) ಇದು ಕೈ ಅಲ್ಲ ... ಕಾಲಲ್ಲ ... ಎಕ್ಕಡಾನೂ ಅಲ್ಲ.. (ಶೈಲಿಕ–ದುರ್ವಿಧ ಮುಖ ಮುಖ ನೋಡಿಕೊಂಡು)

**ಶೈಲಿಕ–ದುರ್ವಿಧ :** (ಒಟ್ಟಿಗೇ) ಯಮಪಾಶ. . .

**ಕಂಸ** : ಹ. . .ಹ್ಹ. . ಹ್ಹ. . .ಬಲೇ ತಮಾಷೆ ಕಣ್ರೀ ನೀವು. . .(ಶೈಲಿಕ–ದುರ್ವಿಧ_ಹಿಂದು ಹಿಂದಕ್ಕೆ ಸರಿದು ನಿರ್ಗಮಿಸುತ್ತಾರೆ.) ಮಂತ್ರೀ ಇವರ ಮೇಲೂ ಒಂದು ಕಣ್ಣಿಡು ನೀನು . . . ರಾಜಕೀಯದಲ್ಲಿ ಯಾರನ್ನು ಯಾರೂ ನಂಬಬಾರ್ದು. . . ನಿನ್ನನ್ನು ನೀನೂ ಕೂಡಾ . . ...ಹಹ್ಹಾ. . (ಕಂಸ ದಡಬಡ ಹೋಗಿ ಆಸನದ ಮೇಲೆ ಕೂತು, ಕಾಲು ನೀಡಿ, ಅಂಗಾಲು ಆಡಿಸುತ್ತಾ. . ) ಮಂತ್ರೀ ಬಾ ಇಲ್ಲಿ ಕೂತ್ಕೋ.

**ಮಂತ್ರಿ** : (ನಿಂತೇ) ಇರ್ಲಿ ಬುದ್ಧೀ

**ಕಂಸ** : (ಬೇಸರದ ರಾಗದಲ್ಲಿ) ಏನು ಇರಬೇಕ್ರಿ. . .? ಮಂಡೇಲಿ ಕೊಂಚ ಮಾಂಸ ಇರಬೇಕು. ಹಾಂ. . . (ಲೋಕಾಭಿರಾಮವಾಗಿ) ನೀವು ನೋಡಿದ್ದೀರೇನ್ರಿ. . . ?

**ಮಂತ್ರಿ** : ಏನಂದ್ರಿ ಒಡೆಯಾ. . .?

**ಕಂಸ** : (ರೇಗಿ) ನೀವು ನೋಡಿದ್ದೀರೇನ್ರಿ ಆ ಕೃಷ್ಣನ್ನ . . .?

**ಮಂತ್ರಿ** : ಓಹೋ . . .! ನೋಡ್ದೆ ಒಡೆಯಾ. . .

**ಕಂಸ** : ಹೇಗಿದಾನ್ರಿ ಆ ಘಟಿಂಗ. . .?

**ಮಂತ್ರಿ** : (ಏನು ಹೇಳಬೇಕೋ ತೋಚದೆ) ಹಿಹ್ಹೀ. . ಇದ್ದಾನೆ ಒಡೆಯಾ. .

**ಕಂಸ** : ಇದ್ದಾನೆ . . ಗೊತ್ತು. . . ಯಾರ ಹಾಗೆ ಇದ್ದಾನೆ ಅವ . . ?

**ಮಂತ್ರಿ** : ಅಂದ್ರೆ . . ತಾವು ಹೇಳೋದು. . . ?

**ಕಂಸ** : (ತಾರಮ್ಮಯ್ಯ ಮಾಡಿ) ತಮಗೆ ತಿಳೀಲಿಲ್ಲ. . .! ಅಲ್ಲಾ?

**ಮಂತ್ರಿ** : (ತಲೆ ಆಡಿಸುತ್ತಾನೆ)

**ಕಂಸ** : ನಿಮ್ಮ ತಲೆ. . .! (ಥಟ್ಟನೆ ಮುಂದೆ ಬಾಗಿ ಕೂತು) ಆ ಹುಡುಗನ್ನ ನೀವು ಹತ್ತಿರದಿಂದ ನೋಡಿದ್ರಿ ಅಲ್ವಾ. . . ?

**ಮಂತ್ರಿ** : ನೋಡಿದೆ ಒಡೆಯಾ. . .

**ಕಂಸ** : ಅವನು ನಮ್ಮ ದೇವಕಿ ಮಗ ಅನ್ಸತ್ತಾ ನಿಮಗೆ. . ? ಕಣ್ಣು . . !? ಮೂಗು.!? ತುಟಿ. . !? ಗದ್ದ. . !? ಏನಾದ್ರು ಹೋಲಿಕೆ ಇದೆಯಾ.? ದೇವಕೀ ಥರಾ? ಅಥವಾ ವಸುದೇವನ ಥರಾ ? ಹೊಟ್ಟೇಲಿ ಹುಟ್ಟಿದ್ರೆ ಏನಾದ್ರು ಒಂದು ಹೋಲಿಕೆ ಇರ್ಲೇಬೇಕಲ್ಲ....? ನನ್ನ ನೋಡಿ . . ಈ ಕೈ ಬೆರಳು . .! ಎಲ್ಲಾ ನಮ್ಮ ಅಪ್ಪನದೇ . .ಕೈ ಮಾತ್ರ ನಂದು . . ! (ಕೈ ತೋರಿಸುತ್ತಾನೆ)

**ಮಂತ್ರಿ** : (ಕೈಯನ್ನೇ ದುರುದುರು ನೋಡಿ) ವಸುದೇವ ದೇವಕಿ ಹೋಲಿಕೆ ಏನೂ ಕಾಣಲಿಲ್ಲ. . ಆದ್ರೆ. .. ಆ ಕೈ ಮಾತ್ರಾ ...

@KTBS NOT TO BE REPUBLISHED

**ಕಂಸ** : ಕೈ ಮಾತ್ರಾ . . .


**ಮಂತ್ರಿ** : ಹೀಗೇ ಕಾಣ್ತು.. . . .

**ಕಂಸ** : ಎಲಾ ಇವ್ನಾ . . ! (ಧಡಕ್ಕನೆ ಎದ್ದು ಕೂತು) ಮಕ್ಕಳು ಸೋದರ ಮಾವನ್ನ ಹೋಲ್ತಾವೇನ್ರೀ.?

(ನಿಧಾನ ಕತ್ತಲು)

## ದೃಶ್ಯ-೨

(ವಸುದೇವ ದೇವಕಿಯರನ್ನು ಕಂಸ ಬಂಧಿಸಿಟ್ಟಿರುವ ಸ್ಥಳ. ಇಬ್ಬರೂ ಸ್ವರ್ಣ ಶೃಂಖಲೆಯಲ್ಲಿದ್ದಾರೆ. ದೇವಕಿ ವಾತಾಯನದ ಬಳಿ ನಿಂತಿದ್ದಾಳೆ. ವಸುದೇವ ಚಿಂತಾಮಗ್ನನಾಗಿ ನಿಂತಿದ್ದಾನೆ.)



**ವಸುದೇವ** : ಅಕ್ರೂರ ಹೇಳಿದ – ಎದೆಯುದ್ದ ಬೆಳ್ದಿದಾರೆ ಮಕ್ಕಳು ಅಂತ. ...ಹದಿನಾರುವರ್ಷ ಆಯ್ತು ಕೃಷ್ಣನ್ನ ನೋಡಿ. . . ನನ್ನ ಕಣ್ಣಲ್ಲಿ ಅವನಿನ್ನೂ ಎಳೆಗೂಸೆ. . .! ಲೋಕದ ಎಲ್ಲಾ ಮಕ್ಕಳು ಅಪ್ಪ ಅಮ್ಮನ ಕಣ್ಣೆದುರು ದಿನಾ ದಿನಾ ಚೂರು ಚೂರು ಬೆಳೀತಾರೆ. . . ಮಕ್ಕಳು ಬೆಳೆಯೋದು ನೋಡೋ ಅಪ್ಪ ಅಮ್ಮಂದಿರ ಪುಣ್ಯವೇ ಪುಣ್ಯ . . .ಮಕ್ಕಳನ್ನು ಆಡಿಸಲಿಲ್ಲ. . .ಆರೈಕೆ ಮಾಡಲಿಲ್ಲ. . . ತೊದಲು ನುಡಿ ಕೇಳಲಿಲ್ಲ. . ತೂಗಲಿಲ್ಲ. . . ಜೋಗುಳ ಹಾಡಲಿಲ್ಲ. . (ವಸುದೇವ ಮಾತನಾಡುತ್ತಿರುವಾಗ ಬಾಗಿಲು ಬಡಿಯುವ ಸದ್ದು)

**ದೇವಕಿ** : (ತಕ್ಷಣ ಕಣ್ಣೊರಸಿಕೊಂಡು) ನೋಡಿ. . .. . ಯಾರೋ ಬಂದ ಹಾಗಿದೆ. ..

**ವಸುದೇವ** : (ಬಾಗಿಲು ತೆರೆಯುತ್ತಾ) ಓಹೋ . .ಮಹಾರಾಜ . . ಬಾ. .ಬಾ. . .

**ಕಂಸ** : (ಕೈ ಬಿಚ್ಚಿ ಮಡಿಚಿ ಮಾಡುತ್ತಾ) ನಿದ್ದೆ ಬಂತಾ ಭಾವಾ. . . ? ಹುಂ . . ಬರದೆ ಏನು ಮಾಡುತ್ತೆ. . ? ಅರಸನ ಅಂಕೆಯಿಲ್ಲ. . . ದೆವ್ವದ ಕಾಟ ಇಲ್ಲ. . .

**ವಸುದೇವ** : ಬಾ. . . ಕೂತುಕೋ... . .

**ಕಂಸ :** ಶಹಬ್ಬಾಷ್ ಭಾವ. . .ನನ್ನ ಮನೇಲಿ ನನಗೇ ಉಪಚಾರ. . .(ಕೂತು ಮೈಮುರಿದು) ನನಗಂತೂ ರಾತ್ರಿಯೆಲ್ಲಾ ನಿದ್ದೇನೇ ಇಲ್ಲ. . . !

**ವಸುದೇವ :** ರಾಜಕಾರ್ಯಾನೇ ಹಾಗೆ ! ಹತ್ತು ಜನರ ಮಧ್ಯೆ ಕೂತಾಗ ಜೋಲಿ. . ಏಕಾಂಗಿ ಇದ್ದಾಗ ಒತ್ತಿದರೂ ಮುಚ್ಚದ ರೆಪ್ಪೆ. . . !

**ಕಂಸ :** (ಗಟ್ಟಿಯಾಗಿ ನಕ್ಕು) ಮೊದಲಿಂದಲೂ ಅಷ್ಟೆ ಬಲೇ ತಮಾಷೆ ನೀನು. . .!

**ವಸುದೇವ :** ದೇವಕೀ. . .ನಿಮ್ಮ ಅಣ್ಣನಿಗೆ ಸ್ವಲ್ಪ ಹಾಲಾದರೂ ಕೊಡು. . . .

**ಕಂಸ :** (ಕಿಸಕ್ಕನೆ ನಕ್ಕು) ಹಾಲಾ. . .? ಹಾಲಾಹಲ ಕುಡಿಯೋರು ನಾವು . .ಹಾಲು ಹಿಡಿಸೋಲ್ಲ ನಮಗೆ. . .ಕ್ಷೀರಸಾಗರ ಮಥನದ ಕಥೆ ಗೊತ್ತಲ್ಲ ನಿಮಗೆ. . .? ಬೇಡ ದೇವಕಿ ಹಾಲು ಗೀಲು ಏನೂ ಬೇಡ. ಸ್ವಲ್ಪ ಮಾತಾಡಿ ಹೋಗೋಣ ಅಂತ ಬಂದೆ. . .

**ವಸುದೇವ :** ನಿನ್ನ ಕುಂಬಳ, ನಿನ್ನ ಕುಡುಗೋಲು . . . . ಮಾತಾಡು ಮಹಾರಾಜ. . .

**ಕಂಸ :** ನೋಡಿದೆಯಾ. . .ನೋಡಿದೆಯಾ. . .ಇನ್ನೂ ನನ್ನ ಮೇಲೆ ಅಸಮಾಧಾನ . . ನನ್ನ ತಂಗಿ ಮೇಲೆ ನನಗೆ ಪ್ರೀತಿ ಇಲ್ಲ ಅಂದ್ಕೊಂಡೆಯಾ. . . ? (ಕೈ ಚಾಚಿ ದೇವಕಿಯ ಕೈ ಹಿಡಿದು) ಸಂಕೋಲೆ ಹಾಕ್ತಿದೀನಿ ನಿಜ. . .ಆದ್ರೆ ನೂರಕ್ಕೆ ನೂರು ಶುದ್ಧ ಅಪರಂಜೀದು. . . ! ಕೊರಳಿಗೆ ಮೂರೆಳೆ ಕೈಗೆ ಎರಡೆಳೆ ಕಾಲಿಗೆ ಒಂದೆಳೆ–ಎಲ್ಲಾ ಚಿನ್ನದ್ದೇ. . .ಇಪ್ಪತ್ತೈದು ವರ್ಷ ಆಯ್ತಲ್ಲ ಮಾಡ್ಸಿ. . .ಸ್ವಲ್ಪ ಆದರೂ ಕಪ್ಪಾಗಿದೆಯಾ. . . ? ಅದು ಪ್ರೀತಿ ಅಂದ್ರೆ. . . .ಇರ್ಲಿ ಬಿಡು ಭಾವ.. (ಎದ್ದು ವಾತಾಯನದ ಬಳಿಗೆ ಹೋಗಿ ನಿಂತು) ನಿಮಗೊಂದು ವಿಶೇಷ ಸುದ್ದಿ ಹೇಳ್ಬೇಕು. . . ಇವತ್ತು ಮಥುರಾನಗರದಲ್ಲಿ ಧನುರ್ಯಾಗ ಮಹೋತ್ಸವ. ದೇಶದ ಎಲ್ಲಾ ಕಡೆಯಿಂದ್ಲೂ ಸಾಹಸೀ ಯುವಕರು ಬಂದಿದ್ದಾರೆ . . . ರಾಜನ ಮುಂದೆ ತಮ್ಮ ಶಕ್ತಿ ಪ್ರದರ್ಶಿಸಬೇಕು. . ಮಥುರಾವೀರ ಪ್ರಶಸ್ತಿ ಗೆಲ್ಲಬೇಕು . . . ಏನು ಹುಚ್ಚೋ ಈ ಹುಡುಗರದ್ದು

**ವಸುದೇವ :** ಇವತ್ತಾ ಬಿಲ್ಲಹಬ್ಬ. . .?

**ಕಂಸ :** ಯಾಕೆ? ನಿಮಗೆ ಗೊತ್ತಿಲ್ವಾ. . ? ಅದೃಷ್ಟವಂತರು ನೀವು. . ನಿಮಗೆ ಏನೂ ಗೊತ್ತಾಗೋಲ್ಲ .. ಹೊತ್ತು ಹೊತ್ತಿಗೆ ಊಟ ಹೊತ್ತು ಹೊತ್ತಿಗೆ ನಿದ್ದೆ ಬಿಸಿಲಲ್ಲಿ ಬೇಯೋ ಹಾಗಿಲ್ಲ. . .ಮಳೇಲಿ ತೋಯೋ ಹಾಗಿಲ್ಲ. . . ನಾಕು ಗೋಡೆ ಮಧ್ಯೆ ನಿಮ್ದೇ ಒಂದು ಪ್ರಪಂಚ. . .ಒಂದು ನೊಣ ಕೂಡಾ ಒಳಗೆ ಬರೋಹಾಗಿಲ್ಲ. . ಒಂದು ನೊಣ ಹೊರಗೆ ಹೋಗೋಹಾಗಿಲ್ಲ

**ವಸುದೇವ:** (ನಕ್ಕು) ಆದ್ರೂ ಮುಪ್ಪು ಸೆರೆಮನೇ ಒಳಗೆ ಬಂದೇ ಬಿಡ್ತು. . .

**ದೇವಕಿ :** ನೆಮ್ಮದಿ ಸೆರೆಮನೆಯಿಂದ ಹೊರಗೆ . . .

© KTBS NOT TO BE REPUBLISHED

**ಕಂಸ :** ಆದ್ರೂ. . .ಆದ್ರೂ. . . ದೇವಕೀ. . .ಬಂಧನದಲ್ಲಿ ಇದ್ರೂ ನೀವು ಸ್ವತಂತ್ರರು. . . ನಾವೋ ಬಯಲಲ್ಲಿದ್ರೂ ಬಂಧಿಗಳು. . . ಎಲ್ಲಿ ಹೋದ್ರೂ ಈ ಅಂಗರಕ್ಷಕರ ಪೀಡೆ. . . ನಿಶ್ಚಿಂತವಾಗಿ ಊಟ ಮಾಡೋಹಾಗಿಲ್ಲ. . ನಿಶ್ಚಿಂತವಾಗಿ ನಿದ್ದೆ ಮಾಡೋಹಾಗಿಲ್ಲ. . . ಕಣ್ಣು ಮುಚ್ಚಿದರೆ – ತಕಪಕ ಕುಣೀತಾ ನಾನು ಕೊಂದ ಮಕ್ಕಳು ಕಣ್ಣು ಮುಂದೆ ಬರ್ತಾವೆ. . . ಹದಿನಾರು ವರ್ಷದ ಹಿಂದೆ ಅಷ್ಟಮೀ ರಾತ್ರಿ ಅದೆಷ್ಟು ಮಕ್ಕಳು ಹುಟ್ಟಿದವೋ ಈ ದೇಶದಲ್ಲಿ . . .ಎಷ್ಟೂ ಅಂತ ಅವನ್ನ ಕೊಲ್ಲಿಸಲಿ. . . ? ದೇವಕೀ ಹೊಟ್ಟೇಲಿ ಹುಟ್ಟೋ ಎಂಟನೇ ಮಗ–ಅಷ್ಟಮಪುತ್ರ–ನನ್ನ ಕೊಲ್ಲಬೇಕು.. ಆದ್ರೆ ನಿನ್ನ ಎಂಟನೇ ಮಗು ಪುತ್ರ ಅಲ್ಲ... ಪುತ್ರಿ. . ! ದೇವಕೀ ದೇವಕೀ . . .ಬೆನ್ನಿಗೆ ಬಿದ್ದ ಅಣ್ಣನಿಗಿಂತ ಹೊಟ್ಟೇಲಿ ಹುಟ್ಟಿದ ಕೂಸು ನಿನಗೆ ದೊಡ್ಡದಾ. . .? ದಯವಿಟ್ಟು.. . ದಯವಿಟ್ಟು . . ಹೇಳು. . ನಿನ್ನ ಎಂಟನೇ ಮಗನ್ನ ಎಲ್ಲಿ ಬಚ್ಚಿಟ್ಟಿದ್ದೀ . . ? ನನಗೆ ರಾಜ್ಯ ಬೇಡ . . ಕೋಶ ಬೇಡ..ಪಟ್ಟ ಬೇಡ . ಪಗಡಿ ಬೇಡ. . . ಎಲ್ಲಾ ನಿನ್ನ ಗಂಡನಿಗೇ ಕೊಡ್ತೀನಿ . . ನಿನ್ನ ಮಗನ್ನ ಎಲ್ಲಿ ಬಚ್ಚಿಟ್ಟಿದ್ದೀ. . . ? ಹೇಳು ಎಲ್ಲಿ ಬಚ್ಚಿಟ್ಟಿದ್ದೀ.. ? **(ದೇವಕಿಯ ಭುಜ ಹಿಡಿದು ಕಂಸ ಆವೇಶದಿಂದ ಅಲುಗಿಸುತ್ತಾನೆ)**

**ದೇವಕಿ :** (ತಣ್ಣಗೆ) ನಾನು ನಿಜ ಹೇಳಿದ್ರೆ ನೀನು ನಂಬೋದಿಲ್ಲ. . .

**ವಸುದೇವ :** ದೇವಕೀ. . . !

**ಕಂಸ :** ಷ್. . .! (ದೇವಕಿಯ ಗಲ್ಲ ಹಿಡಿದು ಅಲುಗಿಸಿ) ಹೇಳು. . ಹೇಳು ನಿನ್ನ ಮಾತು ನಾನು ನಂಬ್ತೀನಿ..ಹೇಳು..

**ದೇವಕಿ :** ಬಚ್ಚಿಟ್ಟದ್ದು ನಿಜ. . .ಒಂಬತ್ತು ತಿಂಗಳು. . .ಇಲ್ಲಿ. .ಇಲ್ಲಿ. . ಬಚ್ಚಿಟ್ಟಿದ್ದೆ ಮಗೂನ..

**ಕಂಸ :** ಮತ್ತೆ ಅದೇ ಬೊಗಳೆ.... ಹೇಳೇ...ಛೇ...(ಶತಪಥ ಹಾಕಿ, ಥಟ್ಟನೆ ನಿಂತು) ಹದಿನಾರು ವರ್ಷದ ಹಿಂದೆ ಅಷ್ಟಮಿ ರಾತ್ರಿ ಹುಟ್ಟಿದ ಎಲ್ಲ ಮಕ್ಕಳನ್ನೂ ಕೊಲ್ಲಿಸಿದೆ... ಎಲ್ಲ... ಎಲ್ಲ... ಮಕ್ಕಳನ್ನೂ... (ರಂಗದ ತುಂಬ ಎಳೆ ಮಕ್ಕಳ ಆಕ್ರಂದನ. ವಸುದೇವ ದೇವಕಿ ಕಿವಿ ಮುಚ್ಚಿಕೊಳ್ಳುತ್ತಾರೆ. ಕಂಸ ಗಹಗಹಿಸಿ ನಗುತ್ತಾ) ಲಕ್ಷ. . .ಲಕ್ಷ. . ಲಕ್ಷ. . ಮಕ್ಕಳು. . .ಆದ್ರೆ ಒಂದು ಮಗೂನ ಮಾತ್ರ ಇನ್ನೂ ಕೊಲ್ಲಲಿಕ್ಕೆ ಆಗಿಲ್ಲ......ಅವ್ನೇ . . .ಅವನೇ . . ಆ ಗೋಕುಲದ ಗೊಲ್ಲರ ಹುಡುಗ ಪಿಳ್ಳಂಗೋವಿ ಕೃಷ್ಣ. . ಥೆ. . .ಕೊಲ್ಲಲಿಕ್ಕೆ ಬಂದವರನ್ನೆಲ್ಲಾ ಅವನೇ ಕೊಂದು ಬಿಟ್ಟ.. . ಹಾ. . ಆ ಕೃಷ್ಣನ ಅಪ್ಪ ನಂದ ನಿನ್ನ ಗಂಡನ ಬಾಲ್ಯ ಸ್ನೇಹಿತ, ಪರಮಾಪ್ತ ಪ್ರಾಣಮಿತ್ರ. . . . .(ವಸುದೇವನ ಕಡೆ ತಿರುಗಿ) ನಿನ್ನ ಮೊದಲ ಹೆಂಡ್ತಿ ರೋಹಿಣಿ, ಅವಳ ಪಿಳ್ಳೆ ಬಲರಾಮ ಆ ನಂದನ ಮನೇಲೇ ಇರೋದು. . . ಅರಮನೆ ಕವಳಕ್ಕೆ ಕತ್ರಿ ಹಾಕೋಕೆ ಬಿದ್ದು ಇದ್ಕೊಳ್ಳಿ ಅಲ್ಲೇ ಅಂತ ಸುಮ್ನೆ ಇದ್ದೆ . . .ಈಗ ನೋಡಿದ್ರೆ ನೀವೆಲ್ಲ ಕೂಡಿ ಏನೋ ಮಸಲತ್ತು ಮಾಡ್ತಿರೊ ಹಾಗಿದೆ . . .(ಇಬ್ಬರನ್ನೂ ನೋಡುತ್ತಾ ತಗ್ಗಿದ ದನಿಯಲ್ಲಿ) ಆ ಕೃಷ್ಣ ನಿಮ್ಮ ಮಗನೇ ಇರಬೇಕು. . .ಇರ್ಬೇಕು ಏನು... ನಿಮ್ಮ ಮಗನೇ ಅವನು. . .! (ತನ್ನ ಅಂಗೈ ನೋಡಿಕೊಳ್ಳುತ್ತಾ) ನನ್ನ ಸೋದರಳಿಯ ಅವ್ನು. . .!

NOT TO BE REPUBLISHED @KTBS

**ದೇವಕಿ** : ಸುಳ್ಳು. . .ಕೃಷ್ಣ ನಮ್ಮ ಮಗ ಯಾಕೆ ಆದಾನು. . . ? (ಕಣ್ಣಲ್ಲಿ ನೀರು ತಂದುಕೊಂಡು) ಕೃಷ್ಣ ನಂದನ ಮಗ . . .ಕೃಷ್ಣ ಯಶೋಧೆ ಮಗ... (ಅಳುತ್ತಾ) ನನ್ನ ಮಗ ಅಲ್ಲ ಅವನು ನನ್ನ ಮಗ ಅಲ್ಲ ಅವನು. . .!

**ಕಂಸ** : (ಸಮಾಧಾನ ಧ್ವನಿಯಲ್ಲಿ) ನಿಮ್ಮ ಮಗ ಅಲ್ಲ. . .ಸರಿ ಮತ್ತೆ. . . ನಿಮ್ಮ ಮಗ ಅಲ್ಲ ಅವನು...! (ದುಡು ದುಡು ಬಾಗಿಲ ಬಳಿ ಹೋಗಿ, ಗಕ್ಕನೆ ತಿರುಗಿ ನೋಡಿ) ಅಂದ್ಮೇಲೆ ಅವನನ್ನ ಕೊಂದ್ರೆ ನಿಮಗೆ ಬೇಜಾರಿಲ್ಲ ... ಅಲ್ವಾ...?


(ರಂಗದಲ್ಲಿ ಕತ್ತಲು)

**ಕೌಶಲ :** ಆಲಿಸುವುದು.

**ಸಾಮರ್ಥ್ಯ :** ಗುಂಪು ಚಟುವಟಿಕೆಗಳ ನಿರ್ದೇಶನಗಳನ್ನು ಆಲಿಸಿ. ಅರ್ಥಮಾಡಿಕೊಂಡು ಆಂಗಿಕವಾಗಿ ಪ್ರತಿಕ್ರಿಯಿಸುವುದು.

**ಆಶಯ :** ಪೌರಾಣಿಕ ಪಾತ್ರವಾದ ಕಂಸ ಅಧಿಕಾರಶಾಹೀ ವ್ಯಕ್ತಿತ್ವದ ಒಂದು ಸಂಕೇತ. ಅಧಿಕಾರಕ್ಕಾಗಿ ಅರಮನೆಗಳಲ್ಲಿ ನಡೆಯುವ ಕಾರಸ್ಥಾನಗಳು, ಅಧಿಕಾರಸ್ಥರ ಆತಂಕ, ತಲ್ಲಣ, ಭಯಗಳು ನಿಚ್ಚಳವಾಗಿ ವ್ಯಕ್ತವಾಗಿವೆ. ಅಧಿಕಾರಲಾಲಸೆ, ಅಂತಸ್ತಿಗಾಗಿ ರಕ್ತಸಂಬಂಧವನ್ನೇ ಕಡಿದುಕೊಳ್ಳುವ ಸ್ವಭಾವವನ್ನಿಲ್ಲಿ ಕಾಣಬಹುದು. ಕೃಷ್ಣನನ್ನು ಕೊಲ್ಲುವ ಉದ್ದೇಶದಿಂದ ಮಥುರಾನಗರದಲ್ಲಿ ಬಿಲ್ಲಹಬ್ಬದ ನೆಪಮಾಡಿ ಸಂಚು ನಡೆಸುವುದು ನಾಟಕದ ವಸ್ತು. ಅವೆಲ್ಲಕ್ಕಿಂತ ಮುಖ್ಯವಾಗಿ, ನಾಟಕದ ಸಂಭಾಷಣೆಯ ಮೊನಚು, ವ್ಯಂಗ್ಯಭರಿತ ಹಾಸ್ಯ ಓದುಗರ ಮನ ಸೆಳೆಯುವುದು.

## ಕೃತಿಕಾರರ ಪರಿಚಯ



**ಡಾ. ಎಚ್. ಎಸ್. ವೆಂಕಟೇಶಮೂರ್ತಿ** ಅವರು (೧೯೪೪) **ದಾವಣಗೆರೆ ಜಿಲ್ಲೆಯ ಚೆನ್ನಗಿರಿ ತಾಲೂಕಿನ ಹೊದಿಗೆರೆಯಲ್ಲಿ** ಜನಿಸಿದರು. ಕನ್ನಡ ಪ್ರಾಧ್ಯಾಪಕರಾಗಿದ್ದ ಇವರು ಬಹುಮುಖ ಪ್ರತಿಭೆಯ ಸಾಹಿತಿ. ಇವರ **ಸಿಂದಾಬಾದನ ಆತ್ಮಕಥೆ, ಕ್ರಿಯಾಪರ್ವ, ಒಣಮರದ ಗಿಳಿಗಳು, ಋತುವಿಲಾಸ, ಎಷ್ಟೊಂದು ಮುಗಿಲು, ಅಮೆರಿಕಾದಲ್ಲಿ ಬಿಲ್ಲಹಬ್ಬ, ಭೂಮಿಯೂ ಒಂದು ಆಕಾಶ** ಮೊದಲಾದವು ಕವನ ಸಂಕಲನಗಳು. **ಒಂದು ಸೈನಿಕ ವೃತ್ತಾಂತ, ಕತ್ತಲೆಗೆ ಎಷ್ಟು ಮುಖ, ಚಿತ್ರಪಟ, ಅಳಿಲು ರಾಮಾಯಣ, ಸುಣ್ಣದ ಸುತ್ತು, ಊರ್ಮಿಳಾ ಹೂವಿ ಮತ್ತು ಸಂಧಾನ** ಮೊದಲಾದವು ಪ್ರಮುಖ ನಾಟಕಗಳು.

ಐದು ಬಾರಿ **ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ** ಸಂದಿದೆ. ಇವರ **ಋತುವಿಲಾಸ** ಅನುವಾದಿತ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪುರಸ್ಕಾರ ಲಭಿಸಿದೆ. **ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಹಾಗೂ ದೇವರಾಜ ಬಹದ್ದೂರ್ ಪ್ರಶಸ್ತಿ**ಗಳನ್ನು ಪಡೆದಿರುವ ಇವರು **ಕನ್ನಡದಲ್ಲಿ ಕಥನ ಕವನಗಳು** ಎಂಬ ವಿಷಯದ ಬಗೆಗೆ ಸಂಶೋಧನೆ ನಡೆಸಿ ಪಿಎಚ್.ಡಿ. ಪದವಿಗಳಿಸಿದ್ದಾರೆ.

©KTBS NOT TO BE REPUBLISHED

## ಪೂರ್ವ ಕಥೆ

ಮಥುರೆಯ ರಾಜನಾದ ಕಂಸ ತನ್ನ ಸೋದರಿ ದೇವಕಿಯ ವಿವಾಹವನ್ನು ವಸುದೇವನೊಡನೆ ವೈಭವದಿಂದ ನೆರವೇರಿಸಿ, ಮೆರವಣಿಗೆಯಲ್ಲಿ ಸಾಗುತ್ತಿದ್ದನು. ಆಗ ಅಶರೀರ ವಾಣಿಯೊಂದು ನಿನ್ನ ಸಾವಿಗೆ ದೇವಕಿಯ ಅಷ್ಟಮ ಪುತ್ರನೇ ಕಾರಣನಾಗುತ್ತಾನೆಂದು ಭವಿಷ್ಯ ನುಡಿಯಿತು. ಇದರಿಂದ ಕ್ರೋಧಗೊಂಡ ಕಂಸ ತಂಗಿಯನ್ನೇ ಕೊಲ್ಲಲು ಸಿದ್ಧನಾದ. ಆದರೆ ವಸುದೇವ ಅಡ್ಡ ಬಂದು ದೇವಕಿಯ ಗರ್ಭದಲ್ಲಿ ಹುಟ್ಟುವ ಎಲ್ಲ ಮಕ್ಕಳನ್ನು ನಿನಗೆ ಒಪ್ಪಿಸುತ್ತೇನೆಂದು ಮಾತು ಕೊಟ್ಟಿದ್ದರಿಂದ ಅವರನ್ನು ಸೆರೆಯಲ್ಲಿಟ್ಟನು. ವಸುದೇವ ಕೊಟ್ಟ ಮಾತಿನಂತೆ ಹುಟ್ಟಿದ ಎಲ್ಲ ಮಕ್ಕಳನ್ನೂ ಕಂಸನಿಗೆ ಒಪ್ಪಿಸುತ್ತಿದ್ದ. ಕಂಸ ಆ ಎಲ್ಲ ಮಕ್ಕಳನ್ನೂ ನಿರ್ದಯವಾಗಿ ಕೊಂದ. ಆದರೆ ಅಷ್ಟಮ ಗರ್ಭದಲ್ಲಿ ಶ್ರೀಮನ್ನಾರಾಯಣನು ಜನಿಸಿ ತನ್ನನ್ನು ಗೋಕುಲದ ನಂದಗೋಪನ ಮನೆಯಲ್ಲಿ ಬಿಟ್ಟು, ಅಲ್ಲಿರುವ ಹೆಣ್ಣು ಶಿಶುವನ್ನು ದೇವಕಿಯ ಮಡಿಲಿನಲ್ಲಿಡಬೇಕೆಂದು ವಸುದೇವನಿಗೆ ತಿಳಿಸಿದನು.

ಕಂಸ ಅಷ್ಟಮ ಗರ್ಭದಲ್ಲಿ ಹೆಣ್ಣುಮಗು ಹುಟ್ಟಿದ್ದನ್ನು ಕಂಡು ಆಶ್ಚರ್ಯಪಟ್ಟರೂ ಅದನ್ನು ಕೊಲ್ಲಲು ಹೋದಾಗ ಅದು ಆಕಾಶಕ್ಕೆ ನೆಗೆದು ನಿನ್ನನ್ನು ಕೊಲ್ಲುವವನು ಗೋಕುಲದಲ್ಲಿ ಬೆಳೆಯುತ್ತಿದ್ದಾನೆಂದು ಹೇಳಿ ಮಾಯವಾಯಿತು. ಇದರಿಂದ ಕಂಸ ಗೋಕುಲದಲ್ಲಿ ಹಿಂದಿನ ದಿನ ಹುಟ್ಟಿದ ಮಕ್ಕಳನ್ನೆಲ್ಲ ಕೊಂದ. ಆದರೆ ನಂದನ ಮನೆಯಲ್ಲಿ ಬೆಳೆಯುತ್ತಿದ್ದ ಕೃಷ್ಣನನ್ನು ಕೊಲ್ಲಲಾಗಲಿಲ್ಲ. ಅವನನ್ನು ಕೊಲ್ಲಲು ಕಂಸ ಮಾಡಿದ ಪ್ರಯತ್ನಗಳೆಲ್ಲವೂ ವ್ಯರ್ಥವಾಯಿತು. ಕೃಷ್ಣನು ಬೆಳೆಯುತ್ತಿದ್ದಂತೆ ಅವನ ಲೀಲೆಗಳು ಕಂಸನ ಕಿವಿಗೆ ಬೀಳತೊಡಗಿದವು. ಹಾಗಾಗಿ ಮಥುರಾನಗರದಲ್ಲಿ ಸಾಂಪ್ರದಾಯಿಕವಾಗಿ ನಡೆಯುತ್ತಿದ್ದ ಬಿಲ್ಲಹಬ್ಬದ ಸಂದರ್ಭದಲ್ಲಿ ಕೃಷ್ಣನನ್ನು ಆಹ್ವಾನಿಸಿ ಕೊಲ್ಲಲು ನಡೆಸುವ ಸಂಚು ಈ ನಾಟಕದಲ್ಲಿ ವ್ಯಂಗ್ಯ ಹಾಗೂ ಹಾಸ್ಯಗಳಿಂದ ಮಿಳಿತಗೊಂಡು ಮೂಡಿಬಂದಿದೆ.

© KTBS NOT TO BE REPUBLISHED

### ಪದಗಳ ಅರ್ಥ

ಬಿಸಿಲು ಮಚ್ಚು – ಬಿಸಿಲು ಮಾಳಿಗೆ ; ಬಡಿಗೆ – ದೊಣ್ಣೆ, ಕೋಲು ; ಪೋರ – ಹುಡುಗ; ಗೂಢಚಾರ – ಗುಪ್ತಚರ ; ಶೋಧ – ಹುಡುಕು ; ಮಾಹಿತಿ – ತಿಳಿವಳಿಕೆ, ವಿವರಣೆ ; ಲೋಕಾಭಿರಾಮ– ಸಹಜವಾಗಿ; ಎಕ್ಕಡ – ಪಾದುಕೆ, ಪಾದರಕ್ಷೆ ; ಪಾಶ – ಹಗ್ಗ ; ಪರಾಂಬರಿಸು – ಗಮನಿಸು, ಪರಿಶೀಲಿಸು; ಕ್ರೀಡಾಗಾರ – ಕ್ರೀಡಾಂಗಣ ; ಹೆಬ್ಬಾಗಿಲು – ಮಹಾದ್ವಾರ ; ಪಥ್ಯ – ಆಹಾರದ ಕಟ್ಟುಪಾಡು, ಯೋಗ್ಯವಾದುದು ; ತಮಾಷೆ – ಹಾಸ್ಯ; ಕೊಂಚ – ಸ್ವಲ್ಪ ; ಘಟಿಂಗ – ತುಂಟ, ಭಂಡ ; ತಾರಮ್ಮಯ್ಯ – ಅಂಗೈ ಆಡಿಸು ; ವಾತಾಯನ–ಕಿಟಕಿ ; ಕೂಸು – ಮಗು ; ಹಾಲಾಹಲ – ವಿಷ ; ಕ್ಷೀರ – ಹಾಲು; ಮಥಿಸು – ಕಡೆ; ಸಂಕೋಲೆ – ಸರಪಳಿ; ಅಪರಂಜಿ – ಬಂಗಾರ; ಯಾಗ– ಯಜ್ಞ; ತೊಯ್ – ನೆನೆ, ಒದ್ದೆಯಾಗು; ಸೆರೆಮನೆ – ಬಂದೀಖಾನೆ ; ಪೀಡೆ – ತೊಂದರೆ; ಬೊಗಳೆ–ಕೆಲಸಕ್ಕೆ ಬಾರದ ಮಾತು, ಪೊಳ್ಳು ಹರಟೆ; ಅಷ್ಟಮೀ – ಎಂಟನೆಯ; ಕೋಶ – ಭಂಡಾರ; ಪಟ್ಟ–ಸಿಂಹಾಸನ; ಪಗಡಿ – ಕಾಣಿಕೆ, ಗೌರವ ; ಪಿಳ್ಳಂಗೋವಿ – ಕೊಳಲು ; ಸ್ನೇಹಿತ – ಗೆಳೆಯ, ಸಂಗಾತಿ, ಜತೆಗಾರ; ಪಿಳ್ಳೆ – ಮಗು.

## ಟಿಪ್ಪಣಿ

**ಕಂಸ :** ಕಂಸ ಮಥುರಾನಗರದ ಯದುವಂಶದ ಮಹಾರಾಜನಾದ ಉಗ್ರಸೇನನ ಮಗ. ಉಗ್ರಸೇನನ ರಾಣಿ ಒಮ್ಮೆ ಯಮುನಾ ನದಿಯಲ್ಲಿ ಸ್ನಾನ ಮಾಡುತ್ತಿರುವಾಗ ದ್ರುಮಿಲನೆಂಬ ರಾಕ್ಷಸ ಮೋಸದಿಂದ ಉಗ್ರಸೇನನ ರೂಪದಲ್ಲಿ ಬಂದು ಕಂಸನ ಹುಟ್ಟಿಗೆ ಕಾರಣನಾದ. ಅನಂತರ ನಿಜ ವಿಷಯದ ಅರಿವಾಗಿ ರಾಣಿಯು **ನಿನ್ನ ದುರ್ನಡತೆಯಿಂದ ಜನಿಸಿದವನು ಯದುವಂಶದವನಿಂದಲೇ ಸಾಯಲಿ** ಎಂದು ಶಪಿಸಿದಳು.

**ಪೂತನಿ :** ಕಂಸನ ಪರಿವಾರದ ಒಬ್ಬ ರಾಕ್ಷಸಿ. ಈಕೆ ಸುಂದರ ಸ್ತ್ರೀ ವೇಷದಿಂದ ನಂದನ ಮನೆಯನ್ನು ಹೊಕ್ಕು, ಅಲ್ಲಿ ಕೃಷ್ಣನಿಗೆ ವಿಷಪೂರಿತ ಹಾಲೂಡಲು ತೊಡಗಿದಾಗ ಕೃಷ್ಣ ಆಕೆಯ ಜೀವವನ್ನೇ ಹೀರಿದನು. ಪೂತನಿ ಕೂಗುತ್ತಾ ಭಯಂಕರ ರಾಕ್ಷಸಿಯ ರೂಪತಾಳಿ ಪ್ರಾಣಬಿಟ್ಟಳು.

**ಶಕಟ :** ಕಂಸನ ಪರಿವಾರಕ್ಕೆ ಸೇರಿದ ರಾಕ್ಷಸ. ಇವನು ಕಂಸನ ಆಜ್ಞೆಯಂತೆ ಬಂಡಿ (ಶಕಟ) ಯ ರೂಪಹೊಂದಿ, ಗೋಕುಲದಲ್ಲಿದ್ದ ಬಾಲಕೃಷ್ಣನನ್ನು ಕೊಲ್ಲ ಹೋದನು. ಕೃಷ್ಣನ ಅಂಗಾಲ ಹೊಡೆತದಿಂದ ಮುರಿದುಬಿದ್ದು, ತನ್ನ ನಿಜ ರೂಪವನ್ನು ಹೊಂದಿ ಅಲ್ಲಿಯೇ ಸಾವನ್ನಪ್ಪಿದನು.

**ತೃಣಾವರ್ತ:** ಕಂಸನ ಅನುಚರ ರಕ್ಕಸರಲ್ಲಿ ಒಬ್ಬ. ಕಂಸನ ಆಜ್ಞೆಯಂತೆ ಬಿರುಗಾಳಿಯ ರೂಪದಲ್ಲಿ ಬಂದು. ಯಶೋದೆ ಮಲಗಿಸಿದ್ದ ಮಗುವನ್ನು ಆಕಾಶಕ್ಕೆ ಹಾರಿಸಿಕೊಂಡು ಹೋದನು. ಕೊನೆಕೊನೆಗೆ ಕೃಷ್ಣನ ಭಾರವನ್ನು ತಡೆಯಲಾರದೆ, ಅವನ ವೇಗ ತಗ್ಗಿತು. ಮಗುವನ್ನು ಕೆಳಕ್ಕೆ ಬೀಳಿಸಲು ಯತ್ನಿಸಿದನು. ಆದರೆ ಕೃಷ್ಣ ರಾಕ್ಷಸನ ಕುತ್ತಿಗೆಯನ್ನು ಬಲವಾಗಿ ಹಿಡಿದು, ಒಂದು ಸಲ ಗುದ್ದಿದೊಡನೆ, ತೃಣಾವರ್ತ ತನ್ನ ನಿಜ ರೂಪಿನಿಂದ ಸತ್ತು ಬಿದ್ದನು.

**ಧೇನುಕ :** ಕಂಸನ ಅನುಯಾಯಿ ರಾಕ್ಷಸರಲ್ಲಿ ಒಬ್ಬ. ಇವನು ಬೃಂದಾವನದ ಸಮೀಪದ ತಾಳವನದಲ್ಲಿ ವಾಸವಾಗಿದ್ದನು. ಗೋಪಾಲಕರು ಕೃಷ್ಣ ಬಲರಾಮರೊಂದಿಗೆ ತಾಳೆಹಣ್ಣುಗಳನ್ನು ತಿನ್ನುತ್ತಿರುವಾಗ ಕತ್ತೆಯ ರೂಪದಲ್ಲಿ ಬಂದು ಬಲರಾಮನ ಮೇಲೆ ಬಿದ್ದನು. ಬಲರಾಮನು ಕೃಷ್ಣನ ಸೂಚನೆಯಂತೆ ಅದರ ಹಿಂಗಾಲುಗಳನ್ನು ಹಿಡಿದು ಗರಗರನೆ ತಿರುಗಿಸಿ ತಾಳೆಮರಕ್ಕೆ ಹೊಡೆದು ಕೊಂದನು.

**ಗೋವರ್ಧನಬೆಟ್ಟ :** ಯಮುನಾ ನದಿತೀರದ ಪರ್ವತ. ಒಮ್ಮೆ ನಂದಗೋಕುಲದ ಗೊಲ್ಲರೆಲ್ಲರೂ ಇಂದ್ರಯಾಗವನ್ನು ಮಾಡಬೇಕೆಂದಿರುವಾಗ, ಕೃಷ್ಣ ಆ ಯಾಗವನ್ನು ನಿಲ್ಲಿಸಿ, ಗೋವರ್ಧನಗಿರಿಯನ್ನೇ ಪೂಜೆ ಮಾಡುವಂತೆ ಹೇಳಿದನು. ಇದರಿಂದ ಕೋಪಗೊಂಡ ಇಂದ್ರನು ಚಂಡ ವೃಷ್ಟಿಯನ್ನುಂಟು ಮಾಡಿದನು. ಆಗ ಕೃಷ್ಣ ಗೋವರ್ಧನಗಿರಿಯನ್ನೇ ಎತ್ತಿ ಹಿಡಿದು ಮಳೆಯಿಂದ ಗೋವುಗಳನ್ನೂ ಗೋಪಾಲಕರನ್ನೂ ರಕ್ಷಿಸಿದ.

©KTBS NOT TO BE REPUBLISHED

**ಅಕ್ರೂರ :** ನಹುಷನ ವಂಶಕ್ಕೆ ಸೇರಿದ ಶ್ವಫಲ್ಕನ ಮಗ. ಕಂಸನ ಅಷ್ಟ ಮಂತ್ರಿಗಳಲ್ಲಿ ಒಬ್ಬ. ಕಂಸನ ಅಪ್ಪಣೆಯಂತೆ ಬಲರಾಮ ಕೃಷ್ಣರನ್ನು ಮಥುರೆಗೆ ಕರೆತರುವಾಗ ಯಮುನಾ ನದಿಯಲ್ಲಿ ಸ್ನಾನ ಮಾಡುತ್ತಿದ್ದ ಸಂದರ್ಭದಲ್ಲಿ ಅಕ್ರೂರನಿಗೆ, ಕೃಷ್ಣ ತನ್ನ ದಿವ್ಯ ರೂಪವನ್ನು ತೋರಿಸಿದನು.

**ಬಿಲ್ಲಹಬ್ಬ :** ಇದು ಶೌರ್ಯ ಪ್ರದರ್ಶನಕ್ಕೆ ಸಂಬಂಧಪಟ್ಟ ಒಂದು ಕಾರ್ಯಕ್ರಮ. ಕಂಸನಲ್ಲಿ ಇಂದ್ರಧನುಸ್ಸಿಗೆ ಸಮನಾದ, ಪರಮ ವೈಭವದಿಂದ ಪ್ರತಿಷ್ಠಿತವಾದ, ಅನುದಿನವೂ ಪೂಜಿಸಲ್ಪಡುತ್ತಿದ್ದ, ಹಲವಾರು ಸೈನಿಕರಿಂದ ಸತತವಾಗಿ ರಕ್ಷಿಸಲ್ಪಡುತ್ತಿದ್ದ ಒಂದು ಬೃಹತ್ ಗಾತ್ರದ ಧನಸ್ಸು (ಬಿಲ್ಲು) ಇತ್ತು. ಇದು ಸಾಮಾನ್ಯರಿಗೆ ಅಲ್ಲಾಡಿಸಲೂ ಸಾಧ್ಯವಾಗುತ್ತಿರಲಿಲ್ಲ. ಒಂದು ದೊಡ್ಡ ಪೆಟ್ಟಿಗೆಯೊಳಗೆ ಮಲಗಿಸಿಟ್ಟಿದ್ದ ಈ ಬಿಲ್ಲನ್ನು ವರ್ಷಕ್ಕೊಮ್ಮೆ ಶೌರ್ಯಪ್ರದರ್ಶನಕ್ಕೆ ಕಂಸ ಬಳಸುತ್ತಿದ್ದ. **"ಪೆಟ್ಟಿಗೆಯೊಳಗೆ ಮಲಗಿಸಿಟ್ಟಿರುವ ಈ ಬಿಲ್ಲನ್ನು ಬಿಲ್ಲಾಳುಗಳು ತೆಗೆದು ನೇರವಾಗಿ ನಿಲ್ಲಿಸಿ ಅದರ ಎದೆಯೇರಿಸಬೇಕು"** ಎಂಬುದು ಪಂದ್ಯವಾಗಿರುತ್ತಿತ್ತು. ಈ ಪ್ರಕ್ರಿಯೆಯನ್ನು **'ಧನುರ್ಯಜ್ಞ'** ಅಥವಾ **'ಬಿಲ್ಲಹಬ್ಬ'** ಎಂದು ಕರೆಯಲಾಗುತ್ತಿತ್ತು. ಚಾಣೂರ, ಮುಷ್ಟಿಕ, ಕೂಟ, ಶಲ, ತೋಶಲ ಮುಂತಾದ ಜಟ್ಟಿಪ್ರಮುಖರು ಮಲ್ಲಯುದ್ಧ ಪ್ರದರ್ಶನ ಮಾಡುತ್ತಿದ್ದರು. ಕಂಸನೂ ಮಲ್ಲಯುದ್ಧ ಪ್ರವೀಣನಾದುದರಿಂದ ಈ ಕ್ರೀಡೋತ್ಸವಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇರುತ್ತಿತ್ತು. ತನ್ನ ಶತ್ರುಗಳಾದ ಕೃಷ್ಣ ಬಲರಾಮರನ್ನು **'ಬಿಲ್ಲಹಬ್ಬದ'** ನೆಪದಿಂದ ಮಥುರೆಗೆ ಕರೆಸಿಕೊಂಡು ಕೊಲ್ಲುವ ಸಂಚು ಹೂಡಿದ ಕಂಸ ಅವರನ್ನು ಅಕ್ರೂರನ ಮೂಲಕ ಕರೆಸಿಕೊಳ್ಳುತ್ತಾನೆ. ಅಣ್ಣ ಬಲರಾಮನೊಂದಿಗೆ ಮಥುರೆಗೆ ಬಂದ ಕೃಷ್ಣನು **ಧನುರ್ಯಜ್ಞದ** ಆ ಮಹಾಧನುಸ್ಸನ್ನು ತನ್ನ ಎಡಗೈಯಿಂದ ಮೇಲೆತ್ತಿ ಅದರ ಎದೆಯನ್ನು ಬಿಗಿದು ಸುದೀರ್ಘವಾಗಿ ಸೆಳೆಯುತ್ತಾನೆ. ಆಗ ಆ ಬಿಲ್ಲು ಮುರಿದು ಬೀಳುತ್ತದೆ. ಆ ಸಂದರ್ಭದಲ್ಲಿ ಉಂಟಾದ ಶಬ್ದವು ಭೂಮ್ಯಾಕಾಶಗಳನ್ನು ಆವರಿಸಿ ಕಂಸನು ನಡುಗಿ ಹೋಗುತ್ತಾನೆ.

**ಕ್ಷೀರಸಾಗರ :** ಹಾಲಿನ ಸಮುದ್ರ. ಸಪ್ತ ಸಮುದ್ರಗಳಲ್ಲಿ ಒಂದು. ಇದನ್ನು ಸುರಾಸುರರು ಮಥಿಸಿ, ಅಮೃತ ಮೊದಲಾದ ವಸ್ತುಗಳನ್ನು ಪಡೆದರೆಂದು ಮಹಾಕಾವ್ಯ ಮತ್ತು ಪುರಾಣಗಳಲ್ಲಿ ರಚಿಸಲ್ಪಟ್ಟಿದೆ.

**ರೋಹಿಣಿ :** ವಸುದೇವನ ಮೊದಲ ಹೆಂಡತಿ. ಬಲರಾಮನ ತಾಯಿ.

**ಬಲರಾಮ :** ವಸುದೇವನ ಮೊದಲ ಹೆಂಡತಿ ರೋಹಿಣಿಯ ಉದರದಲ್ಲಿ ಯೋಗದೇವಿಯ ಕೃಪೆಯಿಂದ ಜನಿಸಿದವನು. ಕೃಷ್ಣನ ಸಹೋದರ.

**ನಂದ :** ಗೋಕುಲದ ಗೊಲ್ಲರ ಯಜಮಾನ. ಕೃಷ್ಣನ ಸಾಕುತಂದೆ.

**ಯಶೋಧೆ :** ನಂದನ ಹೆಂಡತಿ. ಕೃಷ್ಣನ ಸಾಕುತಾಯಿ.

©KTBS NOT TO BE REPUBLISHED

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಕೃಷ್ಣ ಯಾರ ಸೊಂಟವನ್ನು ಮುರಿದ?

೨. ಕೃಷ್ಣನ ಕೈಯಲ್ಲಿ ಸಿಕ್ಕ ಧೇನುಕ ಏನಾದ?

೩. ಮಂತ್ರಿ ಕಂಸನ ಬಳಿಗೆ ಕರೆತಂದ ಇಬ್ಬರು ಯಾರು?

೪. ವಸುದೇವನಿಗೆ ಮಕ್ಕಳ ವಿಚಾರ ಹೇಳಿದವರು ಯಾರು?

೫. ವಸುದೇವ ಹೇಳುವಂತೆ ರಾಜಕಾರ್ಯ ಹೇಗಿರುತ್ತದೆ?

೬. ನಂದ ಯಾರೆಂದು ಕಂಸ ಹೇಳುತ್ತಾನೆ?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಕೃಷ್ಣ ಯಾರು ಯಾರನ್ನು ಕೊಂದ?

೨. ಕ್ರೀಡಾಗಾರದಲ್ಲಿ ಆಗಿದ್ದ ಗುಪ್ತ ಏರ್ಪಾಡು ಏನು?

೩. ವಸುದೇವ ಮಕ್ಕಳನ್ನು ನೆನೆದು ವ್ಯಥೆಪಟ್ಟ ಬಗೆ ಹೇಗೆ?

೪. ಕಂಸ ತಂಗಿಯ ಮೇಲಿನ ಪ್ರೀತಿ ಎಂಥದ್ದೆಂದು ಹೇಳಿಕೊಂಡಿದ್ದಾನೆ?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು-ಐದು ವಾಕ್ಯಗಳಲ್ಲಿ ಉತ್ತರಿಸಿ.**

೧. ಗೂಢಚಾರರು ಯಾವುದರ ಬಗ್ಗೆ ಶೋಧನೆ ಮಾಡುತ್ತಿದ್ದಾರೆ? ವಿವರಿಸಿ.

೨. ಕೃಷ್ಣನನ್ನು ಕೊಲ್ಲಲು ದುರ್ವಿಧ-ಶೈಲಿಕರು ಮಾಡಿದ್ದ ಏರ್ಪಾಡುಗಳೇನು?

೩. ಕಂಸ ದೇವಕಿಯಿಂದ ಕೃಷ್ಣನ ಬಗ್ಗೆ ತಿಳಿಯಲು ಹೋಗಿ ನಿರಾಶನಾದದ್ದು ಹೇಗೆ?

**ಈ. ಈ ವಾಕ್ಯಗಳನ್ನು ಹೇಳಿಕೆಗಳನ್ನು ಯಾರು ಯಾರಿಗೆ ಯಾವಾಗ ಹೇಳಿದರು/ತಿಳಿಸಿರಿ?**

೧. "ಹೌದು ಒಡೆಯ -- ಕ್ರೀಡಾಂಗಣಕ್ಕೆ ಇರೋದು ಒಂದೇ ಹೆಬ್ಬಾಗಿಲು"

೨. "ಮಂಡೇಲಿ ಕೊಂಚ ಮಾಂಸ ಇರಬೇಕು"

೩. "ನಿಮ್ಮ ಅಣ್ಣನಿಗೆ ಸ್ವಲ್ಪ ಹಾಲಾದರೂ ಕೊಡು"

೪. "ಕೊಲ್ಲಲು ಬಂದವರನ್ನೆಲ್ಲಾ ಅವನೇ ಕೊಂದುಬಿಟ್ಟ"

© KTBS NOT TO BE REPUBLISHED

**ಉ. ಹೊಂದಿಸಿ ಬರೆಯಿರಿ.**

| ಅ | ಆ |
|---|---|
| ೧. ಒಡೆಯ | ಕುವಲಯಾಪೀಡ |
| ೨. ಶಿಲ್ಪಿ | ಶಕಟ |
| ೩. ವೈದ್ಯ | ಗೋವರ್ಧನ |
| ೪. ಆನೆ | ದುರ್ವಿಧ |
| ೫. ಬೆಟ್ಟ | ಶೈಲಿಕ |
| | ಧೇನುಕ |
| | ಕಂಸ |

**ಊ. ಕೆಳಗೆ ಕೊಟ್ಟಿರುವ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿ, ವಾಕ್ಯ ರಚಿಸಿ.**

೧. ಲೋಕಾಭಿರಾಮ ೨. ಪರಾಂಬರಿಸು ೩. ಅಪರಂಜಿ

೪. ಸೆರೆಮನೆ ೫. ಸಂಕೋಲೆ ೬. ಬೊಗಳೆ

@KTBS NOT TO BE REPUBLISHED

## ವ್ಯಾಕರಣ ಮಾಹಿತಿ

## ಸಮಾಸಗಳು

### ದ್ವಿಗು ಸಮಾಸ

ಪೂರ್ವಪದವು ಸಂಖ್ಯಾವಾಚಕವಾಗಿದ್ದು, ಉತ್ತರದಲ್ಲಿರುವ ನಾಮಪದದೊಡನೆ ಸೇರಿ ಆಗುವ ಸಮಾಸವೇ 'ದ್ವಿಗುಸಮಾಸ'.

ಒಂದು + ಕಟ್ಟು = ಒಗ್ಗಟ್ಟು

ಎರಡು + ಮಡಿ = ಇಮ್ಮಡಿ

ಪಂಚಗಳಾದ + ಇಂದ್ರಿಯಗಳು = ಪಂಚೇಂದ್ರಿಯಗಳು

ಸಪ್ತಗಳಾದ + ಸ್ವರಗಳು = ಸಪ್ತಸ್ವರಗಳು

## ಬಹುವ್ರೀಹಿ ಸಮಾಸ

೧. ಮೂರು ಕಣ್ಣುಳ್ಳವನು: ಮುಕ್ಕಣ್ಣ
೨. ಹಣೆಯಲ್ಲಿ ಕಣ್ಣುಳ್ಳವನು: ಹಣೆಗಣ್ಣ
೩. ಚಕ್ರವನ್ನು ಹಿಡಿದಿರುವವನು: ಚಕ್ರಪಾಣಿ
೪. ಚಂದ್ರನಂತೆ ಮುಖವುಳ್ಳವಳು: ಚಂದ್ರಮುಖಿ

ಹೀಗೆ ಸಮಾಸವಾದಾಗ ಪೂರ್ವೋತ್ತರ ಪದಗಳು ಪ್ರಧಾನವಾಗದೆ ಬೇರೊಂದು ಪದ ಪ್ರಧಾನವಾದರೆ ಅಂತಹ ಸಮಾಸಗಳಿಗೆ 'ಬಹುವ್ರೀಹಿ ಸಮಾಸ' ಎಂದು ಹೆಸರು.

## ಕ್ರಿಯಾ ಸಮಾಸ (ಇದು ಕನ್ನಡಕ್ಕೆ ವಿಶಿಷ್ಟವಾದ ಸಮಾಸ)

೧. ಕೈಯನ್ನು + ತೊಳೆ = ಕೈತೊಳೆ
೨. ಮರವನ್ನು + ಹತ್ತು = ಮರಹತ್ತು
೩. ಕಳೆಯನ್ನು + ಕೀಳು = ಕಳೆಕೀಳು
೪. ಊಟವನ್ನು + ಮಾಡು = ಊಟಮಾಡು
೫. ತಲೆಯನ್ನು + ಬಾಚು = ತಲೆಬಾಚು
೬. ಕಾಲನ್ನು + ಎಳೆ = ಕಾಲೆಳೆ

ಸಮಾಸದಲ್ಲಿ ಪೂರ್ವಪದವು ನಾಮಪದವಾಗಿದ್ದು, ಉತ್ತರ ಪದವು ಕ್ರಿಯಾ ಪದವಾಗಿದ್ದರೆ ಅಂತಹ ಸಮಾಸಗಳಿಗೆ 'ಕ್ರಿಯಾ ಸಮಾಸ' ಎಂದು ಹೆಸರು.

## ಗಮಕ ಸಮಾಸ

೧. ಅವನು + ಹುಡುಗ = ಆ ಹುಡುಗ
೨. ಇದು + ಕಲ್ಲು = ಈ ಕಲ್ಲು
೩. ಕಡೆಯುವುದು + ಕೋಲು = ಕಡೆಗೋಲು
೪. ಮಾಡಿದುದು + ಅಡಿಗೆ = ಮಾಡಿದಡಿಗೆ

ಹೀಗೆ ಪೂರ್ವ ಪದವು ಸರ್ವನಾಮ ಕೃದಾಂತಗಳಲ್ಲಿ ಒಂದಾಗಿದ್ದು ಉತ್ತರ ಪದದಲ್ಲಿರುವ ನಾಮಪದದೊಡನೆ ಸೇರಿ ಆಗುವ ಸಮಾಸವೇ ಗಮಕ ಸಮಾಸ.

### ಚಟುವಟಿಕೆ

೧. ಈ ನಾಟಕವನ್ನು ಗೆಳೆಯರ ಜೊತೆಗೂಡಿ ಶಿಕ್ಷಕರ ಮಾರ್ಗದರ್ಶನದಲ್ಲಿ ಅಭಿನಯಿಸಿರಿ.
೨. ಈ ನಾಟಕವನ್ನು ಕಥೆಯ ರೂಪದಲ್ಲಿ ನಿಮ್ಮ ತರಗತಿಯ ಗೆಳೆಯರಿಗೆ ಹೇಳಿ.

NOT TO BE REPUBLISHED @KTBS

# ೮. ಸಂಕ್ರಾಂತಿಯಂದು ಸುಖ-ದುಃಖ

X4C3A6

- ಎ.ಆರ್. ಮಣಿಕಾಂತ್

**ಪ್ರವೇಶ :** ಕ್ರಿಸ್‌ಮಸ್ ಮುಗಿದಿದೆ. ಶಾಲೆಯಲ್ಲಿ ವಾರ್ಷಿಕೋತ್ಸವದ ತಯಾರಿ ನಡೆಯುತ್ತಿದೆ. ಚುಮುಚುಮು ಚಳಿಯ ಆ ದಿನಗಳಲ್ಲಿ ಸಂಕ್ರಾಂತಿ ಹಬ್ಬ ಬಂದಿದೆ. ಸಂಕ್ರಾಂತಿಯ ಮಹತ್ವವೇನು ಎಂದು ತಿಳಿಯಲು ಮಕ್ಕಳಿಗೆ ಕುತೂಹಲ. ಯುಗಾದಿಯಲ್ಲಿ ಬೇವು-ಬೆಲ್ಲ ತಿನ್ನುವುದು ಸುಖ-ದುಃಖಗಳು ಜೀವನದಲ್ಲಿ ಒಂದೇ ಸಮನಾಗಿರಲಿ ಎನ್ನುವುದಕ್ಕಾಗಿ. ಸಂಕ್ರಾಂತಿಯಲ್ಲಿ ಎಳ್ಳು-ಬೆಲ್ಲ ತಿನ್ನುವುದೇಕೆ? ಅದು ಚಳಿಗಾಲದಲ್ಲೇ ಏಕೆ ಬರುತ್ತದೆ? ಎಳ್ಳು-ಬೆಲ್ಲ ತಿಂದರೆ ಹಬ್ಬ ಮುಗಿಯಿತೆ? ಈ ಎಲ್ಲ ಪ್ರಶ್ನೆಗಳೂ ಮಕ್ಕಳ ಮನಸ್ಸಿನಲ್ಲಿ ಇದ್ದವು. ಇವುಗಳಿಗೆ ಉತ್ತರವೆಂಬಂತೆ ಪತ್ರಿಕೆಯಲ್ಲಿ ಬಂದಿದ್ದ ಲೇಖನವನ್ನು ಅಧ್ಯಾಪಕರು ತರಗತಿಯಲ್ಲಿ ಓದಿದರು.

@KTBS NOT TO BE REPUBLISHED



## ಎಳ್ಳು-ಬೆಲ್ಲ ತಿಂದು ಒಳ್ಳೆಯ ಮಾತಾಡಿ.

ಸಂಕ್ರಾಂತಿ ಅಂದಾಕ್ಷಣ ನೆನಪಾಗುವ ಮಾತಿದು. ಎಳ್ಳು, ಬೆಲ್ಲ ಇಲ್ಲದ ಸಂಕ್ರಾಂತಿಯನ್ನು ಕಲ್ಪಿಸಿಕೊಳ್ಳುವುದೂ ಸಾಧ್ಯವಿಲ್ಲ. ನಿಮಗೆ ಗೊತ್ತೆ? ಸಂಕ್ರಾಂತಿಯಲ್ಲಿ ಪುರಾಣ ಕಾಣಿಸುತ್ತದೆ. ವಿಜ್ಞಾನ ಇಣುಕು ಹಾಕುತ್ತದೆ. ಸಂಪ್ರದಾಯ ಮಾತಾಡುತ್ತದೆ. ಕೃತಜ್ಞತಾಭಾವ ಕೈಹಿಡಿಯುತ್ತದೆ. ನಮಗೆ ಒಳಿತಾಗಲಿ, ನಮ್ಮ ಬದುಕಲ್ಲಿ ಸಂ-ಕ್ರಾಂತಿಯಾಗಲಿ ಎಂಬ ಆಶಾವಾದ ಜತೆಗೇ ಇರುತ್ತದೆ.

ಯುಗಾದಿ, ದೀಪಾವಳಿ, ಮೊಹರಂ, ಈದ್-ಮಿಲಾದ್, ಕ್ರಿಸ್‌ಮಸ್, ಗೌರಿ-ಗಣೇಶ, ಮಹಾಲಯ ಅಮಾವಾಸ್ಯೆ ಮುಂತಾದುವೆಲ್ಲ ಜನಗಳ ಹಬ್ಬ. ಆದರೆ, ಸಂಕ್ರಾಂತಿಯ ಸೊಗಸೇ ಬೇರೆ. ಇದು ದನಗಳ ಹಬ್ಬ!

ಉಳಿದೆಲ್ಲ ಹಬ್ಬಗಳಲ್ಲೂ ತಾನು ಹೊಸ ಬಟ್ಟೆ ಧರಿಸಿ ಮೆರೆವ ಮನುಷ್ಯ ಸಂಕ್ರಾಂತಿಯಲ್ಲಿ ಜಾನುವಾರುಗಳ ಅಲಂಕಾರಕ್ಕೆ ನಿಲ್ಲುತ್ತಾನೆ. ವರ್ಷವಿಡೀ ದುಡಿಮೆಯಲ್ಲಿ ತೊಡಗಿದ್ದ ದನ-ಕರುಗಳಿಗೆ ಪೂಜೆ ಮಾಡುತ್ತಾನೆ. ಸಂಕ್ರಾಂತಿಯ ವೇಳೆಗೆ ಇಡೀ ವರ್ಷದ ದುಡಿಮೆ ರೈತಾಪಿ ಜನರ ಕೈಗೆ ಬಂದಿರುತ್ತದಲ್ಲ? ಹಾಗೆ ದುಡಿದದ್ದಕ್ಕೆ ದನ-ಕರುಗಳಿಗೆ ಥ್ಯಾಂಕ್ಸ್(ವಂದನೆ)ಹೇಳಲಿಕ್ಕೆ, ಅವುಗಳನ್ನು ಸಿಂಗರಿಸಿ, ಮೆರವಣಿಗೆ ಮಾಡಿ, ಕಿಚ್ಚು ಹಾಯಿಸಿ ರೈತ ಖುಷಿಪಡುತ್ತಾನೆ!

ಕಿಚ್ಚು ಹಾಯಿಸುವುದು ಎಂದರೆ ದನಕರುಗಳನ್ನು ಬೆಂಕಿಯಲ್ಲಿ ಜಿಗಿಸುವುದು. ಈ ಆಚರಣೆಯ ಗುಟ್ಟು ಗೊತ್ತೆ? ಸಂಕ್ರಾಂತಿ ಬರುವುದು ಗಡಗಡ ಚಳಿಯ ಸಂದರ್ಭದಲ್ಲಿ. ಆ ವೇಳೆಗೆ ಕೃಷಿ ಕೆಲಸವೂ ಅಷ್ಟಾಗಿ ಇರುವುದಿಲ್ಲವಲ್ಲ? ದನ-ಕರುಗಳಿಗೆ ಸ್ವಲ್ಪ ವಿಶ್ರಾಂತಿ ಸಿಕ್ಕಿರುತ್ತೆ. ಅವುಗಳ ಮೈಯಲ್ಲಿ ಜಿಗಣೆಯಂಥ ಕ್ರಿಮಿಗಳು ಅದು ಹೇಗೋ ಸೇರಿರುತ್ತವೆ. ಗುಟ್ಟಾಗಿ ಅಡಗಿ ಕೂತು ಕಾಟ ಕೊಡುತ್ತಿರುತ್ತವೆ. ಇವುಗಳನ್ನು ತೊಲಗಿಸುವ ನೆಪದಲ್ಲೇ ಕಿಚ್ಚು ಹಾಯಿಸಲಾಗುತ್ತದೆ. ಬೆಂಕಿಯ ತಾಪ ಚೂರೇ ಚೂರು ತಾಗಿದರು ಸಾಕು, ಜಿಗಣೆಗಳು ತೊಪ್ಪನೆ ಬೆಂಕಿಗೆ ಬೀಳುತ್ತವೆ. ಮರುಕ್ಷಣದಿಂದಲೇ ಜಾನುವಾರುಗಳ ಬದುಕು ನೆಮ್ಮದಿಯ ಹಾಡಾಗುತ್ತದೆ!

ಸಂಕ್ರಾಂತಿಯಂದು ಎಳ್ಳು-ಬೆಲ್ಲ-ಕಡಲೆ ಮತ್ತು ಕೊಬ್ಬರಿಯನ್ನೇ ಯಾಕೆ ತಿನ್ನಬೇಕು ಅಂದರೆ, ಚಳಿಗಾಲದ ಅವಧಿಯಲ್ಲಿ ಚರ್ಮ ಒಡೆದಿರ್ತದಲ್ಲ? ಆಗ ದೇಹದಲ್ಲಿ ಕೊಬ್ಬಿನ ಅಂಶ ಕಡಿಮೆಯಾಗುತ್ತೆ ಚರ್ಮ ಮತ್ತೆ ಹುರುಪುಗೊಳ್ಳಬೇಕಾದರೆ, ಕಳೆದುಹೋದ ಕೊಬ್ಬಿನ ಅಂಶ ಬೇಗನೆ ಸಿಗಲೇಬೇಕು. ಎಳ್ಳು-ಕೊಬ್ಬರಿ-ಕಡಲೆಯಲ್ಲಿ ಕೊಬ್ಬಿನ ಅಂಶ ವಿಪರೀತ ಎಂಬಷ್ಟಿದೆ. ಸಂಕ್ರಾಂತಿಯ ನೆಪದಲ್ಲಿ ಎಲ್ಲರೂ ಎಳ್ಳು-ಬೆಲ್ಲದ ಮಿಶ್ರಣ ತಿನ್ನುತ್ತಾರಲ್ಲ? ಆಗ ದೇಹವೆಂಬುದು ತಂತಾನೇ ಸರಿಯಾಗಿ ಬಿಡುತ್ತದೆ.

ಸಂಕ್ರಾಂತಿ ಹಳ್ಳಿಗರ ಮಧ್ಯೆಯೇ ಸೃಷ್ಟಿಯಾದ ಹಬ್ಬ. ಆಗಿಂದಾಗ್ಗೆ ಜಗಳವಾಡಿ 'ಟೂ'ಬಿಡುವುದು ಹಳ್ಳಿಗರ ಹುಟ್ಟುಗುಣ ತಾನೆ? ಊರಿನ ಪಟೇಲರು ವರ್ಷದ ಕೊನೆಯಲ್ಲಿ ಜಗಳಾಡಿದವರನ್ನು ಒಂದೆಡೆ ಸೇರಿಸಿ, ಅವರಿಂದ ಇವರಿಗೆ, ಇವರಿಂದ ಅವರಿಗೆ ಎಳ್ಳು ಬೆಲ್ಲ ಕೊಡಿಸಿ ರಾಜಿ ಮಾಡಿಸುತ್ತಿದ್ದರಂತೆ. ಅನಂತರ ಇನ್ನು ಮುಂದೆ ಕಿತ್ತಾಡುತ್ತ ಬದುಕಬೇಡಿ ಎಂದು ಒರಟಾಗಿ ಹೇಳುವ ಬದಲು 'ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತಾಡಿ' ಅನ್ನುತ್ತಿದ್ದರಂತೆ! ಪರಿಣಾಮ, ಸಂಕ್ರಾಂತಿ ಬಾಯಿಗೆ ಸಿಹಿ ಕೊಡುತ್ತಿತ್ತು ದ್ವೇಷ ಮರೆಸುತ್ತಿತ್ತು! ಸಂಕ್ರಾಂತಿ ದಿನದಿಂದ ಸೂರ್ಯನು ದಕ್ಷಿಣದಿಂದ ಉತ್ತರ ದಿಕ್ಕಿಗೆ ಸ್ವಲ್ಪ ಸ್ವಲ್ಪ ಸಂಚರಿಸಲು ಶುರುವಿಡುತ್ತಾನೆ. ಸಂಕ್ರಾಂತಿಯ ಮರುದಿನದಿಂದಲೇ ಹಗಲು ದೀರ್ಘವಾಗುತ್ತದೆ. ರಾತ್ರಿಯ ಅವಧಿ ಸಹಜವಾಗಿಯೇ ಕಡಿಮೆಯಾಗುತ್ತದೆ. ಉತ್ತರಾಯಣ ಪುಣ್ಯಕಾಲ ಬರೋದು ವರ್ಷದಲ್ಲಿ ಒಂದು ದಿನ ಮಾತ್ರ. ಅಂದು ಸ್ವರ್ಗದ ಬಾಗಿಲು ತೆರೆಯುತ್ತದೆ ಎಂಬ ನಂಬಿಕೆಯಿದೆ.

* * *

ಇದು ಸಂಕ್ರಾಂತಿಯ ಸೊಗಸಿನ ಮಹತ್ತ್ವ. ಹೌದಲ್ಲ? ಈಗ ಅಪ್ಪ-ಅಮ್ಮ ಆಗಿರುವವರು; ಅಂಕಲ್-ಆಂಟಿ ಅನಿಸಿಕೊಂಡಿರುವವರು, ಚಿಕ್ಕವರಿದ್ದಾಗ ಸಂಕ್ರಾಂತಿಯ ಸಡಗರದಲ್ಲಿ ಮೀಯುತ್ತಿದ್ದರು. ದನ-ಕರುಗಳ ಮೈ ತೊಳೆದು, ಕೊರಳಿಗೆ ಗೆಜ್ಜೆ ಕಟ್ಟಿ ಕೊಂಬಿಗೆ ಬಣ್ಣ ಬಳಿದು, ಟೇಪು ಕಟ್ಟಿ, ಹೂ ಮುಡಿಸಿ, ತರಹೇವಾರಿ ಬಲೂನು ಕಟ್ಟಿ ಕುಣಿಯುತ್ತಿದ್ದರು. ಹಬ್ಬದ ನೆಪದಲ್ಲಿ ಪರಿಚಿತರು ಬಂಧುಗಳಿಗೆಲ್ಲ ಎಳ್ಳು ಬೆಲ್ಲ ಕೊಟ್ಟು ಖುಷಿಪಡುತ್ತಿದ್ದರು.

NOT TO BE REPUBLISHED @KTBS

ಈಗ ಏನಾಗಿದೆ ಹೇಳಿ? ಹಬ್ಬವೇನೋ ವರ್ಷವರ್ಷವೂ ಬರುತ್ತಿದೆ. ಆದರೆ ಅವರಲ್ಲಿ ಸಂಭ್ರಮವಿಲ್ಲ. ಸಂಭ್ರಮ ಎಂಬುದು ಎದೆಯಾಳದಿಂದ ಹುಟ್ಟಿಬರುವುದಿಲ್ಲ. ಕೃಷಿಕರ ಮನೆಗಳಲ್ಲಿ ದನ–ಕರುಗಳೇ ನಾಪತ್ತೆ! ಆ ಜಾಗಕ್ಕೆ ಟ್ರಾಕ್ಟರ್‌ಗಳು ಬಂದುನಿಂತಿವೆ! ಕಿಚ್ಚುಹಾಯಿಸುವ ಸಂಪ್ರದಾಯ ಕಣ್ಮರೆಯಾಗುತ್ತಿದೆ. ಯಾಂತ್ರಿಕವಾಗುತ್ತಿದೆ. ನೌಕರಿಯ ನೆಪದಲ್ಲಿ ಪಟ್ಟಣ ಸೇರಿರುವವರು ವಿಪರೀತ ಬ್ಯುಸಿಯಾಗಿದ್ದಾರೆ. ಕಾಸಿಗೆ ಪರದಾಡುತ್ತಿದ್ದಾರೆ. ಸಂಕ್ರಾಂತಿಗೆಂದು ಊರಿಗೆ ಹೋಗಿಬಂದರೆ ಐನೂರು ರೂಪಾಯಿಗೆ ನಾಮ ಬೀಳೋದು ಖಂಡಿತಾ. ಅದರ ಬದಲು ಇನ್ನೂರು ರೂಪಾಯಿ ಖರ್ಚು ಮಾಡಿ ಹೋಟೆಲಿಗೆ ಹೋಗಿ ತಿಂದುಬರೋದೇ ಸರಿ ಎಂದು ಲೆಕ್ಕ ಹಾಕಿ ಹಾಗೆಯೇ ಬದುಕುತ್ತಿದ್ದಾರೆ.

ಕೇಳಿ: ಒಂದು ಕಾಲದಲ್ಲಿ ಎಳ್ಳು–ಬೆಲ್ಲ ನೀಡುವುದು ಬಾಂಧವ್ಯದ ಸಂಕೇತವಾಗಿತ್ತು. ಆದರೆ ಅದೀಗ ಪ್ರತಿಷ್ಠೆಯ ವಿಚಾರವಾಗಿದೆ. ಜಾಸ್ತಿ–ಎಳ್ಳು ಬೆಲ್ಲ ಕೊಟ್ಟವರೇ ಶ್ರೀಮಂತರು ಎಂಬಂತಾಗಿದೆ! ನಾನೇ ಮೇಲು, ನಾನೇ ಶ್ರೇಷ್ಠ ಎಂದು ತೋರಿಸಿಕೊಳ್ಳಲು ಎಲ್ಲರೂ ಮುಂದಾಗಿದ್ದಾರೆ. ದೊಡ್ಡದಾಗಿ ಕಾಣಲೆಂದು ದಪ್ಪ ದಪ್ಪ ಸಕ್ಕರೆ ಅಚ್ಚು ಸೇರಿಸಿ ಎಳ್ಳು–ಬೆಲ್ಲ ಪ್ಯಾಕ್ ಮಾಡುತ್ತಿದ್ದಾರೆ. ರೆಡಿಮೇಡ್ ಎಳ್ಳು ಬೆಲ್ಲದ ಪ್ಯಾಕ್‌ಗಳು ಫ್ಯಾಬ್ ಮಾಲ್‌ಗಳಲ್ಲಿ ಧಾರಾಳವಾಗಿ ದೊರಕುತ್ತಿವೆ. ಕಳಪೆ ಮಾಲು ಎಂಬುದು ಎಳ್ಳು–ಬೆಲ್ಲದ ರೂಪದಲ್ಲೂ ಮಾರುಕಟ್ಟೆಗೆ ಬಂದಿದೆ. ಸದಾ ಮುಖವಾಡದೊಂದಿಗೇ ಬದುಕುವ ನಾವು ಈ ಬದಲಾವಣೆಯನ್ನೂ ಒಪ್ಪಿಕೊಂಡಿದ್ದೇವೆ!

ಇಲ್ಲ. ನಾವೆಲ್ಲ ಬಯಸುವ, ಸಂಕ್ರಾಂತಿ ಇದಲ್ಲವೇ ಅಲ್ಲ. ನಮ್ಮ ಆಚರಣೆಯ ಸಂಕ್ರಾಂತಿಯಲ್ಲಿ ಸಂಸ್ಕೃತಿ ಇರಬೇಕು. ಸಂಪ್ರದಾಯ ಇರಬೇಕು, ಪ್ರೀತಿ ಇರಬೇಕು. ವಿಶ್ವಾಸ–ಕೃತಜ್ಞತೆ ಜತೆಯಾಗಬೇಕು. ಹಬ್ಬದ ನೆಪದಲ್ಲಿ ಸಂ–ಕ್ರಾಂತಿ ನಮ್ಮ ಬದುಕಲ್ಲಿ ನಡೆದು ಹೋಗಬೇಕು. ಸಂಕ್ರಾಂತಿ ಅಂಥದ್ದೇ ಆಗಿರಲಿ. ಐಶ್ವರ್ಯ, ನೆಮ್ಮದಿ, ಖುಷಿ, ರಂಗು, ಆರೋಗ್ಯ, ನಲಿವು, ತೃಪ್ತಿ, ಹುಮ್ಮಸ್ಸು, ಇಷ್ಟಾರ್ಥ ಎಲ್ಲರಿಗೂ ಸಿದ್ಧಿಸಲಿ. ಸಂಭ್ರಮ, ಸೊಬಗು, ಸಮೃದ್ಧಿ ಎಲ್ಲರ ಬಾಳಿನಲ್ಲೂ ತುಂಬಿ ತುಳುಕಲಿ. ಎಲ್ಲರ ಒಳಿತಿಗಾಗಿ ಹರಕೆ–ಹಾರೈಕೆ.

© KTBS NOT TO BE REPUBLISHED

**ಕೌಶಲ :** ಬರೆಯುವುದು.

**ಸಾಮರ್ಥ್ಯ :** **ಸರಳ, ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶ ನಿಯಮಗಳನ್ನು ಅರ್ಥಮಾಡಿಕೊಂಡು ಬರೆವಣಿಗೆಯಲ್ಲಿ ಬಳಸುವುದು.**

**ಆಶಯ :** ನಮ್ಮ ಆಚರಣೆಗಳನ್ನು ಅರ್ಥಪೂರ್ಣವಾಗಿ ಮಾಡಬೇಕು. ಯಾವುದೇ ಹಬ್ಬದಲ್ಲಿ ಸಂಸ್ಕೃತಿ ಇರಬೇಕು. ಅರ್ಥಪೂರ್ಣವಾದ ವಿಚಾರ ಇರಬೇಕು, ಪ್ರೀತಿ ಇರಬೇಕು. ಹೀಗೆ ಮಾಡಿದಾಗಲೇ ನಮ್ಮ ಆಚರಣೆಗಳಿಗೆ ಅರ್ಥ ಬರುತ್ತದೆ. ಇಲ್ಲದಿದ್ದರೆ ಎಲ್ಲವೂ ಯಾಂತ್ರಿಕವಾಗುತ್ತದೆ. ಆಧುನಿಕ ಬದುಕು ನಮ್ಮ ಆಚರಣೆಗಳ ಮೂಲಸತ್ವವನ್ನು ಮರೆಮಾಚುತ್ತಿದೆ. ಹಾಗಾಗಬಾರದು. ಮನೆಯ ಹಬ್ಬಗಳಿರಲಿ, ಊರಿನ ಹಬ್ಬಗಳಿರಲಿ, ರಾಷ್ಟ್ರೀಯ ಹಬ್ಬಗಳಿರಲಿ, ನಾಡಹಬ್ಬಗಳಿರಲಿ ಇವೆಲ್ಲದರ ಅರ್ಥಪೂರ್ಣ ಆಚರಣೆ ನಡೆಯಲಿ.

## ಪದಗಳ ಅರ್ಥ

ಸಂಕ್ರಾಂತಿ–ದಾಟುವಿಕೆ, ಸೂರ್ಯನು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಹೋಗುವ ದಿನ; ಕಿಚ್ಚು–ಬೆಂಕಿ; 'ಟೂ' ಬಿಡು–ಮಾತುಬಿಡು; ಪಟೇಲ–ಹಿಂದೆ ಊರಿನ ಕ್ಷೇಮಸಮಾಚಾರಗಳನ್ನು ನೋಡಿಕೊಳ್ಳುತ್ತಿದ್ದ ಹಿರಿಯ; ಮೀಯು–ಸ್ನಾನ ಮಾಡು; ತರಹೇವಾರಿ–ವಿಧವಿಧವಾದ; ಬ್ಯುಸಿ–ಬಿಡುವಿಲ್ಲದಿರುವುದು (ಇಂಗ್ಲೀಷ್ ಪದ); ಪ್ಯಾಕ್ ಮಾಡು–ಪೊಟ್ಟಣ ಕಟ್ಟು; ರೆಡಿಮೇಡ್–ಸಿದ್ಧವಾದ; ಫ್ಯಾಬ್ ಮಾಲ್–ಆಧುನಿಕ ಮಾರುಕಟ್ಟೆಯ ಒಂದು ರೂಪ.

## ಕೃತಿಕಾರರ ಪರಿಚಯ



**ಎ.ಆರ್. ಮಣಿಕಾಂತ್** ಅವರು **ಮಂಡ್ಯಜಿಲ್ಲೆ ನಾಗಮಂಗಲ ತಾಲ್ಲೂಕಿನ ಆಯಿತನಹಳ್ಳಿಯಲ್ಲಿ** ಜನಿಸಿದರು. ಎಂಜಿನಿಯರಿಂಗ್ ಪದವೀಧರರಾದ ಇವರು ಪತ್ರಿಕೋದ್ಯೋಗಿಯಾಗಿ ಕೆಲಸಮಾಡುತ್ತಿದ್ದಾರೆ. **'ಹಾಯ್ ಬೆಂಗಳೂರು'**, **'ಸಂಯುಕ್ತ ಕರ್ನಾಟಕ'**, **'ವಿಜಯ ಕರ್ನಾಟಕ'** ಪತ್ರಿಕೆಗಳಲ್ಲಿ ಕೆಲಸಮಾಡಿ ಈಗ **'ಕನ್ನಡಪ್ರಭ'** ಪತ್ರಿಕೆಯಲ್ಲಿ ಮುಖ್ಯ ಉಪಸಂಪಾದಕರಾಗಿದ್ದಾರೆ. ಆ ಪತ್ರಿಕೆಯಲ್ಲಿ **'ಭಾವತೀರಯಾನ'** ಎಂಬ ಅಂಕಣವನ್ನು ಬರೆಯುತ್ತಿದ್ದಾರೆ. **'ಉಭಯಕುಶಲೋಪರಿ ಸಾಂಪ್ರತ'**, **'ಹಾಡು ಹುಟ್ಟಿದ ಸಮಯ'**, **'ಮರೆಯಲಿ ಹ್ಯಾಂಗ'**, **'ಈ ಗುಲಾಬಿಯು ನಿನಗಾಗಿ'** **'ಅಪ್ಪ ಅಂದ್ರೆ ಆಕಾಶ'** ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗೆ ಪುರಸ್ಕೃತರಾಗಿದ್ದಾರೆ. **'ಸಂಕ್ರಾಂತಿಯಂದು ಸುಖ–ದುಃಖ'** ಈ ಪ್ರಬಂಧವನ್ನು ಮಣಿಕಾಂತ್ ಅವರ **'ಅಮ್ಮ ಹೇಳಿದ ಎಂಟು ಸುಳ್ಳುಗಳು'** ಎಂಬ ಕೃತಿಯಿಂದ ಆರಿಸಲಾಗಿದೆ.

©KTBS NOT TO BE REPUBLISHED

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಸಂಕ್ರಾಂತಿ ಯಾವ ರೀತಿಯ ಹಬ್ಬ?

೨. ಕಿಚ್ಚು ಹಾಯಿಸುವುದು ಎಂದರೆ ಏನು?

೩. ಹಳ್ಳಿಗಳಲ್ಲಿ ಪಟೇಲರು ಏನು ಕೊಡಿಸಿ ರಾಜಿ ಮಾಡುತ್ತಿದ್ದರು?

೪. ಕೃಷಿಕರ ಮನೆಯಲ್ಲಿ ದನಕರುಗಳ ಜಾಗಕ್ಕೆ ಏನು ಬಂದು ನಿಂತಿದೆ?

೫. ನಮ್ಮ ಸಂಕ್ರಾಂತಿಯಲ್ಲಿ ಏನು ಇರಬೇಕು?

## ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ಸಂಕ್ರಾಂತಿಯಲ್ಲಿ ದನಗಳಿಗೆ ಏನು ಮಾಡಲಾಗುತ್ತದೆ?

೨. ಸಂಕ್ರಾಂತಿಯಲ್ಲಿ ಎಳ್ಳು, ಬೆಲ್ಲ, ಕೊಬ್ಬರಿ ಏಕೆ ತಿನ್ನಬೇಕು?

೩. ಸಂಕ್ರಾಂತಿಯ ದಿನದಿಂದ ಸೂರ್ಯನ ಚಲನೆ ಹೇಗಿರುತ್ತದೆ?

೪. ಎಳ್ಳು-ಬೆಲ್ಲ ನೀಡುವುದು ಇಂದಿನ ಕಾಲದಲ್ಲಿ ಹೇಗಿದೆ?

## ಇ. ಹೊಂದಿಸಿ ಬರೆಯಿರಿ.

| ಅ | ಆ |
|---|---|
| ಯುಗಾದಿ | ಎಳ್ಳು-ಬೆಲ್ಲ |
| ದೀಪಾವಳಿ | ದಸರಾ |
| ರಂಜಾನ್ | ಯೇಸು ಹುಟ್ಟಿದ ದಿನ |
| ಕ್ರಿಸ್‌ಮಸ್ | ಬೇವು-ಬೆಲ್ಲ |
| ವಿಜಯದಶಮಿ | ಬೆಳಕಿನ ಹಬ್ಬ |
| ಮಕರ ಸಂಕ್ರಾಂತಿ | ಉಪವಾಸದ ಪರ್ವದಿನ |

## ಈ. ಕೆಳಗೆ ನೀಡಿರುವ ಪಟ್ಟಿಯಲ್ಲಿ ರಾಷ್ಟ್ರೀಯ/ನಾಡ ಹಬ್ಬಗಳ ಮಹತ್ವವನ್ನು ಐದು-ಆರು ವಾಕ್ಯಗಳಲ್ಲಿ ತಿಳಿಸಿ.

೧. ಸ್ವಾತಂತ್ರ್ಯೋತ್ಸವ        ೨. ಗಣರಾಜ್ಯದಿನ        ೩. ಕನ್ನಡ ರಾಜ್ಯೋತ್ಸವ

## ವ್ಯಾಕರಣ ಮಾಹಿತಿ

### ಲೇಖನ ಚಿಹ್ನೆಗಳು

ನಾವು ಬರೆದ ವಿಚಾರಗಳು ಓದುಗರಿಗೆ ಸ್ಪಷ್ಟವಾಗಿ ಅರ್ಥವಾಗಲೆಂದು ಅಲ್ಲಲ್ಲಿ ಉಪಯೋಗಿಸುವ ಚಿಹ್ನೆಗಳಿಗೆ ಲೇಖನ ಚಿಹ್ನೆಗಳೆಂದು ಕರೆಯುವರು.

### ಅ) ಪೂರ್ಣವಿರಾಮ (.)

- ಅರ್ಥಪೂರ್ಣವಾಕ್ಯದ ಕೊನೆಯನ್ನು ಸೂಚಿಸಲು ಬಳಸುವ ಚಿಹ್ನೆ.
  ಉದಾ : ನನ್ನ ಊರು ಚೆಂದ.
- ಅಂಕಿ, ಅಕ್ಷರಗಳನ್ನು ಒಂದೊಂದಾಗಿ ಪಟ್ಟಿ ಮಾಡುವಾಗ ಅಂಕಿ, ಅಕ್ಷರದ ನಂತರ ಪೂರ್ಣವಿರಾಮ ಹಾಕಬೇಕು.
  ೧. ಅ.        ೨. ಇ.        ೩. ಉ.
- ಸಂಕ್ಷೇಪಗಳನ್ನು ಬಳಸುವಾಗ ಪ್ರತಿ ಸಂಕ್ಷೇಪಾಕ್ಷರದ ನಂತರ ಪೂರ್ಣವಿರಾಮ ಬಳಸುವುದು ವಾಡಿಕೆ.

  ಕ.ಸಾ.ಪ. (ಕನ್ನಡ ಸಾಹಿತ್ಯ ಪರಿಷತ್ತು) ಸಾ.ಶ. (ಸಾಮಾನ್ಯ ಶಕ)

@KTBS NOT TO BE REPUBLISHED

- ಕೆಲವು ಸಂಕ್ಷೇಪಗಳನ್ನು ಪೂರ್ಣವಿರಾಮವಿಲ್ಲದೇ ಬರೆಯುವುದೂ ರೂಢಿಯಲ್ಲಿದೆ.

  ಕುವೆಂಪು – (ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ) ವಿಸೀ – (ವಿ.ಸೀತಾರಾಮಯ್ಯ)

  ಚಂಪಾ – (ಚಂದ್ರಶೇಖರ ಪಾಟೀಲ) ಪಾಪು – (ಪಾಟೀಲ ಪುಟ್ಟಪ್ಪ)

## ಆ) ಅಲ್ಪವಿರಾಮ (,)

- ಮಾತಿನಲ್ಲಿ ಧ್ವನಿವಿರಾಮ ಇರುವ ಕಡೆ, ವಾಕ್ಯಗಳಲ್ಲಿ ಅರ್ಥಸ್ಪಷ್ಟತೆಗಾಗಿ, ದೀರ್ಘ ವಾಕ್ಯದಲ್ಲಿ ಅರ್ಥದ ಗೊಂದಲವನ್ನು ಹೋಗಲಾಡಿಸಲು, ಸರಿಯಾದ ಅರ್ಥ ತಿಳಿಯುವಂತೆ ಮಾಡಲು ಬಳಸುವ ಚಿಹ್ನೆ.

  **ಉದಾ:** ಬಲಮುರಿ ಪುಟ್ಟದಾದ, ಸುಂದರ, ಆಕರ್ಷಣೀಯ ಸ್ಥಳ.

- ಸಂಬೋಧನೆಯ ಅನಂತರ ಅಲ್ಪವಿರಾಮ ಬಳಸಬೇಕು.

  ಮಾನ್ಯರೆ, ನಿಮ್ಮ ಪತ್ರ ತಲುಪಿದೆ.

  ವಿದ್ಯಾರ್ಥಿ ವಿದ್ಯಾರ್ಥಿನಿಯರೇ, ಬರೆಯಲು ಸಿದ್ಧರಾಗಿರಿ.

## ಇ) ಅರ್ಧ ವಿರಾಮ (;)

- ಇದು ಅಲ್ಪವಿರಾಮದಂತೆ ಬಳಕೆಯಾದರೂ ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಮಾತ್ರ ಬಳಕೆಯಾಗುತ್ತದೆ. ವಾಕ್ಯ ಅಥವಾ ವಾಕ್ಯಾಂಶ ದೊಡ್ಡ ವಾಕ್ಯವೊಂದರ ಭಾಗವಾಗಿದ್ದು, ಅರ್ಥಪೂರ್ಣತೆ ಹೊಂದಿ ಮುಂದುವರಿಯುವಂತಿದ್ದರೆ ಅಂತಹ ವಾಕ್ಯ ಅಥವಾ ವಾಕ್ಯಾಂಶದ ಅನಂತರ ಅರ್ಧವಿರಾಮ ಬಳಸುವುದು ರೂಢಿ.

**ಉದಾ:** ಸಾಲುಮರದ ತಿಮ್ಮಕ್ಕ ಮರಗಳನ್ನು ಬೆಳೆಸಿದರು; ಈಗ ಅವರಿಗೆ ವಯಸ್ಸಾಗಿದೆ; ಮರವನ್ನು ನೋಡುವುದರಲ್ಲಿ ಅವರಿಗೆ ಸಂತೋಷ; ಮುಂದೆ ಹೀಗೆ ಮರಗಳನ್ನು ನೆಡುವವರು ಯಾರು ಎಂಬುದೇ ಯೋಚನೆ; ಮುಂದಿನ ಜನಾಂಗ ಈ ಬಗ್ಗೆ ಚಿಂತಿಸಬೇಕು.

@KTBS NOT TO BE REPUBLISHED

## ಈ) ವಿವರಣ ಚಿಹ್ನೆ (:)

- ವಿಷಯಕ್ಕೆ ವಿವರಣೆ ನೀಡಲು ವಿವರಣ ಚಿಹ್ನೆ ಬಳಕೆಯಾಗುತ್ತದೆ. ಇದು ಪೂರ್ಣವಿರಾಮದಂತೆ ವಾಕ್ಯದ ಕೊನೆಯಲ್ಲಿ ಬಳಕೆಯಾಗುತ್ತದೆ.

  ನಗರ ಜೀವನ ಹಾಳಾಗಲು ಕಾರಣಗಳು : ವಾಯು ಮಾಲಿನ್ಯ, ಶಬ್ದ ಮಾಲಿನ್ಯ, ಕಾನೂನುಬಾಹಿರವಾಗಿ ನಡೆಯುವ ನಿರ್ಮಾಣಗಳು ಮುಂತಾದವು.

- ಕೆಲವು ನಮೂನೆ, ವೈಯಕ್ತಿಕ ವಿವರ ಮುಂತಾದ ಬಳಕೆಯಲ್ಲಿ ವಿವರಣ ಚಿಹ್ನೆ ನೀಡಬೇಕು.

  ಹೆಸರು : ಹುಟ್ಟಿದ ದಿನಾಂಕ :

  ಸ್ಥಳ : ಸೂಚನೆ :

**ಉ) ಪ್ರಶ್ನೆಸೂಚಕ (?)**

* ಪ್ರಶ್ನಾರ್ಥಕ ವಾಕ್ಯದ ಕೊನೆಯಲ್ಲಿ ಬಳಸಬೇಕು.
  **ಉದಾ :** ನೀವು ಯಾರು? ನಿಮ್ಮ ಹೆಸರೇನು?
* ಪ್ರಶ್ನಾರ್ಥಕ ವಾಕ್ಯದ ರೂಪದಲ್ಲಿಲ್ಲದಿದ್ದರೂ ಅರ್ಥದ ದೃಷ್ಟಿಯಿಂದ ಪ್ರಶ್ನೆ ಅಡಕವಾಗಿದ್ದರೆ ಅಲ್ಲಿ ಪ್ರಶ್ನೆಸೂಚಕ ಬಳಸಬಹುದು.

  ಜನವರಿಯಲ್ಲಿ ಏಳನೆಯ ತರಗತಿ ಪರೀಕ್ಷೆ?

**ಊ) ಭಾವಸೂಚಕ (!)**

* ಸಂತೋಷ, ದುಃಖ, ಆಶ್ಚರ್ಯ, ಕೋಪ ಮುಂತಾದ ಭಾವನೆಗಳನ್ನು ಸೂಚಿಸುವ ಪದ ಅಥವಾ ವಾಕ್ಯದ ಕೊನೆಯಲ್ಲಿ ಭಾವಸೂಚಕ ಬಳಕೆಯಾಗುತ್ತದೆ

  ಓ ಬನ್ನೀ, ಬನ್ನೀ !
  ಹೌದಾ !
  ಛೇ !
  ಭಾರತದಲ್ಲಿ ಎಷ್ಟೊಂದು ಭಾಷೆಗಳು!

**ಋ) ವಾಕ್ಯವೇಷ್ಟನ (' ')**

* ವಾಕ್ಯದಲ್ಲಿ ಯಾವುದಾದರೂ ಅಕ್ಷರ, ಪ್ರತ್ಯಯ, ಪದ, ಪದಪುಂಜವನ್ನು ವಿಶೇಷವಾಗಿ ಹೇಳಬೇಕಾದಾಗ ವಾಕ್ಯವೇಷ್ಟನ ಚಿಹ್ನೆ ಬಳಸಬೇಕು. **ಉದಾ :** ಶಾಲೆಯ ಮುಂಭಾಗ ರಸ್ತೆಯಲ್ಲಿ 'ನಿಧಾನವಾಗಿ ಚಲಿಸಿ' ಎಂಬ ಫಲಕವನ್ನು ಅಳವಡಿಸಬೇಕು.
* ಬರವಣಿಗೆಯಲ್ಲಿ ವಿಷಯದ ಭಾಗವಾಗಿ ಬರುವ ವಿಶಿಷ್ಟ ಪದ, ಪದಪುಂಜ, ಲೇಖನ, ಪುಸ್ತಕ, ಪತ್ರಿಕೆ ಮುಂತಾದುವುಗಳನ್ನು ವಾಕ್ಯವೇಷ್ಟನ ಚಿಹ್ನೆಯೊಳಗೆ ಬರೆಯಬೇಕು.

  'ನೆನಪಿನ ದೋಣಿಯಲ್ಲಿ' ಎಂಬ 'ಆತ್ಮಕಥನ'ದ ಕರ್ತೃ ಕುವೆಂಪುರವರು. ಇವರು 'ಮಲೆಗಳಲ್ಲಿ ಮದುಮಗಳು', 'ಕಾನೂನು ಹೆಗ್ಗಡಿತಿ' ಎಂಬ ಕಾದಂಬರಿಗಳನ್ನು ರಚಿಸಿದ್ದಾರೆ.
* ಬರವಣಿಗೆಯಲ್ಲಿ ಯಾವುದಾದರೂ ಭಾಗವೊಂದನ್ನು ಅಳವಡಿಸಿದಾಗ ಅದರ ಪ್ರತ್ಯೇಕತೆ ಸೂಚಿಸಲು ಆ ಭಾಗವನ್ನು ವಾಕ್ಯವೇಷ್ಟನ ಚಿಹ್ನೆಯೊಳಗೆ ಬರೆಯಬೇಕು.

  'ಭಾರತ ಜನನಿಯ ತನುಜಾತೆ'ಯಾದ 'ಕರ್ನಾಟಕ ಮಾತೆ' ಇಂದು ಭಾರತದ ಭೂಪಟದಲ್ಲಿ ತನ್ನದೇ ಆದ ವೈಶಿಷ್ಟ್ಯತೆಗಳಿಂದ ರಾರಾಜಿಸುತ್ತಿದ್ದಾಳೆ.

**ಎ) ಉದ್ಧರಣ ಚಿಹ್ನೆ (" ")**

* ನಮ್ಮ ಬರವಣಿಗೆಯಲ್ಲಿ ಮತ್ತೊಬ್ಬರ ಮಾತುಗಳನ್ನು ಬಳಸಿದಾಗ ಅವರ ಮಾತುಗಳನ್ನು **ಎಂದು** ಎಂಬ ಪದದ ಸಹಾಯದಿಂದ ಅವರ ಮಾತುಗಳನ್ನು ಉದ್ಧರಿಸಬಹುದು.

  ದುಃಖ ಮತ್ತು ಸುಖದ ಬಗ್ಗೆ ಹೇಳುವಾಗ "ದುಃಖಕ್ಕೆ ಕಾರಣ ಸಿಕ್ಕಷ್ಟು ಬೇಗ ಸುಖಕ್ಕೆ ಕಾರಣ ಸಿಗುವುದಿಲ್ಲ" ಎಂದು ಸಾಹಿತಿ ಪಿ. ಲಂಕೇಶ್ ಅವರು ಹೇಳಿದ್ದಾರೆ.

© KTBS NOT TO BE REPUBLISHED

# ೫. ಹಚ್ಚೇವು ಕನ್ನಡದ ದೀಪ

– ಡಿ.ಎಸ್. ಕರ್ಕಿ

Z9H4K3

**ಪ್ರವೇಶ :** ಅಮ್ಮ ಮನೆಯಲ್ಲಿ ಬೇಗ ಎದ್ದು ಪ್ರತಿ ದಿನದಂತೆ ರೇಡಿಯೋ ಆನ್ ಮಾಡಿದ್ದಳು. ಕಾರ್ತಿಕ್‌ನನ್ನು ಹಾಸಿಗೆಯಿಂದ ಏಳಿಸಿದಳು. ರೇಡಿಯೋದಲ್ಲಿ 'ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು'..... ಹಾಡು ಕೇಳಿ ಬರುತ್ತಿತ್ತು. ಕಿರಣ್ ಈ ಹಾಡನ್ನು ಅತ್ಯಂತ ಆಸಕ್ತಿಯಿಂದ ಕೇಳುತ್ತಿದ್ದ. ಕೊನೆಯಲ್ಲಿ 'ಅಮ್ಮ ಈ ಹಾಡನ್ನು ಬರೆದವರು ಯಾರು?' ಎಂದು ತಾಯಿಯನ್ನು ಪ್ರಶ್ನಿಸಿದ. ತಾಯಿ "ನಮ್ಮ ರಾಷ್ಟ್ರಕವಿ ಕುವೆಂಪುರವರು ಈ ಹಾಡನ್ನು ಬರೆದಿದ್ದಾರೆ. ಇಂತಹ ಅನೇಕ ಹಾಡುಗಳನ್ನು ಅವರು ಬರೆದಿದ್ದಾರೆ. ಆ ಮೂಲಕ ಕನ್ನಡಿಗರ ನಡೆ ನುಡಿಯನ್ನು ಹಾಡಿ ಹೊಗಳಿದ್ದಾರೆ" ಎಂದರು .

ಕಾರ್ತಿಕ್ "ಅಮ್ಮಾ ಇಂತಹ ಹಾಡುಗಳನ್ನು ಇನ್ನು ಯಾರ್‍ಯಾರು ಬರೆದಿದ್ದಾರೆ" ಎಂದು ಕೇಳಿದ. "ಇಂತಹದ್ದೇ ಹಾಡುಗಳನ್ನು ಅನೇಕ ಕವಿವರೇಣ್ಯರು ಬರೆದಿದ್ದಾರೆ. ಅಂತಹವರಲ್ಲಿ ಡಿ.ಎಸ್. ಕರ್ಕಿಯವರೂ ಒಬ್ಬರು. ಅವರು 'ಹಚ್ಚೇವು ಕನ್ನಡದ ದೀಪ' ಎಂಬ ಹಾಡು ಬರೆದಿದ್ದಾರೆ. ಅವರ 'ನಕ್ಷತ್ರಗಾನ' ಎಂಬ ಕವನ ಸಂಕಲನ ಅಪ್ಪನ ಬೀರುವಿನಲ್ಲಿದೆ. ತೆಗೆದುಕೊಂಡು ಓದು" ಎಂದರು. ಕಿರಣ ಅಪ್ಪನ ಹತ್ತಿರ ಆ ಪುಸ್ತಕವನ್ನು ಪಡೆದು ಓದತೊಡಗಿದ. ಆ ಹಾಡು ಹೇಗಿದೆ ಎಂದು ನಾವೂ ನೋಡೋಣ ಬನ್ನಿ.

ಸ್ವಾತಂತ್ರ್ಯಪೂರ್ವದಲ್ಲಿ ಕನ್ನಡ ನಾಡು ಅನೇಕ ಪ್ರಾಂತ್ಯಗಳಲ್ಲಿ ಹರಿದು ಹಂಚಿಹೋಗಿತ್ತು. ಆದರೂ ಕನ್ನಡಿಗರೆಲ್ಲ ಒಂದು ಎಂಬ ಭಾವನೆ ಪ್ರತಿ ಕನ್ನಡಿಗನ ಮನದಲ್ಲೂ ಮನೆ ಮಾಡಿತ್ತು. ಇಂತಹ ಸಂದರ್ಭದಲ್ಲಿ ಸಾಮೂಹಿಕ ಜಾಗೃತಿಯನ್ನು ಉತ್ತೇಜಿಸುವ ವೀರದಾಟಿಯ ಅನೇಕ ಕವನಗಳು ನಮ್ಮ ಕವಿಗಳ ಲೇಖನಿಯಿಂದ ಹೊರಹೊಮ್ಮಿದವು.

ಹಚ್ಚೇವು ಕನ್ನಡದ ದೀಪ
ಕರುನಾಡ ದೀಪ ಸಿರಿನುಡಿಯ ದೀಪ
ಒಲವೆತ್ತಿ ತೋರುವಾ ದೀಪ । ಹಚ್ಚೇವು ।

೧

ಬಹುದಿನಗಳಿಂದ ಮೈಮರೆವೆಯಿಂದ
ಕೂಡಿರುವ ಕೊಳೆಯ ಕೊಚ್ಚೇವು
ಎಲ್ಲೆಲ್ಲಿ ಕನ್ನಡದ ಕಂಪು ಸೂಸ–
ಲಲ್ಲಲ್ಲಿ ಕರಣ ಚಾಚೇವು
ನಡುನಾಡೆ ಇರಲಿ, ಗಡಿನಾಡೆ ಇರಲಿ
ಕನ್ನಡದ ಕಳೆಯ ಕೆಚ್ಚೇವು
ಮರೆತೇವು ಮರೆವ, ತೆರೆದೇವು ಮನವ, ಎರೆದೇವು ಒಲವ– ಹಿಡಿ ನೆನಪ
ನರನರವನೆಲ್ಲ ಹುರಿಗೊಳಿಸಿ ಹೊಸೆದು ಹಚ್ಚೇವು ಕನ್ನಡದ ದೀಪ

© KTBS NOT TO BE REPUBLISHED

೨

ಕಲ್ಪನೆಯ ಕಣ್ಣು ಹರಿವನಕ ಸಾಲು
ದೀಪಗಳ ಬೆಳಕ ಬೀರೇವು
ಹಚ್ಚಿರುವ ದೀಪದಲಿ ತಾಯ ರೂಪ
ಅಚ್ಚಳಿಯದಂತೆ ತೋರೇವು
ಒಡಲೊಡಲ ಕಿಚ್ಚಿನಾ ಕಿಡಿಗಳನ್ನು
ಗಡಿನಾಡಿನಾಚೆ ತೂರೇವು
ಹೊಮ್ಮಿರಲು ಪ್ರೀತಿ ಎಲ್ಲಿಯದು ಭೀತಿ?
ನಾಡೊಲವೆ ನೀತಿ ಹಿಡಿ ನೆನಪ
ಮನೆ ಮನೆಗಳಲ್ಲಿ ಮನಮನಗಳಲ್ಲಿ
ಹಚ್ಚೇವು ಕನ್ನಡದ ದೀಪ



೩

ನಮ್ಮವರು ಗಳಿಸಿದಾ ಹೆಸರ ಉಳಿಸ-
ಲೆಲ್ಲಾರು ಒಂದುಗೂಡೇವು
ನಮ್ಮೆದೆಯ ಮಿಡಿಯುವೀ ಮಾತಿನಲ್ಲಿ
ಮಾತೆಯನು ಪೂಜೆ ಮಾಡೇವು
ನಮ್ಮುಸಿರು ತೀಡುವೀ ನಾಡಿನಲ್ಲಿ
ಮಾಂಗಲ್ಯಗೀತ ಹಾಡೇವು
ತೊರೆದೇವು ಮರುಳ, ಕಡೆದೇವು ಇರುಳ, ಪಡೆದೇವು ತಿರುಳ- ಹಿಡಿ ನೆನಪ
ಕರುಳೆಂಬ ಕುಡಿಗೆ ಮಿಂಚನ್ನೆ ಮುಡಿಸಿ ಹಚ್ಚೇವು ಕನ್ನಡದ ದೀಪ

@KTBS NOT TO BE REPUBLISHED

**ಕೌಶಲ :** ಬರೆಯುವುದು.

**ಸಾಮರ್ಥ್ಯ :** ಕಥೆಗಳನ್ನು ನಾಟಕಗಳಾಗಿ, ನಾಟಕಗಳನ್ನು ಕಥೆಗಳಾಗಿ ಪರಿವರ್ತಿಸುವ, ಕವಿತೆಗಳಿಗೆ ಸಾರಾಂಶ ಬರೆಯುವ ಸೃಜನಾತ್ಮಕತೆಯನ್ನು ಬೆಳೆಸುವುದು.

**ಆಶಯ :** ವಿವಿಧತೆಯಲ್ಲಿ ಏಕತೆಯನ್ನು ಕಾಣುತ್ತಿರುವ ದೇಶ -ನಾಡು ನಮ್ಮದು. ಜನರು ತೊಡುವ ಉಡುಗೆ-ತೊಡುಗೆಗಳಲ್ಲಿ, ಆಹಾರ-ವಿಹಾರಗಳಲ್ಲಿ, ನಡೆ-ನುಡಿಗಳಲ್ಲಿ ವಿವಿಧತೆಯೊಂದಿಗೆ ನಾವೆಲ್ಲ ಒಂದು ಎಂಬ ಒಗ್ಗಟ್ಟನ್ನು ಪ್ರದರ್ಶಿಸುತ್ತಾ ಬಂದವರು ನಾವು.

ಕನ್ನಡ ನಾಡಿನ ಭಾಷೆ ಕನ್ನಡ. ನಾಡಭಾಷೆಯಾದ ಕನ್ನಡ ಇಂದು ವಿವಿಧ ಕಾರಣಗಳಿಂದ ನಾಡಿನವರಿಂದ ದೂರವಾಗುತ್ತಿದೆ. ಭಾಷೆಯ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಬೇಕಾದ ಅನಿವಾರ್ಯತೆ ನಮ್ಮ ಮೇಲಿದೆ. ಪ್ರಪಂಚದಲ್ಲಿಯೇ ಅತ್ಯಂತ ವೈಜ್ಞಾನಿಕವಾಗಿ ಜೋಡಿಸಲ್ಪಟ್ಟ ವರ್ಣಮಾಲೆಯನ್ನು ಹೊಂದಿರುವ ಹೆಗ್ಗಳಿಕೆ ನಮ್ಮದು. ಸುಮಾರು ಎರಡು ಸಾವಿರ ವರ್ಷಗಳ ಭವ್ಯ ಇತಿಹಾಸ ನಮ್ಮ ಈ ಭಾಷೆಗಿದೆ. ಇಂತಹ ಸುಂದರ ಭಾಷೆಯನ್ನು ನಮ್ಮ ನಾಡಿನಲ್ಲಿ ಜೊತೆಗೆ ನಾಡಿನ ಹೊರಗೂ ಪಸರಿಸಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಇದರರ್ಥ ಬೇರೆ ಭಾಷೆಗಳನ್ನು ದ್ವೇಷಿಸಬೇಕೆಂದಲ್ಲ. ನಮ್ಮ ನಾಡಭಾಷೆಯ ನೆರಳಿನಲ್ಲಿ ಅನ್ಯಭಾಷೆಗಳೂ ಇರಲು ಅವಕಾಶ ಕೊಡಬೇಕು. ನಮ್ಮ ಭಾಷೆಯನ್ನು ಪ್ರೀತಿಸಬೇಕು, ಉಳಿಸಬೇಕು, ಬೆಳೆಸಬೇಕು. ಕನ್ನಡದ ದೀಪವನ್ನು ಮನೆ-ಮನಗಳಲ್ಲಿ ಹಚ್ಚಿ ಬೆಳಗಿಸುವ ಶಪಥವನ್ನು ನಾವೆಲ್ಲ ಇಂದು ಮಾಡಬೇಕಾಗಿದೆ.

## ಕೃತಿಕಾರರ ಪರಿಚಯ



**ಡಿ.ಎಸ್. ಕರ್ಕಿ:** ೧೯೦೭ರ ನವೆಂಬರ್ **೧೫ ರಂದು ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ಹಿರೇಕೊಪ್ಪದಲ್ಲಿ** ಜನಿಸಿದರು. ಕರ್ನಾಟಕದ ಪ್ರಸಿದ್ಧ ಕವಿಗಳಾದ ಇವರು ಪ್ರೌಢಶಾಲಾ ಶಿಕ್ಷಕರಾಗಿ ಸೇವೆಯನ್ನು ಪ್ರಾರಂಭಿಸಿ ಕೊನೆಯಲ್ಲಿ ಹುಬ್ಬಳ್ಳಿಯ ಕಲಾ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ೧೯೬೭ರಲ್ಲಿ ನಿವೃತ್ತರಾದರು. ಇವರು **ನಕ್ಷತ್ರಗಾನ, ಭಾವತೀರ್ಥ, ತನನತೋಂ, ಗೀತ ಗೌರವ, ಕರಿಕೆ ಕಣಗಿಲು, ನಮನ, ಬಣ್ಣದ ಚೆಂಡು** ಎಂಬ ಕವನ ಸಂಕಲನಗಳನ್ನು ಬರೆದಿದ್ದಾರೆ. ಇದಲ್ಲದೆ **ಕನ್ನಡ ಛಂದೋವಿಕಾಸ** ಎಂಬ ಸಂಶೋಧನಾ ಪ್ರಬಂಧವನ್ನು ಸಹ ಬರೆದು ಕನ್ನಡಿಗರ ಮನಗೆದ್ದಿದ್ದಾರೆ. ಗಡಿನಾಡಿನಲ್ಲಿದ್ದ ಇವರು ಅವರೆಲ್ಲರ ಪ್ರತಿನಿಧಿಯಾಗಿ ಏಕೀಕರಣದ ಕನಸ ಕಂಡವರು. ಅದಕ್ಕಾಗಿಯೇ ಅನೇಕ ಕವನಗಳನ್ನು ಕಟ್ಟಿ ಜನರ ಮನದಲ್ಲಿ ಕೆಚ್ಚನ್ನು ಮೂಡಿಸಿದವರು.

©KTBS NOT TO BE REPUBLISHED

## ಪದಗಳ ಅರ್ಥ

ಹಚ್ಚೇವು–ಹಚ್ಚುವೆವು; ಕರುನಾಡು–ಕನ್ನಡನಾಡು; ಕೊಚ್ಚೇವು– ಕತ್ತರಿಸುತ್ತೇವೆ; ಸೂಸು–ಹರಡು, ಚಿಮುಕಿಸು; ಕರಣ–ಒಡಲು, ಶರೀರ; ಕಳೆ–ಕಾಂತಿ, ತೇಜಸ್ಸು, ಪ್ರಕಾಶ; ಎರೆ–ಹೊಯ್ಯು; ಹುರಿಗೊಳಿಸು–ಬಲಪಡಿಸು; ಕೆಚ್ಚು–ಕೂಡುವಿಕೆ, ಬೆಸುಗೆ, ಸೇರಿಸು; ಅಚ್ಚಳಿಯದೆ–ಅಂದಗೆಡದಂತೆ, ರೂಪುಗೆಡದಂತೆ; ಒಂದುಗೂಡೇವು–ಒಂದಾಗಿ ಸೇರುತ್ತೇವೆ; ತೀಡು–ಬೀಸು, ಹೊರಹೊಮ್ಮು; ಮಾಂಗಲ್ಯಗೀತೆ–ಮಂಗಳಕರವಾದ ಹಾಡು; ಮರುಳು– ಹುಚ್ಚು; ಕಡೆ–ನಿವಾರಿಸು; ಮೈಮರೆವು– ದೇಹದ ಅರಿವು ಇಲ್ಲವಾಗು, ಮೂರ್ಛೆ; ಮಾತೆ–ತಾಯಿ, ಜನನಿ; ಕೊಳೆ–ಹೊಲಸು; ಕಂಪು–ಸುಗಂಧ, ಪರಿಮಳ; ನಾಡು–ಜನವಸತಿಯುಳ್ಳ ಪ್ರದೇಶ, ರಾಜ್ಯ; ಹಿಡಿ–ಗ್ರಹಿಸು, ಹಿಡಿದಿಟ್ಟುಕೊ; ಹೊಸೆ–ಹುರಿ ಮಾಡು, ಹೆಣೆ: ಹರಿವು–ಪ್ರವಹಿಸು, ಹರಿಯುವಿಕೆ; ಬೀರು–ಹರಡು; ಅಚ್ಚಳಿ–ಅಂದಕೆಡು; ತೋರು– ಕಾಣುವಂತೆ ಮಾಡು; ಒಡಲು–ಹೊಟ್ಟೆ; ತೂರು–ಎಸೆ.

## ಪೂರಕ ಮಾಹಿತಿ

**ನಡುನಾಡು** : ಕನ್ನಡ ನಾಡಿನ ಮಧ್ಯದ ಜಿಲ್ಲೆಗಳು. ಉದಾಹರಣೆಗೆ; ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ ಇತ್ಯಾದಿ, ನಾಡಿನ ನಡುವೆ ಇರುವ ಪ್ರದೇಶಗಳು.

**ಗಡಿನಾಡು** : ಕನ್ನಡನಾಡಿನ ಗಡಿಯಲ್ಲಿರುವ ಜಿಲ್ಲೆಗಳು. ಉದಾಹರಣೆಗೆ ಬೆಳಗಾವಿ, ಬೀದರ್, ಕೋಲಾರ, ಬಳ್ಳಾರಿ, ದಕ್ಷಿಣ ಕನ್ನಡ ಇತ್ಯಾದಿ.

**ಕರುನಾಡು** : ಕಪ್ಪು ಮಣ್ಣಿನ ನಾಡು, ವಿಶಾಲವಾದ ನಾಡು, ಕನ್ನಡ ನಾಡು.

**ಸಿರಿನುಡಿ** : ಸಂಪತ್ತಿನಿಂದ, ಶ್ರೀಮಂತಿಕೆಯಿಂದ ಕೂಡಿದ ಭಾಷೆ.

**ನಾಡೊಲವು** : ನಾಡಿನ ಬಗ್ಗೆ ಪ್ರೀತಿ.

**ಕೆಳಗೆ ನೀಡಿರುವ ಪದಗಳು ಪದ್ಯದ ಸಂದರ್ಭದಲ್ಲಿ ಪಡೆದುಕೊಳ್ಳುವ ಅರ್ಥವನ್ನು ಗಮನಿಸಿರಿ.**

ಕೊಳೆಯ ಕೊಚ್ಚೇವು – ನಾಡು ನುಡಿಯ ಬಗೆಗಿನ ಮರೆವಿನಿಂದಾಗಿ ಮೂಡಿರುವ ತಿರಸ್ಕಾರದ ಭಾವನೆಯನ್ನು ದೂರಮಾಡುತ್ತೇವೆ.

ಕರಣ ಚಾಚೇವು – ಕನ್ನಡ ಭಾಷೆಯ ಪರಿಮಳ ಬೀರುವಲ್ಲಿಗೆ ಹೋಗುತ್ತೇವೆ.

ಕಳೆಯಾ ಕೆಚ್ಚೇವು – ಕನ್ನಡದ ಕಾಂತಿಯನ್ನು ಬೆಳಗುತ್ತೇವೆ.

ಬೆಳಕ ಬೀರು – ಬೆಳಕನ್ನು ತೋರು.

ಅಚ್ಚಳಿಯದಂತೆ ತೋರು – ಕೆಡದಂತೆ ತೋರಿಸುತ್ತೇವೆ.

ಹಿಡಿನೆನಪ – ಜ್ಞಾಪಕ ಇಟ್ಟುಕೊ, ನೆನಪಿಟ್ಟುಕೊ

ಕಡೆದೇವು ಇರುಳಾ – ಕತ್ತಲನ್ನು (ಕೆಟ್ಟದ್ದನ್ನು) ನಾಶ ಮಾಡುತ್ತೇವೆ.

NOT TO BE REPUBLISHED @KTBS

**ಕೆಳಗಿನ ಸಾಲುಗಳು ನೀಡುವ ಶಬ್ದಚಿತ್ರವನ್ನು ಗಮನಿಸಿ.**

- ನರನರಗಳೆಲ್ಲ ಹುರಿಗೊಳಿಸಿ ಹೊಸೆದು ಹಚ್ಚೇವು ಕನ್ನಡದ ದೀಪ.
  (ನರಗಳನ್ನು ದಾರದಂತೆ ಮಾಡಿ ಅದನ್ನು ದೀಪದಲ್ಲಿಟ್ಟು ಕನ್ನಡದ ದೀಪವನ್ನು ಬೆಳಗುತ್ತೇವೆ)
- ಕಲ್ಪನೆಯ ಬೆಳಕು ಹರಿವನಕ, ಸಾಲುದೀಪಗಳ ಬೆಳಕು ಬೀರೇವು.
  (ನಿಜವಾಗಿ ಕಣ್ಣಿಗೆ ಕಾಣುವುದಕ್ಕಿಂತ ಕಲ್ಪನೆಯಲ್ಲಿ ಇನ್ನೂ ಹೆಚ್ಚುದೂರ ಕಾಣುತ್ತದೆ. ನಮ್ಮ ಕಣ್ಣಿನಿಂದ ಆ ದಾರಿ ಸಾಗುವವರೆಗೆ ಸಾಲು ದೀಪಗಳನ್ನು ಹಚ್ಚುತ್ತೇವೆ.)
- ತೊಡೆದೇವು ಮರುಳಾ, ಕಡೆದೇವು ಇರುಳಾ, ಪಡೆದೇವು ತಿರುಳಾ. (ನಮ್ಮ ಹುಚ್ಚನ್ನು ಬಿಡುತ್ತೇವೆ, ಕೆಟ್ಟದ್ದನ್ನು ನಾಶ ಮಾಡುತ್ತೇವೆ, ಕನ್ನಡದ ಉತ್ತಮ ಬದುಕಿಗೆ ಬೇಕಾದ ಉತ್ತಮಾಂಶಗಳನ್ನು ಪಡೆಯುತ್ತೇವೆ.)
- ಕರುಳೆಂಬ ಕುಡಿಗೆ ಮಿಂಚನ್ನೆ ಮುಡಿಸಿ:
  (ಹೊಟ್ಟೆಯೊಳಗೆ ಕರುಳಿರುತ್ತದೆ. ಆದರೆ ಇಲ್ಲಿ ಮಮತೆ ಎಂಬರ್ಥ. ಅದಕ್ಕೆ ಮಿಂಚನ್ನು ಮುಡಿಸಿ ಎಂಬುದು ಒಂದು ಅರ್ಥ. ದೀಪದ ಕುಡಿ ಎಂದರೆ ತುದಿ ಅದಕ್ಕೆ ಮಿಂಚುವ ಬೆಳಕನ್ನು ಹಚ್ಚಿ ಎಂಬುದು ಇನ್ನೊಂದು ಅರ್ಥ)

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಕನ್ನಡದ ಕಂಪನ್ನು ಸೂಸುವಲ್ಲಿ ಏನನ್ನು ಚಾಚುತ್ತೇವೆ?

೨. ಕಲ್ಪನೆಯ ಕಣ್ಣು ಹರಿವ ತನಕ ಯಾವ ದೀಪಗಳನ್ನು ಹಚ್ಚುತ್ತೇವೆ?

೩. ನಮ್ಮವರು ಗಳಿಸಿದ ಹೆಸರುಳಿಸಲು ಎಲ್ಲರೂ ಏನು ಮಾಡುತ್ತೇವೆ?

೪. ನಮ್ಮುಸಿರು ತೀಡುವ ನಾಡಿನಲ್ಲಿ ಯಾವ ಗೀತೆ ಹಾಡುತ್ತೇವೆ?

೫. ಕರುಳೆಂಬ ಕುಡಿಗೆ ಏನನ್ನು ಮುಡಿಸುತ್ತೇವೆ?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯದಲ್ಲಿ ಉತ್ತರಿಸಿ.**

೧. ಕನ್ನಡಿಗರು ಯಾವ ದೀಪವನ್ನು ಹಚ್ಚುತ್ತಾರೆ?

೨. ಏನನ್ನು ಮರೆತು, ಏನನ್ನು ಎರೆದು, ಹೇಗೆ ಕನ್ನಡದ ದೀಪ ಹಚ್ಚುತ್ತಾರೆ?

೩. ಕನ್ನಡ ಮಾತೆಯನ್ನು ಹೇಗೆ ಆದರಿಸುತ್ತಾರೆ?

**ಇ. ಕೆಳಗಿನ ಸಾಲುಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ.**

೧. ಮೈಮರೆವೆಯಿಂದ ಕೂಡಿರುವ ____________

೨. ಹಚ್ಚಿರುವ ದೀಪದಲಿ ತಾಯರೂಪ ____________

೩. ನಮ್ಮೆದೆಯ ಮಿಡಿಯುವೀ ಮಾತಿನಲ್ಲಿ ಮಾತೆಯನು ____________

೪. ಕರುಳೆಂಬ ಕುಡಿಗೆ ____________________

**ಈ.** **'ಹಚ್ಚೇವು'** ಎಂಬ ಪದಕ್ಕೆ ಸರಿಹೊಂದುವ, ಪದ್ಯದಲ್ಲಿ ಇರುವ ಪ್ರಾಸಪದಗಳನ್ನು ಬರೆಯಿರಿ.

**ಉ.** **'ಬೀರೇವು'** ಎಂಬ ಪದದಂತೆ ಪದಮಧ್ಯದಲ್ಲಿ **'ರ'** ಅಕ್ಷರ ಬರುವ ಪದಗಳನ್ನು ಪಟ್ಟಿ ಮಾಡಿ.

**ಊ.** ಕೈಗೆ ಕಾಲ್ಗೆ ಮೊಳೆಯ ಜಡಿಯೆ  
ಶಿಲುಬೆಗಿಕ್ಕಿ ಸಾಯೆ ಬಡಿಯೆ  
ಅವರ ತಪ್ಪ ಕ್ಷಮಿಸುಯೆಂದು  
ಮೊರೆಯನಿಟ್ಟ ತಂದೆಗೆಂದು  
ಕ್ರಿಸ್ತ ಸತ್ತು ಬದುಕಿದ  
ಯುಗವೊಂದನು ತೊಡಗಿದ– **ಕಯ್ಯಾರ ಕಿಞ್ಞಣ್ಣ ರೈ (ಶತಮಾನದ ಗಾನ)**

ಈ ಪದ್ಯದಲ್ಲಿ ಬರುವ ಪ್ರಾಸ ಪದಗಳನ್ನು ಪಟ್ಟಿಮಾಡಿ.

NOT TO BE REPUBLISHED
@KTBS

## ಭಾಷಾಭ್ಯಾಸ

**ಅ. ಕೆಳಗೆ ನೀಡಿರುವ ಪದ್ಯದ ಪ್ರಾಸಪದಗಳನ್ನು ಜೋಡಿಸಿ ಬರೆಯಿರಿ.**

| | | | | | |
|---|---|---|---|---|---|
| ದೀಪ | ಮರುಳು | ತೀಡು | ಭೀತಿ | ಹಾಡು | ಮನವ |
| ಹಚ್ಚು | ರೂಪ | ಕರುಳು | ಪಡೆ | ಮನೆ | ಮಿಡಿ |
| ಗೂಡು | ನಾಡು | ಮರೆತೇವು | ನಾಡು | ಗಡಿನಾಡು | ಸಿಡಿ |
| ಪ್ರೀತಿ | ನೀತಿ | ಮನ | ಕುಡಿ | ಇರುಳು | ಸೊಂಪು |
| ನಡುನಾಡು | ಅಚ್ಚು | ತೊಡೆ | ಮುಡಿ | ಹಿಡಿ | ಮರೆವ |
| ಮಿಡಿ | ತೊರೆದೇವು | ಕೆಚ್ಚು | ಗಳಿಸು | ಕಂಪು | |

**ಆ. ಕೆಳಗೆ ನೀಡಿರುವ ಪದಗಳ ಅರ್ಥವ್ಯತ್ಯಾಸವನ್ನು ಗಮನಿಸಿ.**

- ಹಚ್ಚು–ಹಚ್ಚೆವು–ಹಚ್ಚುವುದಿಲ್ಲ, ಹಚ್ಚೇವು – ಹಚ್ಚುತ್ತೇವೆ.
- ಬೀರು–ಬೀರೆವು–ಬೀರುವುದಿಲ್ಲ. ಬೀರೇವು – ಬೀರುತ್ತೇವೆ.
- ಮಾಡು–ಮಾಡೆವು–ಮಾಡುವುದಿಲ್ಲ. ಮಾಡೇವು – ಮಾಡುತ್ತೇವೆ.

**ಇ. ಇದೇ ರೀತಿಯಲ್ಲಿ ನೋಡು, ಹಾಡು, ನಿಲ್ಲು, ಮೆಚ್ಚು ಮೊದಲಾದ ಪದಗಳನ್ನು ಕೆಳಗಿನ ವಾಕ್ಯದಲ್ಲಿ ಬಳಸಿ ವಾಕ್ಯ ಪೂರ್ಣಗೊಳಿಸಿ.**

ನಾವು ಕನ್ನಡ ಚಲನ ಚಿತ್ರಗಳನ್ನು ____________

ನಾವು ಕನ್ನಡ ಗೀತೆಗಳನ್ನು ____________

ನಿಮಗಾಗಿ ನಾಳೆ ನಾವು ಕಾಯುತ್ತಾ ____________

ನಿಮ್ಮೆಲ್ಲ ಚಿತ್ರಗಳನ್ನು ____________

**ಈ. ಒಂದೇ ಪದವನ್ನು ನಾಮಪದ ಮತ್ತು ಕ್ರಿಯಾಪದ ಅರ್ಥದಲ್ಲಿ ಮಾದರಿಯಂತೆ ಬಳಸಿ ವಾಕ್ಯ ರಚಿಸಿ.**

**ಮಾದರಿ:** ಕಳೆ : ನಮ್ಮ ಶಾಲಾ ಕೈತೋಟದಲ್ಲಿ ತುಂಬಾ ಕಳೆ ಬೆಳೆದಿದೆ.

ರಾಜುವಿನ ಮುಖದಲ್ಲಿ ತುಂಬಾ ಕಳೆಯಿದೆ.

೧. ಹಂಚು: ______________________________

೨. ಕುಡಿ : ______________________________

೩. ಪಡೆ : ______________________________

©KTBS NOT TO BE REPUBLISHED

**ಉ. ಮೊದಲೆರಡು ಪದಗಳ ಸಂಬಂಧ ಗ್ರಹಿಸಿ ಖಾಲಿಜಾಗದಲ್ಲಿ ಸೂಕ್ತ ಪದ ಭರ್ತಿಮಾಡಿ.**

೧. ಆಂಧ್ರಪ್ರದೇಶ: ಅಮರಾವತಿ :: ಕೇರಳ: ______________

೨. ಶತ್ರು: ಮಿತ್ರ :: ರಾತ್ರಿ: ______________

೩. ಮಾತಾ: ತಾಯಿ:: ಪಿತ: ______________

೪. ದಾವಣಗೆರೆ: ನಡುನಾಡು:: ಬೆಳಗಾವಿ: ______________

**ಚಟುವಟಿಕೆ:**

೧. ನಾಡಭಕ್ತಿ ಗೀತೆಗಳನ್ನು ಸಂಗ್ರಹಿಸಿ ಹಾಡಿನ ಒಂದು ಆಲ್ಬಂ ತಯಾರಿಸಿ.

೨. ಕರ್ನಾಟಕದಲ್ಲಿ ಮಾತನಾಡುವ ವಿವಿಧ ಭಾಷೆಗಳನ್ನು ಪಟ್ಟಿ ಮಾಡಿ.

೩. ನೀವು ಮಾತನಾಡುವ ಮತ್ತು ಅರ್ಥ ಮಾಡಿಕೊಳ್ಳುವ ವಿವಿಧ ಭಾಷೆಗಳನ್ನು ಪಟ್ಟಿ ಮಾಡಿ.

೪. ನಮ್ಮ ರಾಜ್ಯದ ಗಡಿನಾಡಿನಲ್ಲಿರುವ ಜಿಲ್ಲೆಗಳ ಬಗ್ಗೆ ನಿಮ್ಮ ಗ್ರಂಥಾಲಯದಲ್ಲಿರುವ ಪುಸ್ತಕಗಳನ್ನು ಓದಿ.

© KTBS NOT TO BE REPUBLISHED

## ವ್ಯಾಕರಣ ಮಾಹಿತಿ

### ಸಂಸ್ಕೃತ ಸಂಧಿಗಳು

**ಕೆಳಗಿನ ವಾಕ್ಯವೃಂದವನ್ನು ಗಮನಿಸಿ.**

ಮಕ್ಕಳು ಚೆನ್ನಾಗಿ **ವಿದ್ಯಾಭ್ಯಾಸ** ಮಾಡಬೇಕು. **ಸೂರ್ಯೋದಯಕ್ಕೆ** ಮುನ್ನ ಎದ್ದು ಅಭ್ಯಾಸ ಮಾಡುವುದು ಒಳ್ಳೆಯದು. ಸೂರ್ಯ ನಮಗೆ ಹತ್ತಿರದ **ಏಕೈಕ** ನಕ್ಷತ್ರ. ಸೂರ್ಯನಿಂದ **ಅತ್ಯಂತ** ಪ್ರಖರವಾದ ಬೆಳಕು ಭೂಮಿಗೆ ದೊರೆಯುತ್ತದೆ. ಸೂರ್ಯ **ದಿಗಂತ**ದಲ್ಲಿದ್ದಂತೆ ಕಾಣುತ್ತಾನೆ. ಸೂರ್ಯನೇ **ಜಗಜ್ಜ್ಯೋತಿ,** ಸೂರ್ಯನೇ **ಚಿನ್ಮಯ.**

ಮೇಲಿನ ವಾಕ್ಯವೃಂದದಲ್ಲಿ ಹಲವು ಸಂಸ್ಕೃತ ಪದಗಳಿವೆ. ಈ ಪದಗಳು ಕನ್ನಡ ಭಾಷೆಯಲ್ಲಿ ಹಾಸುಹೊಕ್ಕಾಗಿ ಸೇರಿವೆ. ಕೆಲವು ಪದಗಳು ಸಂಧಿಯಾಗಿ ಪ್ರಯೋಗವಾಗಿವೆ. ಇಲ್ಲಿಯ ಸಂಧಿಕಾರ್ಯ ಸಂಸ್ಕೃತ ಭಾಷೆಯ ನಿಯಮಗಳ ಪ್ರಕಾರ ನಡೆದಿದೆ.

ಎರಡು ಸಂಸ್ಕೃತ ಶಬ್ದಗಳು ಸೇರಿದಾಗ ಪರಸ್ಪರ ಎದುರಾದ ಅಕ್ಷರಗಳ ನಡುವೆ ಸಂಧಿಯಾದರೆ ಸಂಸ್ಕೃತ ಸಂಧಿಯಾಗುತ್ತದೆ. ಕನ್ನಡದಂತೆಯೇ ಸಂಸ್ಕೃತದಲ್ಲೂ ಸ್ವರಸಂಧಿಗಳೂ ವ್ಯಂಜನಸಂಧಿಗಳೂ ಇವೆ. ಅವುಗಳ ಬಗ್ಗೆ ತಿಳಿಯೋಣ.

## ಸಂಸ್ಕೃತ ಸ್ವರ ಸಂಧಿಗಳು

### * ಸವರ್ಣದೀರ್ಘ ಸಂಧಿ

೧. ನನ್ನ ಗೆಳೆಯ ರವೀಂದ್ರ.

೨. ಕರ್ನಾಟಕದಲ್ಲಿ ಹಲವು ದೇವಾಲಯಗಳಿವೆ.

೩. ಗುರೂಪದೇಶವನ್ನು ಪಡೆಯುವುದು ಒಳ್ಳೆಯದು.

೪. ಗಾಂಧೀಜಿಯವರನ್ನು ಮಹಾತ್ಮ ಎಂದು ಕರೆಯಲಾಗುತ್ತದೆ.

ಮೇಲಿನ ವಾಕ್ಯಗಳಲ್ಲಿರುವ ರವೀಂದ್ರ, ದೇವಾಲಯ, ಗುರೂಪದೇಶ, ಮಹಾತ್ಮ ಈ ಶಬ್ದಗಳಲ್ಲಿ ಆಗಿರುವ ಸಂಧಿಕಾರ್ಯವನ್ನು ಗಮನಿಸಿ.

**ಪೂರ್ವಪದ+ಉತ್ತರಪದ = ಸಂಧಿಪದ**

೧. ದೇವ+ಆಲಯ=ದೇವಾಲಯ (ಅ+ಆ=ಆ)

೨. ರವಿ+ಈಂದ್ರ=ರವೀಂದ್ರ (ಇ+ಇ=ಈ)

೩. ಗುರು+ಉಪದೇಶ=ಗುರೂಪದೇಶ (ಉ+ಉ=ಊ)

೪. ಮಹಾ+ಆತ್ಮ=ಮಹಾತ್ಮ (ಆ+ಆ=ಆ)

ಮೇಲಿನ ಪದಗಳಲ್ಲಿರುವಂತೆ ಪೂರ್ವಪದದ ಅಂತ್ಯಸ್ವರ ಮತ್ತು ಉತ್ತರ ಪದದ ಆರಂಭದ ಸ್ವರ ಒಂದೇ ರೀತಿಯ ವರ್ಣವಾಗಿದ್ದು ಸಂಧಿಕಾರ್ಯ ನಡೆಯುವಾಗ ಅದೇ ಸ್ವರದ ದೀರ್ಘಸ್ವರವು ಆದೇಶವಾಗಿರುವುದು ಕಂಡುಬರುತ್ತದೆ. ಸಂಧಿಕಾರ್ಯ ನಡೆಯುವಾಗ ಒಂದೇ ರೀತಿಯ ಸ್ವರಾಕ್ಷರಗಳು ಪರಸ್ಪರ ಸೇರಿ ದೀರ್ಘಸ್ವರ ಆದೇಶವಾದರೆ ಅಂತಹ ಸಂಧಿಯನ್ನು **'ಸವರ್ಣದೀರ್ಘಸಂಧಿ'** ಎಂದು ಕರೆಯುತ್ತೇವೆ.

### * ಗುಣಸಂಧಿ

**ಪೂರ್ವಪದ + ಉತ್ತರಪದ = ಸಂಧಿಪದ**

೧. ದೇವ+ಇಂದ್ರ=ದೇವೇಂದ್ರ (ಅ+ಇ=ಏ)

೨. ಮಹಾ+ಈಶ=ಮಹೇಶ (ಆ+ಈ=ಏ)

೩. ಅರುಣ+ಉದಯ=ಅರುಣೋದಯ (ಅ+ಉ=ಓ)

೪. ಮಹಾ+ಋಷಿ=ಮಹರ್ಷಿ(ಆ+ಋ=ಅರ್)

'ಅ' ಅಥವಾ 'ಆ' ಎಂಬ ಸ್ವರಗಳಿಗೆ 'ಇ' ಅಥವಾ 'ಈ' ಎಂಬ ಸ್ವರ ಸೇರಿದಾಗ 'ಏ'ಕಾರವೂ 'ಉ' ಅಥವಾ 'ಊ' ಸ್ವರ ಸೇರಿದಾಗ 'ಓ'ಕಾರವೂ 'ಋ' ಎಂಬ ಸ್ವರವು ಸೇರಿದಾಗ 'ಅರ್' ಕಾರವೂ ಆದೇಶವಾಗಿ ಬರುವುದನ್ನು **'ಗುಣಸಂಧಿ'** ಎಂದು ಕರೆಯುತ್ತೇವೆ.

© KTBS NOT TO BE REPUBLISHED

*   **ವೃದ್ಧಿಸಂಧಿ**

**ಪೂರ್ವಪದ + ಉತ್ತರಪದ=ಸಂಧಿಪದ**

೧. ಏಕ+ಏಕ=ಏಕೈಕ(ಅ+ಏ=ಐ)
೨. ಶಿವ+ಐಕ್ಯ=ಶಿವೈಕ್ಯ(ಅ+ಐ=ಐ)
೩. ಮಹಾ+ಔದಾರ್ಯ=ಮಹೌದಾರ್ಯ(ಆ+ಔ=ಔ)
೪. ವನ+ಓಷಧಿ=ವನೌಷಧಿ(ಅ+ಓ=ಔ)

'ಅ' 'ಆ'ಕಾರಗಳ ಮುಂದೆ 'ಏ', 'ಐ' ಕಾರಗಳು ಬಂದರೆ ಅವೆರಡರ ಸ್ಥಾನದಲ್ಲಿ 'ಐ'ಕಾರವೂ 'ಓ', 'ಔ' ಕಾರಗಳು ಬಂದರೆ ಅವೆರಡರ ಸ್ಥಾನದಲ್ಲಿ 'ಔ'ಕಾರವೂ ಆದೇಶವಾಗಿ ಬರುವುದು. ಇದಕ್ಕೆ **'ವೃದ್ಧಿಸಂಧಿ'** ಎಂದು ಹೆಸರು.

*   **ಯಣ್‌ಸಂಧಿ**

**ಪೂರ್ವಪದ+ಉತ್ತರಪದ=ಸಂಧಿಪದ**

೧. ಇತಿ+ಆದಿ=ಇತ್ಯಾದಿ (ಇ+ಆ=ಯ್)
೨. ಗುರು+ಆಜ್ಞೆ=ಗುರ್ವಾಜ್ಞೆ (ಉ+ಆ=ವ್)
೩. ಪಿತೃ+ಆರ್ಜಿತ=ಪಿತ್ರಾರ್ಜಿತ (ಋ+ಆ=ರ್)
೪. ಪ್ರತಿ+ಉಪಕಾರ=ಪ್ರತ್ಯುಪಕಾರ (ಇ+ಉ=ಯ್)
೫. ಜಾತಿ+ಅತೀತ=ಜಾತ್ಯತೀತ (ಇ+ಅ=ಯ್)

ಇ, ಈ , ಉ, ಊ, ಋ ಕಾರಗಳಿಗೆ ಸವರ್ಣವಲ್ಲದ ಸ್ವರ ಪರವಾದರೆ, 'ಇ' 'ಈ' ಕಾರಗಳಿಗೆ 'ಯ'ಕಾರವೂ ಉ, ಊ ಕಾರಗಳಿಗೆ 'ವ' ಕಾರವೂ ಋ ಕಾರಕ್ಕೆ 'ರ' ಕಾರವೂ ಆದೇಶವಾಗಿ ಬರುವುದನ್ನು **'ಯಣ್ ಸಂಧಿ'** ಎಂದು ಕರೆಯುವರು.

NOT TO BE REPUBLISHED @KTBS

## ಪೂರಕ ಮಾಹಿತಿ

### ನಮ್ಮ ಕನ್ನಡ ನಾಡು

ನಮ್ಮ ಕರ್ನಾಟಕದ ಹೆಸರು ಮಹಾಭಾರತದ ಕಾಲದಿಂದ ಇಂದಿನವರೆಗೆ ತನ್ನದೇ ಆದ ವಿಶೇಷತೆಗಳಿಂದ ಇತಿಹಾಸದ ಪುಟಗಳಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದೆ. ಕರಿಯ ಮಣ್ಣಿನ ನಾಡು ಕರ್ನಾಟಕ, ಕರುನಾಡು ಅಥವಾ ಎತ್ತರದ ನಾಡು ಕರ್ನಾಟಕ, ಕಮ್ಮಿತು ನಾಡು ಅಂದರೆ ಶ್ರೀಗಂಧದ ಕಂಪನ್ನುಳ್ಳ ನಾಡು ಕರ್ನಾಟಕವಾಗಿದೆ ಎಂದೆಲ್ಲ ವಾದಿಸುವವರು ನಮ್ಮಲ್ಲಿದ್ದಾರೆ. ಆದರೆ ಜನಸಾಮಾನ್ಯ ಇದ್ಯಾವುದರ ಬಗ್ಗೆಯೂ ತಲೆಕೆಡಿಸಿಕೊಳ್ಳದೆ ತನ್ನ ನಾಡು ಕರ್ನಾಟಕ ಎಂಬಷ್ಟಕ್ಕೇ ಪ್ರಾಧಾನ್ಯ ನೀಡಿದ್ದಾನೆ.

ಸಾ.ಶ.ಪೂ. ೩ ನೆಯ ಶತಮಾನದಲ್ಲಿ ಕರ್ನಾಟಕದ ಹೆಚ್ಚಿನ ಭಾಗ ಮೌರ್ಯಚಕ್ರವರ್ತಿ ಅಶೋಕನ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಇತಿಹಾಸಕಾರರು ಕಂಡುಕೊಂಡಿದ್ದಾರೆ. ಅಲ್ಲಿಂದ ಇಲ್ಲಿಯವರೆಗೆ ಕರ್ನಾಟಕವನ್ನು

ಕಂಚಿಯ ಪಲ್ಲವರಿಂದ ಹಿಡಿದು ಕನ್ನಡಿಗರನ್ನು ಆಳಿದ ಮೊದಲ ಕನ್ನಡಿಗ ದೊರೆಗಳಾದ ಕದಂಬರು, ಅನಂತರ ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ದೇವಗಿರಿ ಯಾದವರು, ವಿಜಯನಗರದರಸರು, ಬಹುಮನಿ ಸುಲ್ತಾನರು, ಬಿಜಾಪುರದ ಆದಿಲ್ ಷಾಹಿಗಳು, ಕೆಳದಿ–ಮೈಸೂರು ಅರಸರು, ಹೈದರ್, ಟಿಪ್ಪುವರೆಗೆ ಅನೇಕ ರಾಜಮನೆತನಗಳು, ರಾಜ ಮಹಾರಾಜರು ಆಳಿದ್ದಾರೆ. ಆ ಮೂಲಕ ರಾಜ್ಯದ ಏಳಿಗೆಗೆ ತಮ್ಮದೇ ಆದ ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳಿಗೆ ಅಪಾರ ಕೊಡುಗೆಗಳನ್ನು ನೀಡಿದ್ದಾರೆ.

ಭಾರತ ಜನನಿಯ ತನುಜಾತೆಯಾದ ಕರ್ನಾಟಕ ಮಾತೆ ಇಂದು ಭಾರತದ ಭೂಪಟದಲ್ಲಿ ತನ್ನದೇ ಆದ ವೈಶಿಷ್ಟ್ಯಗಳಿಂದ ರಾರಾಜಿಸುತ್ತಿದ್ದಾಳೆ. ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದ ಕೀರ್ತಿ ಕನ್ನಡ ಭಾಷೆಯದ್ದು. ಬ್ರಿಟಿಷರ ಕಾಲದಲ್ಲಿ ಕನ್ನಡ ಭಾಷಾ ಪ್ರದೇಶಗಳು ಸುಮಾರು ೨೦ ಆಡಳಿತದಲ್ಲಿ ಹರಿದು ಹಂಚಿ ಹೋಗಿದ್ದವು. ಅನಂತರ ೧೯೪೭ರಲ್ಲಿ ಮದ್ರಾಸ್, ಮುಂಬೈ, ಮೈಸೂರು, ಕೊಡಗು ಹಾಗೂ ಹೈದರಾಬಾದ್ ಪ್ರಾಂತಗಳೆಂಬ ಬೇರೆ ಬೇರೆ ಆಡಳಿತಗಳಿಗೆ ಒಳಪಟ್ಟಿತ್ತು. ೧೯೫೬ರಲ್ಲಿ ಈ ಎಲ್ಲಾ ಪ್ರಾಂತಗಳನ್ನು ಒಟ್ಟು ಸೇರಿಸಿ 'ಮೈಸೂರು ರಾಜ್ಯ' ಎಂಬ ಹೆಸರಿನಲ್ಲಿ ಇಂದಿನ ನಮ್ಮ ಕನ್ನಡ ನಾಡು ಉದಯಿಸಲ್ಪಟ್ಟಿತು. ಮೈಸೂರು ರಾಜ್ಯಕ್ಕೆ ಪುನರ್‌ನಾಮಕರಣವನ್ನು ಮಾಡಿ ೧೯೭೩ರ ನವೆಂಬರ್ ೧ ರಂದು "ಕರ್ನಾಟಕ" ಎಂದು ಹೆಸರಿಡಲಾಯಿತು.

### ಚೆನ್ನುಡಿ

**ತನ್ನ ಮರೆಯ ಕಂಪನರಿಯದದನೆ ಹೊರಗೆ ಹುಡುಕುವ**
**ಮೃಗದ ಸೇಡು ನಮ್ಮ ಪಾಡು ಪರರ ನುಡಿಗೆ ಮಿಡುಕುವ**
**ಕನ್ನಡ ಕಸ್ತೂರಿಯನ್ನ**
**ಹೊಸತುಸಿರಿಂ ತೀಡದನ್ನ**
**ಸುರಭಿ ಎಲ್ಲಿ? ನೀನದನ್ನ**
**ನವಶಕ್ತಿಯನೆಬ್ಬಿಸು–**
**ಹೊಸಸುಗಂಧದೊಸಗೆಯಿಂದ ಜಗದಿ ಹೆಸರ ಹಬ್ಬಿಸು॥**

**–ಎಂ. ಗೋವಿಂದ ಪೈ** (ರಾಷ್ಟ್ರಕವಿ, ವಿದ್ವಾಂಸ, ಸಂಶೋಧಕರು)

ಕಸ್ತೂರಿ ಮೃಗವು ತನ್ನಲ್ಲೇ ಪರಿಮಳ ಅಡಗಿದ್ದರೂ ಅದನ್ನು ಅರಿಯದೆ ಬೇರೆ ಕಡೆ ಕಸ್ತೂರಿಯ ಪರಿಮಳ ಹುಡುಕುವಂತೆ, ನಾವಿಂದು ಕಸ್ತೂರಿಯಂತೆ ಪರಿಮಳಯುಕ್ತವಾದ ಕನ್ನಡವನ್ನು ತಿಳಿಯದೆ, ಬೇರೆ ಭಾಷೆಯ ಕಡೆ ನೋಡುತ್ತಿದ್ದೇವೆ. ಕನ್ನಡದ ಕಸ್ತೂರಿಯನ್ನು ಹೊಸ ಉಸಿರಿಂದ ತೀಡಿ, ಹೊಸ ಶಕ್ತಿಯನ್ನಾಗಿ ಅದನ್ನು ಎಬ್ಬಿಸಿ, ಅದರ ಸುಗಂಧವನ್ನು ಎಲ್ಲ ದಿಕ್ಕಿಗೆ ಹರಡಬೇಕಾಗಿದೆ.

©KTBS NOT TO BE REPUBLISHED

# ೬. ಬಿಡುಗಡೆಯ ಹಾಡು

V3M2T9

– ಮುದೇನೂರು ಸಂಗಣ್ಣ

**ಪ್ರವೇಶ :** ‘ಸ್ವಾತಂತ್ರ್ಯ’ ಪ್ರತಿಯೊಬ್ಬರ ಜನ್ಮಸಿದ್ಧ ಹಕ್ಕು. ಸ್ವಾತಂತ್ರ್ಯವಿಲ್ಲದ ಬದುಕು ನರಕಕ್ಕೆ ಸಮಾನವಾದದ್ದು. ಇದು ಕೇವಲ ಮನುಕುಲಕ್ಕೆ ಮಾತ್ರ ಸೀಮಿತವಾದುದ್ದಲ್ಲ. ಪ್ರತಿಯೊಂದು ಪ್ರಾಣಿ ಪಕ್ಷಿಗಳಿಗೂ ಅನ್ವಯವಾಗುತ್ತದೆ. ‘ಪಂಜರದ ಪಕ್ಷಿ’ ಕೇವಲ ಸಾಂಕೇತಿಕ ರೂಪಕವಾಗಿದ್ದು, ಇದು ಸ್ವಾತಂತ್ರ್ಯವಿಹೀನರ ಬದುಕಿನ ಸಂಕೇತವಾಗಿದೆ. ‘ಕಡಲುಗಳ ರಾಣಿ’ ಎನಿಸಿದ ಇಂಗ್ಲೆಂಡ್ ಭಾರತಕ್ಕೆ ವ್ಯಾಪಾರಕ್ಕಾಗಿ ಆಗಮಿಸಿ ನಮ್ಮ ದೇಶವನ್ನು ತಮ್ಮ ವಶಕ್ಕೆ ಪಡೆದು ಭಾರತೀಯರನ್ನು ಪಂಜರದ ಹಕ್ಕಿಯನ್ನಾಗಿಸಿ ಸ್ವಾತಂತ್ರ್ಯ ಹೀನರನ್ನಾಗಿಸಿದ್ದು ಒಂದು ಇತಿಹಾಸ. ಆನಂತರ ಭಾರತೀಯರು ಬ್ರಿಟಿಷರನ್ನು ತೊಲಗಿಸಲು ನಡೆಸಿದ ಸ್ವಾತಂತ್ರ್ಯ ಸಂಗ್ರಾಮವನ್ನು ಕವಿ ಪ್ರಾಕೃತಿಕ ಸನ್ನಿವೇಶಗಳೊಂದಿಗೆ ಸಮೀಕರಿಸಿ ನೋಡುವ ಪ್ರಯತ್ನ ಅಮೋಘವಾದ್ದು. ಭಾರತೀಯರ ಐಕ್ಯತೆಯ ಮಂತ್ರದಿಂದ ಮಾತ್ರ ನಾವು ಸ್ವಾತಂತ್ರ್ಯಗಳಿಸಲು ಸಾಧ್ಯವಾಯಿತೆಂಬುದನ್ನು ‘ಬಿಡುಗಡೆಯ ಒಕ್ಕೊರಲ ಹಾಡು’ ಎಂಬ ವಾಕ್ಯದೊಂದಿಗೆ ಧ್ವನಿಪೂರ್ಣಗೊಳಿಸಿದ್ದಾರೆ.



© KTBS NOT TO BE REPUBLISHED

ಹಂಗಿನರಮನೆಯ ಮುಳ್ಳಿನೀ ಪಂಜರದಲ್ಲಿ
ರೆಕ್ಕೆಗಳ ಬಿಗಿ ಹಿಡಿದು ನರಳುತಿದೆ ಹಕ್ಕಿ
ಕದ ಮುರಿದು ಹೊರಬಂದು ಬಾನಾಡಿಯಾಗುತ್ತ
ವಿಹರಿಸಲಿ, ಹರ್ಷಿಸಲಿ ಹಿಗ್ಗಿನೊಳು ಸೊಕ್ಕಿ

ಮಡುಗಟ್ಟಿ ನಿಲ್ಲಿಸಿದ ನೀರು ತಾ ಕೊಳೆಗೊಂಡು
ಚಡಪಡಿಸುತಿದೆ ಮುನ್ನಡೆವ ಹಾದಿ ಹುಡುಕಿ
ಹಸಿದ ನೆಲವನು ತಣಿಸಿ ಹಸಿರು ವಸನವನುಡಿಸಿ
ಅಡೆತಡೆಯ ಗೋಡೆಗಳು ಕೆಡಹಲ್ಕೆ ದುಡುಕಿ

ಸುತ್ತಿಟ್ಟು ಮೃಗರಾಜ ಹತ್ತಡಿಯ ಹದ್ದಿನೊಳು
ಗೊಣಗುತಿಹ – "ಇನ್ನು ಈ ಬಂಧನ ಸಾಕು"
ಕನಲಿ ಕೆಂಗಿಡಿಯುಗುಳಿ ಪಂಜರಗಳನೆತ್ತುತಿಹ–
"ಸೆರೆಯಿಂದ ನಾ ಜಿಗಿದು ಸದರೇರಬೇಕು"

ರವಿಕಿರಣಗಳ ಸೆರೆಯೊಳಡಗಿಸಿಹ ಕಾರಿರುಳೆ
ಹೊರಗೆ ಬಿಡು, ದೂರ ಸರಿ ಹರಡಲೀ ಬೆಳಕು;
ತೊಳೆದು ಹೋಗಲಿ ಸಕಲ ಮೈ ಮನದ ಕೊಳಕುಗಳು।
ಒಳ – ಹೊರಗು ತಿಳಿನೀರ ಮಳೆ ಸುರಿಯಬೇಕು

ಪ್ರಾಣ ಪಣಕಿಟ್ಟಿಹೆವು – ಸಿಡಿಲ ಮರಿಗಳು ನಾವು
ಪ್ರಳಯ ರುದ್ರರೆ ಹೌದು – ಭಾರತಿಯ ಆಣೆ.
ಇನ್ನು ನಿನಗುಳಿಗಾಲವಿಲ್ಲ – ನೀ ತೊಲಗು
ಇನ್ನೆಲ್ಲ ನೀನೇಳು ಕಡಲುಗಳ ರಾಣಿ.

ಜಾತಿಮತ ಪಂಥಗಳ ಹುಟ್ಟುರುಹಿ ಮನುಜಮತ
ಮೆರೆಸುವೆವು ಮೂರು ಬಣ್ಣದ ಗುಡಿಯ ಹಿಡಿದು,
ಸರ್ವರಿಗು ಸಮನಾವು, ಮನದುಂಬಿ ದನಿಯೆತ್ತಿ
ಹಾಡುವೆವು ಬಿಡುಗಡೆಯ ಒಕ್ಕೊರಲ ಹಾಡು.

© KTBS NOT TO BE REPUBLISHED

**ಕೌಶಲ** : ಓದುವುದು.

**ಸಾಮರ್ಥ್ಯ** : ಓದಿದ ವಿಷಯಗಳ ಬಗ್ಗೆ ಆಲೋಚಿಸಿ ತಾರ್ಕಿಕವಾಗಿ ತೀರ್ಮಾನಿಸುವುದು.

## ಕೃತಿಕಾರರ ಪರಿಚಯ



**ಮುದೇನೂರು ಸಂಗಣ್ಣ :** ಸಂಗಣ್ಣನವರು **ಬಳ್ಳಾರಿ ಜಿಲ್ಲೆಗೆ ಸೇರಿದ ಹರಪ್ಪನಹಳ್ಳಿ ತಾಲ್ಲೂಕಿನ ಚಿಗಟೇರಿಯಲ್ಲಿ** ದೊಡ್ಡವ್ಯಾಪಾರಿ ಹಾಗೂ ಜಮೀನ್ದಾರಿ ಕುಟುಂಬದಲ್ಲಿ **೧೭ ಮಾರ್ಚ್ ೧೯೨೭**ರಲ್ಲಿ ಜನಿಸಿದರು. ಬಾಲ್ಯದಿಂದಲೂ ಇವರಿಗೆ ಸಂಗೀತ, ನಾಟಕದಲ್ಲಿ ಬಹಳ ಆಸಕ್ತಿ. ಹೀಗಾಗಿ ಇವರಿಗೆ ಶಿವರಾಮಕಾರಂತ, ಕೆ.ವಿ. ಸುಬ್ಬಣ್ಣನವರ ಜೊತೆ ಗೆಳೆತನವಿತ್ತು. ವ್ಯವಸಾಯ ಕೃಷಿಕರಾಗಿದ್ದರೂ ಸಹ ಸಾಹಿತ್ಯ ಕೃಷಿಮಾಡಿದ್ದಾರೆ. ಇವರ ಪ್ರಮುಖ ಕೃತಿಗಳು ನವಿಲು ಕುಣಿದಾವ, ಬಾಳಭಿಕ್ಷುಕ, ಚಿತ್ರಪಟ ರಾಮಾಯಣ ಮೊದಲಾದ ನಾಟಕಗಳು. ಜನಪದ ಮುಕ್ತಕಗಳು, **ಆ ಅಜ್ಜ ಈ ಮೊಮ್ಮಗ, ಗೊಂದಲಿಗ ದೇವೇಂದ್ರಪ್ಪನ ಹಾಡುಗಳು, ಚಿಗಟೇರಿ ಪದಕೋಶ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. **ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ**ಗಳು ದೊರಕಿವೆ.

## ಪದಗಳ ಅರ್ಥ

ಹಂಗು – ಋಣ, ಆಶ್ರಯ; ಪಂಜರ – ಪಕ್ಷಿಗಳ ಬೋನು; ಬಾನಾಡಿ – ಪಕ್ಷಿ; ವಿಹರಿಸು – ಸಂಚರಿಸು; ಹರ್ಷ – ಹಿಗ್ಗು, ಸಂತೋಷ; ಸೊಕ್ಕಿ – ಗರ್ವ, ಜಂಭ; ಕೊಳೆಗೊಂಡು – ಮಾಲಿನ್ಯಗೊಂಡು, ತೃಪ್ತಿಗೊಂಡು; ತಣಿಸು – ತಂಪಾಗಿಸು, ತೃಪ್ತಿಗೊಳಿಸು; ವಸನ – ವಸ್ತ್ರ, ಬಟ್ಟೆ; ಹದ್ದು – ಎಲ್ಲೆ, ಗಡಿ; ಕನಲು – ಕೋಪಗೊಳ್ಳು, ಸಿಟ್ಟಾಗು; ಕೆಂಗಿಡಿ – ಉರಿಬೆಂಕಿ, ಕೆಂಪಾದ ಬೆಂಕಿ; ಸದರೇರು – ಅಂಗಳ ಸೇರು, ಬಂದಮುಕ್ತವಾಗು; ಸೆರೆ – ಬಂಧನ; ಅಡಗು – ಕಾಣದಂತಾಗು; ಕಾರಿರುಳು – ದಟ್ಟವಾದ ಕತ್ತಲೆ; ಪಣ – ಒತ್ತೆಇಡು; ತೊಲಗು – ಬಿಟ್ಟುಹೋಗು, ಹೊರಟುಹೋಗು; ಗುಡಿ – ಬಾವುಟ, ಕೇತನ; ಒಕ್ಕೊರಲು – ಒಗ್ಗಟ್ಟು, ಒಂದೇ ಧ್ವನಿಯಾಗು.

©KTBS NOT TO BE REPUBLISHED

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಪಂಜರದ ಹಕ್ಕಿ ಯಾವುದರ ಸಂಕೇತವಾಗಿದೆ?

೨. ಹಂಗಿನ ಅರಮನೆಯಲ್ಲಿ ಹಕ್ಕಿ ಹೇಗೆ ನರಳುತ್ತಿದೆ?

೩. ಮೃಗರಾಜ ಏನೆಂದು ಗೋಣಗುತ್ತಿದೆ?

೪. ಯಾವುದು ರವಿಕಿರಣಗಳನ್ನು ಸೆರೆಯೊಳಗೆ ಅಡಗಿಸಿಟ್ಟುಕೊಂಡಿದೆ?

೫. ನಮ್ಮ ಗುಡಿಯು (ಬಾವುಟ) ಎಷ್ಟು ಬಣ್ಣಗಳನ್ನು ಹೊಂದಿದೆ?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಪಂಜರದಲ್ಲಿ ನರಳುತ್ತಿರುವ ಹಕ್ಕಿ ಹರ್ಷದಲಿ ವಿಹರಿಸಲು ಏನು ಮಾಡಬೇಕು?

೨. ತಿಳಿನೀರ ಮಳೆ ಏಕೆ ಸುರಿಯಬೇಕು?

೩. ಕಡಲುಗಳ ರಾಣಿಗೆ ಇನ್ನು ಉಳಿಗಾಲವಿಲ್ಲವೇಕೆ?

೪. ಒಕ್ಕೊರಲ ಹಾಡನ್ನು ನಾವು ಹೇಗೆ ಹಾಡಬೇಕೆಂದು ಕವಿ ಬಯಸುತ್ತಾನೆ?

**ಇ. ಖಾಲಿಬಿಟ್ಟ ಜಾಗವನ್ನು ಸೂಕ್ತ ಪದಗಳಿಂದ ತುಂಬಿರಿ.**

೧. ಚಡಪಡಿಸುತಿದೆ ____________ ಹಾದಿ ಹುಡುಕಿ.

೨. ಸೆರೆಯಿಂದ ನಾ ____________ ಸದರೇರಬೇಕು.

೩. ಇನ್ನೆಲ್ಲ ನೀನೇಳು ________ ರಾಣಿ.

೪. ಹಾಡುವೆವು ಬಿಡುಗಡೆಯ __________ ಹಾಡು.

**ಚಟುವಟಿಕೆ**

**ಅ. ಸೂಚನೆಗಳನ್ನು ಗಮನಿಸಿ.**

೧. ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪ್ರಮುಖರ ಹೆಸರುಗಳನ್ನು ಪಟ್ಟಿಮಾಡಿರಿ.

೨. ನಮ್ಮ ದೇಶದ ಬಾವುಟದ ಚಿತ್ರವನ್ನು ಬರೆದು ಚಿತ್ರಕ್ಕೆ ಸೂಕ್ತ ಬಣ್ಣವನ್ನು ಹಚ್ಚಿರಿ.

೩. ಈ ಪದ್ಯದಲ್ಲಿ ೨ನೇ ಹಾಗೂ ೫ನೇ ಪದ್ಯಗಳನ್ನು ಕಂಠಪಾಠ ಮಾಡಿರಿ.

**ಆ. ಈ ಕೆಳಗಿನ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿ.**

ಸೆರೆಯಿಂದ ಉಳಿಗಾಲ ಹತ್ತಡಿಯ ಮನದುಂಬಿ

NOT TO BE REPUBLISHED @KTBS

ಇ. ಕೆಳಗಿನ ಪದಗಳಿಗೆ ತತ್ಸಮ-ತದ್ಭವ ಪದಗಳನ್ನು ಬರೆಯಿರಿ.

ಮೃಗ ರಾಜ ಬಣ್ಣ ಪ್ರಾಣ ವಸನ ಹಕ್ಕಿ

ಈ. ಕೆಳಗಿನ ವಾಕ್ಯಗಳನ್ನು ವೇಗವಾಗಿ ಓದುವುದನ್ನು ಅಭ್ಯಾಸ ಮಾಡಿ.

೧. ಗಿಡ ತಳಿರೊಡೆದೆರಡೆಲೆಯಾಯ್ತು.

೨. ಸದ್ದುಗಿದ್ದು ಮಾಡಿಗೀಡಿದರೆ ಮುದ್ದುಗಿದ್ದಾಗಿರುವ ಗುದ್ದುಗಿದ್ದುಗಳು ಬಿದ್ದುಗಿದ್ದಾವು.

೩. ಬಸಪ್ಪನ ಮನೆಯಲ್ಲಿ ಬಿಸಿಬಿಸಿ ಗಸಗಸೆ ಪಾಯಸದ ಸುವಾಸನೆ.

## ವ್ಯಾಕರಣ ಮಾಹಿತಿ

### ಸಂಸ್ಕೃತ ವ್ಯಂಜನ ಸಂಧಿಗಳು

* **ಜಶ್ತ್ವ ಸಂಧಿ**

**ಪೂರ್ವಪದ + ಉತ್ತರ ಪದ = ಸಂಧಿಪದ**

೧. ವಾಕ್+ಈಶ=ವಾಗೀಶ

೨. ವಾಕ್+ದಾನ=ವಾಗ್ದಾನ

೩. ದಿಕ್+ಅಂತ=ದಿಗಂತ

೪. ಬೃಹತ್+ಆಕಾಶ=ಬೃಹದಾಕಾಶ

೫. ಷಟ್+ಆನನ=ಷಡಾನನ

ಸಂಧಿಕಾರ್ಯ ನಡೆಯುವಾಗ ಪೂರ್ವ ಪದದ ಅಂತ್ಯದಲ್ಲಿರುವ ಕ, ಚ, ಟ, ತ, ಪ ಗಳಿಗೆ ಗ, ಜ, ಡ, ದ, ಬ ಗಳು ಆದೇಶವಾಗಿ ಬರುವುದನ್ನು **'ಜಶ್ತ್ವ ಸಂಧಿ'** ಎಂದು ಕರೆಯುತ್ತೇವೆ.

* **ಶ್ಚುತ್ವಸಂಧಿ**

**ಪೂರ್ವಪದ+ಉತ್ತರ ಪದ- ಸಂಧಿಪದ**

೧. ಮನಸ್+ಶುದ್ಧಿ=ಮನಶ್ಶುದ್ಧಿ

೨. ಯಶಸ್+ಚಂದ್ರಿಕೆ=ಯಶಶ್ಚಂದ್ರಿಕೆ

೩. ಸತ್+ಚಿತ್ರ=ಸಚ್ಚಿತ್ರ

@KTBS NOT TO BE REPUBLISHED

'ಶ್ಚು' ಎಂದರೆ ಶಕಾರ ಮತ್ತು ಚವರ್ಗಾಕ್ಷರಗಳು. ಈ ಅಕ್ಷರಗಳು ಆದೇಶವಾಗಿ ಬಂದರೆ ಶ್ಚುತ್ವ ಸಂಧಿ. ಸಂಧಿಕಾರ್ಯ ನಡೆಯುವಾಗ ಪೂರ್ವ ಪದದ ಅಂತ್ಯದಲ್ಲಿರುವ **'ಸ'**ಕಾರ ಅಥವಾ **'ತ'**ವರ್ಗದ ಅಕ್ಷರಗಳಿರುತ್ತವೆ ಉತ್ತರಪದ ಶಕಾರ ಅಥವಾ **'ಚ'**ವರ್ಗದ ಅಕ್ಷರಗಳಿಂದ ಆರಂಭವಾಗುತ್ತದೆ. **'ಸ'**ಕಾರವಿದ್ದ ಕಡೆ ಶಕಾರವೂ **'ತ'**ವರ್ಗದ ಅಕ್ಷರಗಳಿದ್ದ ಕಡೆ **'ಚ'**ವರ್ಗದ ಅಕ್ಷರಗಳೂ ಆದೇಶವಾಗಿ ಬರುವುದನ್ನು **'ಶ್ಚುತ್ವ ಸಂಧಿ'** ಎಂದು ಕರೆಯುತ್ತೇವೆ.

* **ಅನುನಾಸಿಕಸಂಧಿ**

**ಪೂರ್ವಪದ + ಉತ್ತರಪದ = ಸಂಧಿಪದ**

೧. ವಾಕ್+ಮಯ=ವಾಙ್ಮಯ

೨. ಷಟ್+ಮುಖ=ಷಣ್ಮುಖ

೩. ಸತ್+ಮಾನ=ಸನ್ಮಾನ

ಙ, ಞ, ಣ, ನ, ಮ ಇವು ಅನುನಾಸಿಕ ಅಕ್ಷರಗಳು. ಈ ಅಕ್ಷರಗಳು ಆದೇಶವಾಗಿ ಬಂದರೆ ಅನುನಾಸಿಕ ಸಂಧಿ. ಸಂಧಿಕಾರ್ಯ ನಡೆಯುವಾಗ ಪೂರ್ವ ಪದದ ಅಂತ್ಯದಲ್ಲಿರುವ ಕ್, ಚ್, ಟ್, ತ್, ಪ್ ಅಕ್ಷರಗಳಿರುತ್ತವೆ ಉತ್ತರಪದ ಅನುನಾಸಿಕ ಅಕ್ಷರಗಳಿಂದ ಆರಂಭವಾಗುತ್ತದೆ. ವರ್ಗದ ಕ, ಚ, ಟ, ತ, ಪ ವ್ಯಂಜನಗಳಿಗೆ ಅದೇ ವರ್ಗದ ಅನುನಾಸಿಕ ಅಕ್ಷರಗಳೂ ಆದೇಶವಾಗಿ ಬರುವುದನ್ನು **'ಅನುನಾಸಿಕ ಸಂಧಿ'** ಎಂದು ಕರೆಯುತ್ತೇವೆ.

@KTBS NOT TO BE REPUBLISHED

**ಚೆನ್ನುಡಿ**

**'ಬಂದ ಸುಖವ ಬಿಡಬೇಡ, ಬಾರದುದ ಬೇಕೆಂದು ಬಯಸಬೇಡ'**

–ರತ್ನಾಕರವರ್ಣಿ ('ಭರತೇಶ ವೈಭವ' ಕೃತಿಯ ಕವಿಯ ಕಾಲ ಸುಮಾರು ೧೫೦೦)

# ೭. ತಿರುಕನ ಕನಸು

– ಮುಪ್ಪಿನ ಷಡಕ್ಷರಿ

**ಪ್ರವೇಶ :** ಪ್ರತಿಯೊಬ್ಬ ಮಾನವರು ಕನಸುಗಾರರೆ. ಕನಸನ್ನು ಕಾಣದ ಮನುಷ್ಯರೇ ವಿರಳ. ಪುಟ್ಟ ಮಕ್ಕಳಿಂದ ಹಿಡಿದು ದೊಡ್ಡವರವರೆವಿಗೂ ಒಂದಲ್ಲ ಒಂದು ಕನಸಿನಿಂದ ದುಃಖ ದುಮ್ಮಾನಗಳಿಗೆ ಒಳಗಾಗುವವರೇ. ಕನಸುಗಳು ಭವಿಷ್ಯದ ಸಂಕೇತಗಳಾಗಿದ್ದು ಜಡಮನಸ್ಸಿಗೆ ನವ ಚೈತನ್ಯವನ್ನು ತುಂಬಿ ಭವಿಷ್ಯದ ಬದುಕು – ಬವಣೆಗಳಿಗೆ ನಮ್ಮನ್ನು ಅಣಿಗೊಳಿಸುತ್ತವೆ. ತಿರುಕನ ಕನಸು, ಗೋವಿನಹಾಡು, ನಾಗರಹಾವೆ ಹಾವೊಳು ಹೂವೆ–ಮೊದಲಾದ ಹಾಡುಗಳು ಪ್ರತಿಯೊಬ್ಬ ಕನ್ನಡಿಗರ ಮನೆಯ ಜೋಗುಳದ ಹಾಡುಗಳಾಗಿ ಜನರ ಮೆಚ್ಚುಗೆಗೆ ಪಾತ್ರವಾಗಿವೆ.

ಹೀಗೆ ತಿರುಕನೊಬ್ಬ ಕನಸಿನಲ್ಲಿ ರಾಜ್ಯವನ್ನಾಳುವ, ರಾಜ್ಯ ವೈಭೋಗಗಳಲ್ಲಿ ಮೈಮರೆತಿರುವಾಗ ಶತ್ರು ಸೈನ್ಯ ಮುತ್ತಿದಂತಾಗಿ ವಾಸ್ತವತೆಗೆ ಮರಳುವ ಸನ್ನಿವೇಶಗಳು ಈ ಕವನದಲ್ಲಿ ಓದುಗರ ಮನಸ್ಸಿನಲ್ಲಿ ಸದಾ ನಿಲ್ಲುವಂತಾಗಿದೆ. ಈ ಕವನವು ಭೋಗ ಷಟ್ಪದಿಯಲ್ಲಿದ್ದು, ಸರಳ ಸುಂದರ ಭಾಷೆಯಲ್ಲಿ ತಿರುಕನ ಕನಸನ್ನು ವರ್ಣಿಸುವ ರೀತಿ, ಕನಸು ಬಿಚ್ಚಿಕೊಳ್ಳುವ ಪರಿ ಅಮೋಘವಾಗಿದ್ದು ಉತ್ತಮ ಸಂದೇಶ ನೀಡುವ ಕಥನಕವನ ಇದಾಗಿದೆ.

@KTBS
NOT TO BE REPUBLISHED

ತಿರುಕನೊರ್ವನೂರ ಮುಂದೆ
ಮುರುಕುಧರ್ಮ ಶಾಲೆಯಲ್ಲಿ
ಒರಗಿರುತ್ತಲೊಂದು ಕನಸ ಕಂಡನೆಂತೆನೆ
ಪುರದ ರಾಜ ಸತ್ತನವಗೆ
ವರಕುಮಾರರಿಲ್ಲದಿರಲು
ಕರಿಯ ಕೈಗೆ ಕುಸುಮಮಾಲೆಯಿತ್ತು ಪುರದೊಳು ॥ ೧ ॥

ನಡೆದು ಯಾರ ಕೊರಳಿನಲ್ಲಿ
ತೊಡರಿಸುವುದೊ ಅವರ ಪಟ್ಟ
ಕೊಡೆಯರನ್ನು ಮಾಳ್ಪೆವೆಂದು ಬಿಟ್ಟರಲ್ಲಿಯೆ
ಒಡನೆ ತನ್ನ ಕೊರಳಿನಲ್ಲಿ
ತೊಡರಿಸಲ್ಕೆ ಕಂಡು ತಿರುಕ
ಪೊಡವಿಯಾಣ್ಮನಾದೆನೆಂದು ಹಿಗ್ಗುತಿರ್ದನು ॥ ೨ ॥



ಪಟ್ಟವನ್ನು ಕಟ್ಟಿ ನೃಪರು
ಕೊಟ್ಟರವಗೆ ಕನ್ಯೆಯರನು
ನೆಟ್ಟನವನು ರಾಜ್ಯವಾಳ್ದ ಕನಸಿನಲ್ಲಿಯೇ
ಭಟ್ಟಿನಿಗಳ ಕೂಡಿ ನಲ್ಲ
ನಿಷ್ಟಸುಖದೊಳಿರಲವಂಗೆ
ಹುಟ್ಟಿ ಹೆಣ್ಣು ಗಂಡು ಮಕ್ಕಳಾದುವಾಗಲೇ ॥ ೩ ॥

ಓಲಗದಲಿರುತ್ತ ತೊಡೆಯ
ಮೇಲೆ ಮಕ್ಕಳಾಡುತಿರಲು
ಲೀಲೆಯಿಂದ ಚಾತುರಂಗ ಬಲವ ನೋಡುತ
ಲೋಲನಾಗಿ ನುಡಿದನಿನಿತು
ಕೇಳು ಮಂತ್ರಿ ಸುತರುಗಳಿಗೆ
ಬಾಲೆಯರನು ನೋಡಿ ಮದುವೆ ಮಾಡಬೇಕೆಲೆ ॥ ೪ ॥

ನೋಡಿ ಬನ್ನಿರೆನಲು ಜೀಯ
ನೋಡಿ ಬಂದೆವೆನಲು ಬೇಗ ಮಾಡು
ಮದುವೆ ಮಂಟಪದೊಳು ಸಕಲ ಕಾರ್ಯವ
ಗಾಢವಾಗೆ ಸಂಭ್ರಮಗಳು
ಮಾಡುತಿದ್ದ ಮದುವೆಗಳನು
ಕೂಡಿದಖಿಳ ರಾಯರೆಲ್ಲ ಮೆಚ್ಚುವಂದದಿ. ॥ ೫ ॥

@KTBS NOT TO BE REPUBLISHED

ಧನದ ಮದವು ರಾಜ್ಯ ಮದವು
ತನುಜ ಮದವು ಯುವತಿ ಮದವು
ಜನಿತಮಾಗಿ ಕನಸಿನಲ್ಲಿ ಹಿಗ್ಗುತಿರ್ದನು
ಅನಿತರೊಳಗೆ ನೃಪರ ದಂಡು
ಮನೆಯ ಮುತ್ತಿದಂತೆಯಾಗೆ
ಕನಸ ಕಾಣುತಿರ್ದು ಹೆದರಿ ಕಣ್ಣ ತೆರೆದನು. ॥ ೬ ॥

## ಮರು ಓದು

೧. ತಿರುಕನು ಒರ್ವನು ಊರ ಮುಂದೆ ಮುರುಕು ಧರ್ಮ ಶಾಲೆಯಲ್ಲಿ ಒರಗಿರುತ್ತಲು ಒಂದು ಕನಸನ್ನು ಕಂಡನು ಎಂತು ಎನೆ. ಪುರದ ರಾಜ ಸತ್ತನು ಅವಗೆ ವರಕುಮಾರರು ಇಲ್ಲದೆ ಇರಲು ಕರಿಯ ಕೈಗೆ ಕುಸುಮಮಾಲೆಯ ಇತ್ತು ಪುರದ ಒಳು.

೨. ನಡೆದು ಯಾರ ಕೊರಳಿನಲ್ಲಿ ತೊಡರಿಸುವದೊ ಅವರ ಪಟ್ಟಕೆ ಒಡೆಯರನ್ನ ಮಾಳ್ಪೆವು ಎಂದು ಬಿಟ್ಟರು ಅಲ್ಲಿಯೆ. ಒಡನೆ ತನ್ನ ಕೊರಳಿನಲ್ಲಿ ತೊಡರಿಸಲ್ಕೆ ಕಂಡು ತಿರುಕ ಪೊಡವಿ, ಅಣ್ಣನು ಆದೆನು ಎಂದು ಹಿಗ್ಗುತ ಇರ್ದನು.

೩. ಪಟ್ಟವನ್ನು ಕಟ್ಟಿ ನೃಪರು ಕೊಟ್ಟರು ಅವಗೆ ಕನ್ಯೆಯರನು ನೆಟ್ಟನೆ ಅವನು ರಾಜ್ಯವ ಆಳ್ದ ಕನಸಿನಲ್ಲಿಯೇ. ಭಟ್ಟಿನಿಗಳ ಕೂಡಿ ನಲ್ಲನು ಇಷ್ಟ ಸುಖದೊಳು ಇರಲು ಅವಂಗೆ ಹುಟ್ಟಿ ಹೆಣ್ಣು ಗಂಡು ಮಕ್ಕಳು ಆದುವು ಆಗಲೇ.

೪. ಓಲಗದಲಿ ಇರುತ್ತ ತೊಡೆಯ ಮೇಲೆ ಮಕ್ಕಳು ಆಡುತ ಇರಲು ಲೀಲೆಯಿಂದ ಚಾತುರಂಗ ಬಲವ ನೋಡುತ, ಲೋಲನಾಗಿ ನುಡಿದನು ಇನಿತು ಕೇಳು ಮಂತ್ರಿ, ಸುತರುಗಳಿಗೆ ಬಾಲೆಯರನು ನೋಡಿ ಮದುವೆ ಮಾಡಬೇಕಲೆ.

೫. ನೋಡಿ ಬನ್ನಿರಿ ಎನಲು ಜೀಯ ನೋಡಿ ಬಂದೆವು ಎನಲು ಬೇಗ ಮಾಡು ಮದುವೆ ಮಂಟಪದ ಒಳು ಸಕಲ ಕಾರ್ಯವ. ಗಾಢವಾಗೆ ಸಂಭ್ರಮಗಳು ಮಾಡುತ ಇದ್ದ ಮದುವೆಗಳನು ಕೂಡಿದ ಅಖಿಳ ರಾಯರೆಲ್ಲ ಮೆಚ್ಚುವ ಅಂದದಿ.

೬. ಧನದ ಮದವು, ರಾಜ್ಯ ಮದವು, ತನುಜ ಮದವು, ಯುವತಿ ಮದವು ಜನಿತಮಾಗಿ ಕನಸಿನಲ್ಲಿ ಹಿಗ್ಗುತ ಇರ್ದನು. ಅನಿತರ ಒಳಗೆ ನೃಪರ ದಂಡು ಮನೆಯ ಮುತ್ತಿದಂತೆ ಆಗಿ ಕನಸ ಕಾಣುತ ಇರ್ದು ಹೆದರಿ ಕಣ್ಣ ತೆರದನು.

© KTBS NOT TO BE REPUBLISHED

**ಕೌಶಲ** : ಆಲಿಸುವುದು

**ಸಾಮರ್ಥ್ಯ** : ವಿಷಯವನ್ನು ಆಲಿಸಿದ ಬಳಿಕ ಏಕೆ? ಹೇಗೆ? ಎಂಬ ಪ್ರಶ್ನೆಗಳಿಗೆ ಕಾರಣ ಸಹಿತ ವಿಶ್ಲೇಷಿಸುವುದು.

## ಕೃತಿಕಾರರ ಪರಿಚಯ

**ಮುಪ್ಪಿನ ಷಡಕ್ಷರಿ :** ಇವರು ಸಾ.ಶ. ೧೫೦೦ರ ಸುಮಾರಿಗೆ ಜೀವಿಸಿದ್ದರು. ಕಾವೇರಿ ತೀರದ ಶಂಭುಲಿಂಗ ಬೆಟ್ಟದಲ್ಲಿ ಇವರು ತಪಸ್ಸು ಮಾಡಿದ್ದಾಗಿ ಹೇಳಲಾಗುತ್ತಿದೆ. ಇವರು **ಕೊಳ್ಳೆಗಾಲ**ದವರು. ಸ್ವರವಚನಗಳ ಸಂಗ್ರಹವಾದ **ಸುಭೋದ ಸಾರ** ಇವರ ಕೃತಿ. ಇವರು ನಿಜಗುಣ ಶಿವಯೋಗಿಗಳ ಸಮಕಾಲೀನರೆಂದು ವಿದ್ವಜ್ಜನರ ಅಭಿಪ್ರಾಯ.

© KTBS NOT TO BE REPUBLISHED

## ಪದಗಳ ಅರ್ಥ

೧. ತಿರುಕ – ಭಿಕ್ಷುಕ; ಮುರುಕು – ಪಾಳುಬಿದ್ದ, ಮುರಿದು ಬಿದ್ದ; ಪುರ – ಪಟ್ಟಣ, ನಗರ; ಕರಿ – ಆನೆ; ಕುಸುಮಮಾಲೆ – ಹೂವಿನಮಾಲೆ. ಧರ್ಮಶಾಲೆ – ಅನ್ನಛತ್ರ.

೨. ತೊಡರಿಸು – ಧರಿಸು, ಹಾಕು; ಪಟ್ಟ – ಸಿಂಹಾಸನ; ಒಡೆಯ – ರಾಜ, ದೊರೆ; ಮಾಳಪೆವು – ಮಾಡುವೆವು; ಒಡನೆ – ತಕ್ಷಣ; ಪೊಡವಿ – ರಾಜ್ಯ; ಅಣ್ಮ – ಒಡೆಯ, ರಾಜ. ಹಿಗ್ಗು – ಸಂತೋಷಪಡು, ಹರ್ಷಿಸು;

೩. ನೃಪ–ರಾಜ, ದೊರೆ ; ಭಟ್ಟಿನಿಗಳು – ಹೆಂಡತಿಯರು. ಪಟ್ಟಮಹಿಷಿಯಲ್ಲದ ರಾಣಿಯರು. ; ನಲ್ಲ – ಪ್ರಿಯತಮ ;

೪. ಓಲಗ – ರಾಜಸಭೆ ; ಲೀಲೆ – ವಿನೋದ, ವಿಲಾಸ ; ಚಾತುರಂಗ – ಸೈನ್ಯದ ನಾಲ್ಕು ಅಂಗಗಳು (ಆನೆ, ಕುದುರೆ, ರಥ, ಕಾಲಾಳಿನ ಬಲ) ಲೋಲ – ಉತ್ಸುಕ, ಸಂತೋಷ; ಸುತ – ಮಗ ;

೫. ಜೀಯ – ಸ್ವಾಮಿ, ಒಡೆಯ ; ಸಕಲ – ಎಲ್ಲಾ ; ಸಂಭ್ರಮ – ಹರ್ಷ, ಉಲ್ಲಾಸ ; ಅಖಿಲ – ಸಕಲ, ಎಲ್ಲಾ ; ರಾಯ – ರಾಜ, ಅರಸ ; ಮೆಚ್ಚು – ಒಪ್ಪು, ಮೆಚ್ಚಿಕೊಳ್ಳು ; ಅಂದದಿ – ರೀತಿಯಲ್ಲಿ ;

೬. ಧನ – ಹಣ, ಸಂಪತ್ತು ; ಮದ – ಗರ್ವ, ಅಹಂಕಾರ ; ತನುಜ – ಮಗ ; ಜನಿತ – ಹುಟ್ಟು, ಜನ್ಮತಾಳು ; ಅನಿತರೊಳಗೆ – ಅಷ್ಟರಲ್ಲಿ ; ದಂಡು –ಸೈನ್ಯ ; ಮುತ್ತು – ಆವರಿಸು, ಸುತ್ತುವರಿ ;

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ತಿರುಕನು ಎಲ್ಲಿ ಕನಸನ್ನು ಕಂಡನು ?

೨. ಆನೆಯು ಯಾರ ಕೊರಳಿಗೆ ಮಾಲೆಯನ್ನು ಹಾಕಿತು ?

೩. ತಿರುಕನಿಗೆ ಪಟ್ಟವನ್ನು ಕಟ್ಟಿದವರು ಯಾರು ?

೪. ರಾಜ ಲೋಲನಾಗಿ ಮಂತ್ರಿಗೆ ಏನೆಂದು ನುಡಿದನು ?

೫. 'ತಿರುಕನ ಕನಸು' ಈ ಪದ್ಯವನ್ನು ಬರೆದ ಕವಿ ಯಾರು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಕರಿಯ ಕೈಗೆ ಕುಸುಮ ಮಾಲೆಯನ್ನು ಕೊಡಲು ಕಾರಣವೇನು?

೨. ತಿರುಕ ಪೊಡವಿಯಾಣ್ಮನಾದುದು ಹೇಗೆ?

೩. ಕನಸು ಕಾಣುತ್ತಿದ್ದ ತಿರುಕನು ಹೆದರಿ ಏಕೆ ಕಣ್ಣು ತೆರೆದನು?

**ಇ. ಐದಾರು ವಾಕ್ಯಗಳಲ್ಲಿ ಉತ್ತರಿಸಿ.**

೧. ತಿರುಕನು ರಾಜನಾದದ್ದು ಹೇಗೆ ?

೨. ತಿರುಕನು ಕನಸಿನಲ್ಲಿ ರಾಜ್ಯವನ್ನು ಆಳಿದ ರೀತಿಯನ್ನು ವಿವರಿಸಿ.

**ಈ. ಈ ಪದ್ಯಭಾಗವನ್ನು ಪೂರ್ಣಗೊಳಿಸಿ.**

ಧನದ ಮದವು-----------------

---------------------------

---------------------------

---------------------------

---------------------------

----------------- ಕಣ್ಣ ತೆರೆದನು.

@KTBS NOT TO BE REPUBLISHED

**ಊ. ಮಾದರಿಯಂತೆ ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆಯಿರಿ.**

**ಮಾದರಿ : ತಿರುಕನೊರ್ವನೂರಮುಂದೆ = ತಿರುಕನು + ಒರ್ವನು + ಊರ + ಮುಂದೆ**

೧. ಒರಗಿರುತ್ತಲೊಂದು

೨. ವರಕುಮಾರರಿಲ್ಲದಿರಲು

೩. ಪೊಡವಿಯಾಣ್ಮನಾದನೆಂದು.

೪. ನಿಷ್ಟಸುಖದೊಳಿರಲವಂಗೆ

## ವ್ಯಾಕರಣ ಮಾಹಿತಿ

### ಪ್ರಬಂಧ ರಚನೆ

ಪ್ರಬಂಧವು ಗದ್ಯ ಸಾಹಿತ್ಯದ ಒಂದು ಪ್ರಕಾರವಾಗಿದೆ. ಪ್ರಬಂಧಗಳನ್ನು ಓದುವುದರಿಂದ ಹಾಗೂ ಬರೆಯುವುದರಿಂದ ವಿಷಯ ಮತ್ತು ಭಾಷೆಗಳೆರಡರ ಜ್ಞಾನ ಏಕಕಾಲದಲ್ಲಿ ಲಭಿಸುತ್ತದೆ. ಪ್ರಬಂಧಸಾಹಿತ್ಯವು ಸರಳವೂ ಉಪಯುಕ್ತವೂ ಆಗಿದ್ದು, ಸಮಕಾಲೀನ ಜಗತ್ತನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ.

**ಪ್ರಬಂಧದ ಅರ್ಥ :**

ತರ್ಕಬದ್ಧ ವಾಕ್ಯ ಹಾಗೂ ವಿಚಾರಗಳಿಂದ ಸುಸಂಬದ್ಧವಾಗಿ ಬರೆಯಲ್ಪಟ್ಟ ಬಂಧವೇ ಪ್ರಬಂಧ. ಅಂದರೆ ವಿಚಾರಗಳನ್ನು ಕ್ರಮಬದ್ಧವಾಗಿ ಅರ್ಥಪೂರ್ಣವಾಗಿ ಬರೆಯುವುದನ್ನು ಪ್ರಬಂಧ ಎನ್ನುತ್ತೇವೆ. ಒಂದು ನಿರ್ದಿಷ್ಟ ವಿಷಯವನ್ನು ಕುರಿತು ಮಾಹಿತಿಯನ್ನು ಸಂಗ್ರಹಿಸಿ ತನ್ನ ಅನುಭವ, ಕಲ್ಪನೆ ಹಾಗು ವಿಚಾರಗಳನ್ನು ಬೆರೆಸಿ ಸುಸಂಬದ್ಧ ರೀತಿಯ ಪ್ರೌಢ ಬರೆವಣಿಗೆಯನ್ನು ಪ್ರಬಂಧ ಎನ್ನಬಹುದು.

**ಪ್ರಬಂಧ ರಚನೆಯ ಹಂತಗಳು :**

**೧. ವಿಷಯದ ಆಯ್ಕೆ :**

ಪ್ರಬಂಧ ರಚಿಸಲು ಒಂದು ವಸ್ತು, ವಿಷಯ ಇರಲೇಬೇಕು. ನಮ್ಮ ಆಸಕ್ತಿ ಹಾಗು ಅನುಭವಗಳಿಗೆ ನಿಲುಕುವ ವಸ್ತು ವಿಚಾರಗಳನ್ನು ಆಯ್ಕೆಮಾಡಿಕೊಂಡು ಪ್ರಬಂಧವನ್ನು ಬರೆಯಲು ಮುಂದಾಗಬೇಕು. ಪ್ರಬಂಧಕ್ಕೆ ವಿಷಯ ಇಂತಹದ್ದೇ ಇರಬೇಕು ಎಂದೇನಿಲ್ಲ. ವ್ಯಕ್ತಿ, ವಸ್ತು, ಪ್ರಾಣಿ, ಪಕ್ಷಿ, ನೆಲ, ಜಲ, ಭಾವನೆಗಳು, ಮೌಲ್ಯಗಳು, ಪ್ರಚಲಿತ ಘಟನೆಗಳು, ಸಮಸ್ಯೆಗಳು, ಇತಿಹಾಸ, ವಿಜ್ಞಾನ, ಸಮಾಜ ಯಾವುದಾದರೂ ಆಗಿರಬಹುದು.

**೨. ಮಾಹಿತಿಯ ಸಂಗ್ರಹಣೆ :**

ಪ್ರಬಂಧ ಬರೆಯಲು ವಿಷಯ ಆಯ್ಕೆ ಮಾಡಿಕೊಂಡನಂತರ ವಿಷಯಕ್ಕೆ ಪೂರಕವಾದ ಮಾಹಿತಿಗಳನ್ನು ಪುಸ್ತಕಗಳು, ಪತ್ರಿಕೆಗಳು, ಅಂತರ್ಜಾಲ, ಸಂದರ್ಶನ ಇಲ್ಲವೆ ಖುದ್ದು ಸ್ಥಳಗಳಿಗೆ ಭೇಟಿ ನೀಡಿ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಬೇಕು. ಇದರಿಂದ ನಮ್ಮ ವಿಚಾರಗಳಿಗೆ ಇನ್ನೂ ಹೆಚ್ಚಿನ ಪುಷ್ಟಿ ಸಿಕ್ಕಂತಾಗುತ್ತದೆ.

**೩. ವಿಷಯವನ್ನು ಕ್ರಮ ಬದ್ಧವಾಗಿ ಜೋಡಿಸುವುದು :**

ಸಂಗ್ರಹಿಸಿದ ಮಾಹಿತಿಯನ್ನು ಕ್ರಮಬದ್ಧವಾಗಿ ಜೋಡಿಸಿಕೊಳ್ಳಬೇಕು. ಅಂದರೆ ದೊರೆತ ಅಂಕಿ ಅಂಶಗಳ ನಡುವೆ ಸಂಬಂಧವಿರುವಂತೆ ನೋಡಿಕೊಳ್ಳಬೇಕು.

೪. **ನಿರ್ದಿಷ್ಟ ಚೌಕಟ್ಟಿನಲ್ಲಿ ವಿಷಯದ ಮಂಡನೆ :**

ಪ್ರಬಂಧವನ್ನು ಮಾಹಿತಿಗಳು ಲಭ್ಯವಾದ ನಂತರ ನಮ್ಮದೇ ಆದ ಶೈಲಿಯಲ್ಲಿ ವಿಚಾರಗಳನ್ನು ನಿರೂಪಿಸಬೇಕು. ಭಾಷೆ ಮತ್ತು ವಿಷಯಗಳ ಸಮಾಗಮ ಆಗಬೇಕು. ಬರೆಯುವ ಸಂದರ್ಭದಲ್ಲಿ ಗಾದೆ ಮಾತುಗಳನ್ನು, ನುಡಿಗಟ್ಟುಗಳನ್ನು, ಹೇಳಿಕೆಗಳನ್ನು ಹಾಗು ಚಿಕ್ಕ ಕಥೆ ಹಾಗು ಘಟನೆಗಳನ್ನು ಸಂದರ್ಭಾನುಸಾರ ಬಳಸಿಕೊಳ್ಳಬೇಕು. ಇಡೀ ಪ್ರಬಂಧ ತಮ್ಮ ಸ್ವಂತ ವಿಚಾರಾನುಭವಗಳನ್ನೆ ಒಳಗೊಂಡಿರಬೇಕು. ಯಾರೋ ಬರೆದ ಪ್ರಬಂಧವನ್ನು ಕಂಠಪಾಠಮಾಡಿ ಬರೆಯುವುದು ಪ್ರಬಂಧ ಅನ್ನಿಸುವುದಿಲ್ಲ. ಪರೀಕ್ಷೆಗೂ ಮುನ್ನ ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸಿ ಪರೀಕ್ಷೆಯಲ್ಲಿ ಬರೆಯುವ ಸಿದ್ಧತೆ ನಡೆಸಿರಬೇಕು. ಪ್ರಬಂಧ ಬರೆಯುವಾಗ ಆರಂಭ, ವಿಷಯ ಬೆಳವಣಿಗೆ ಹಾಗೂ ಮುಕ್ತಾಯಗಳು ಇರಬೇಕು.

೫. **ಪರಿಶೀಲನೆ :**

ಪ್ರಬಂಧವನ್ನು ಬರೆದ ನಂತರ ಮತ್ತೊಮ್ಮೆ ಅದನ್ನು ಪರಿಶೀಲಿಸಬೇಕು. ಭಾಷೆ ಹಾಗು ವಿಷಯದ ದೋಷಗಳು ಇದ್ದಲ್ಲಿ ಸರಿಪಡಿಸಿ ಬರೆಯಬೇಕು. ಪರಿಶೀಲನೆಯನ್ನು ನಮ್ಮ ಗೆಳೆಯರು ಹಾಗು ನಮಗಿಂತ ಹೆಚ್ಚು ಬಲ್ಲವರಿಂದ ಮಾಡಿಸಬೇಕು. ಇದರಿಂದ ಪ್ರಬಂಧವು ಇನ್ನೂ ಹೆಚ್ಚು ಉತ್ತಮವಾಗಿ ಮೂಡಿಬರುತ್ತದೆ.

೬. **ಪ್ರಕಟಣೆ :**

ಪ್ರಬಂಧವನ್ನು ರಚಿಸಿದ ನಂತರ ಅದನ್ನು ನಿಮ್ಮ ಶಾಲಾ ಭಿತ್ತಿಪತ್ರ, ಶಾಲಾ ಸಂಚಿಕೆ ಇಲ್ಲವೆ ಸ್ಥಳೀಯ ಪತ್ರಿಕೆಗಳಿಗೆ ಪ್ರಕಟಿಸಲು ಸಂಬಂಧಿಸಿದವರಿಗೆ ನೀಡಿ ಮನವಿ ಮಾಡಿಕೊಳ್ಳಬೇಕು. ಇದರಿಂದ ನಿಮ್ಮ ವಿಚಾರಗಳು ಇತರರಿಗೆ ತಿಳಿಯುವುದಲ್ಲದೆ ನಿಮ್ಮ ಗೌರವವೂ ಹೆಚ್ಚಾಗುತ್ತದೆ.

ಸಾಮಾನ್ಯವಾಗಿ ಪರೀಕ್ಷೆಯಲ್ಲಿ ಎರಡು ಮೂರು ವಿಷಯಗಳನ್ನು ನೀಡಿ ಯಾವುದಾದರೊಂದು ವಿಷಯದ ಮೇಲೆ ಪ್ರಬಂಧ ಬರೆಯಲು ಸೂಚಿಸಲಾಗಿರುತ್ತದೆ. ನೀವು ನಿಮ್ಮ ಅನುಭವದ ನೆಲೆಯಲ್ಲಿ ಬರೆಯಬಹುದಾದ ವಿಷಯವೊಂದನ್ನು ಆಯ್ಕೆಮಾಡಿಕೊಂಡು ನಿಮ್ಮ ವಿಚಾರಗಳನ್ನು ಸುಸಂಬದ್ಧವಾಗಿ, ಅರ್ಥಪೂರ್ಣವಾಗಿ ತಪ್ಪಿಲ್ಲದಂತೆ ಬರೆಯಬೇಕು.

**ಪ್ರಬಂಧ ಬರೆಯುವ ಹಂತಗಳನ್ನು ಅನುಸರಿಸಿ ಈ ವಿಷಯಗಳನ್ನು ಕುರಿತು ಬರೆಯಿರಿ.**

| | | |
|---|---|---|
| ೧. ಹವ್ಯಾಸಗಳು | ೨. ಕ್ರೀಡೆಗಳು | ೩. ರಾಷ್ಟ್ರೀಯ ಹಬ್ಬಗಳು |
| ೪. ಪರಿಸರ ಮಾಲಿನ್ಯ | ೫. ಪುಸ್ತಕಗಳು | ೬. ಜನಸಂಖ್ಯೆ |
| ೭. ಗ್ರಾಮೀಣ ಬದುಕು | ೮. ಸ್ತ್ರೀ ಶಿಕ್ಷಣ | |

**ಚೆನ್ನುಡಿ**

**ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು**
**ಹೊಸಯುಕ್ತಿ ಹಳೆತತ್ತ್ವದೊಡಗೂಡೆ ಧರ್ಮ**
**ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ**
**ಜಸವು ಜನಜೀವನಕೆ – ಮಂಕುತಿಮ್ಮ** **– ಡಿ.ವಿ.ಜಿ**

NOT TO BE REPUBLISHED © KTBS

# ೮. ಅಭಿಮನ್ಯು ಪರಾಕ್ರಮ

U8U8S9

– ಕುಮಾರವ್ಯಾಸ


**ಪ್ರವೇಶ:** ನಿಶಾಂತನು ತರಗತಿಯಲ್ಲಿ ಅಧ್ಯಾಪಕರನ್ನು ಕೇಳಿದ "ನಮ್ಮ ಅಮ್ಮನಿಗೆ ಇವತ್ತು ನಾನು ಮನಸ್ಸು ಮಾಡಿದ್ರೆ ೧೦೦ ಕೆ.ಜಿ. ಎತ್ತುತ್ತೇನೆ. ಅಂದೆ, ಅದಕ್ಕೆ ಅವರು ನಿಂದು ಉತ್ತರನ ಪೌರುಷ ಅಂದರು; ಹಾಗೆಂದರೇನು? ಎಂದು ಕೇಳಿದ. ಅಧ್ಯಾಪಕರು"ಉತ್ತರನ ಪೌರುಷ ಒಲೆಮುಂದೆ, ನಿನ್ನ ಪೌರುಷ ಎಲೆಮುಂದೆ" ಅಂತ ಗಾದೆ ಇದೆ. ಮಹಾಭಾರತದಲ್ಲಿ ಉತ್ತರಕುಮಾರ ಅಂತ ಒಬ್ಬ ಇದ್ದ . ತನ್ನ ರಾಜ್ಯದ ಹಸುಗಳನ್ನು ವೈರಿ ಸೈನಿಕರು ಮುತ್ತಿದ್ದಾರೆ ಎಂದು ತಿಳಿದಾಗ ಮನೆ ಒಳಗೆ ಕುಳಿತು, ನಾನು ಯುದ್ಧ ಮಾಡಿದರೆ ಹೇಗೆ ಗೆಲ್ಲುತ್ತೇನೆ ಎಂದೆಲ್ಲ ಜಂಭ ಕೊಚ್ಚಿಕೊಂಡ, ಆದರೆ ಯುದ್ಧರಂಗಕ್ಕೆ ಬಂದಾಗ ಅಪಾರ ಸೈನ್ಯ ನೋಡಿ ಹೆದರಿ ಓಡಿದ. ಅದಕ್ಕೆ ಯಾರಾದ್ರೂ ಕೊಚ್ಚಿಕೊಂಡರೆ ಉತ್ತರನ ಪೌರುಷ ಎನ್ನುತ್ತಾರೆ" ಎಂದು ಹೇಳಿದರು. ಅದಕ್ಕೆ ಸಿದ್ದಿಕ್ "ಟೀಚರ್, ಮಹಾಭಾರತದಲ್ಲಿ ಸಾಹಸಿ ಯುವಕರು ಇರಲಿಲ್ವೇ?"ಎಂದು ಕೇಳಿದ. ಟೀಚರ್" ಯಾಕಿರಲಿಲ್ಲ, ಅಭಿಮನ್ಯು ಕುಮಾರ ಅಂತ ಇದ್ದ. ಅವನು ಸುಭದ್ರೆ ಮತ್ತು ಅರ್ಜುನರ ಮಗ. ಮಹಾ ಸಾಹಸಿ. ಮಹಾಭಾರತ ಯುದ್ಧದಲ್ಲಿ ದ್ರೋಣರು ಪದ್ಮವ್ಯೂಹ ರಚಿಸಿದಾಗ ಅದನ್ನು ಒಡೆಯಲು ತಾನೇ ಹೋಗುತ್ತೇನೆ ಅಂದ, ಹಾಗೆಯೇ ಹೋದ. ಆದರೆ ದುರದೃಷ್ಟ ಅವನಿಗೆ ಪೂರ್ಣವಾಗಿ ಪದ್ಮವ್ಯೂಹ ಒಡೆಯಲು ಆಗಲಿಲ್ಲ. ಆದರೆ ಅವನ ಧೈರ್ಯ, ಸಾಹಸ ಮೆಚ್ಚುವಂಥದ್ದು. ಹೇಳಿದ್ದನ್ನು ಸಾಧಿಸಲು ಅವನು ಮಾಡಿದ ಪ್ರಯತ್ನವನ್ನು ಮೆಚ್ಚಲೇಬೇಕು" ಅಂದರು. ಸಿಂಧು "ಅದನ್ನು ಸ್ವಲ್ಪ ವಿವರಿಸಿ ಟೀಚರ್" ಅಂದಳು. ಟೀಚರ್ ಎಲ್ಲ ವಿವರಿಸಲು ಸಮಯ ಕಡಿಮೆಯಿದೆ. ಕುಮಾರವ್ಯಾಸ ಎಂಬ ಕವಿ ಕನ್ನಡದಲ್ಲಿ ಮಹಾಭಾರತವನ್ನು 'ಕರ್ಣಾಟ ಭಾರತ ಕಥಾಮಂಜರಿ'ಎಂಬ ಹೆಸರಿನಲ್ಲಿ ರಚಿಸಿದ್ದಾನೆ. ಅದರಲ್ಲಿ ಅಭಿಮನ್ಯುವಿನ ಮಾತುಗಳು ಬರುತ್ತವೆ. ಆ ಭಾಗ ಓದೋಣ" ಎಂದರು.

ಜನಪನಂಘ್ರಿಗೆ ಮಣಿದು ಕೈ ಮುಗಿ
ದೆನಗೆ ಬೆಸಸೈ ಬೊಪ್ಪ ತಾ ಬ
ಲ್ಲೆನು ಮಹಾಹವದೊಳಗೆ ಪದ್ಮವ್ಯೂಹ ಭೇದನವ
ಅನುವರವ ಗೆಲುವೆನು ಕೃತಾಂತನ
ಮನೆಗೆ ಕಳುಹುವೆನಹಿತರನು ನೀ
ನಿನಿತು ಚಿಂತಿಸಲೇಕೆ ಕಾಳಗಕೆನ್ನ ಕಳುಹೆಂದ ॥ ೧ ॥

ಹಸುಳೆಯದಟಿನ ನುಡಿಯಕೇಳಿದು
ನಸುನಗುತ ಧರ್ಮಜನು ಘನ ಪೌ
ರುಷವು ನಿನಗುಂಟೆಂದು ಕಂದನ ತೆಗೆದು ಬಿಗಿಯಪ್ಪಿ
ಶಿಶುವು ನೀನೆಲೆ ಮಗನೆ ಕಾದುವ
ರಸಮಬಲರು ಕರ್ಣ ಮಹಾರಥ
ರೆಸುಗೆಯನು ನೀನೆಂತು ಸೈರಿಸಲಾಪೆ ಹೇಳೆಂದ ॥ ೨ ॥

© KTBS NOT TO BE REPUBLISHED

ಬಿಡು ಮರೀಚಿಯ ತೊರೆಗೆ ಹರುಗೋ
ಲಿಡುವರುಂಟೇ ಲೆಪ್ಪದುರುಗನ
ಹಿಡಿಯಲೇತಕೆ ಗರುಡ ಮಂತ್ರವು ಚಪಲನೆನ್ನದಿರು
ಕೊಡನ ಮಗನ ಕುಮಂತ್ರದೊಡ್ಡಿನ
ಕಡಿತಕಾನಂಜುವೆನೆ ವೆಗ್ಗಳ
ನುಡಿಯಲಮ್ಮೆನು ತನ್ನನೀಗಳೆ ಬಿಟ್ಟು ನೋಡೆಂದ ॥ ೩ ॥



ಕಂದ ವೈರಿವ್ಯೂಹವಸದಳ
ವೆಂದೆನಿಪುದದರೊಳಗೆ ಕೃಪ ಗುರು
ನಂದನರು ರಾಧೇಯ ಭೂರಿಶ್ರವ ಜಯದ್ರಥರು
ಇಂದುಧರನಡಹಾಯ್ದರೊಮ್ಮೆಗೆ
ಹಿಂದುಮುಂದೆನಿಸುವರು ನೀಗೆಲು
ವಂದವೆಂತೈ ಸಮರವಿದು ಸಾಮಾನ್ಯವಲ್ಲೆಂದ ॥ ೪ ॥

ಗಾಳಿಬೆಮರುವುದುಂಟೆ ವಹ್ನಿ
ಜ್ವಾಲೆ ಹಿಮಕಂಜುವುದೆ ಮಂಜಿನ
ಮೇಲುಗಾಳೆಗವುಂಟೆ ಬಲುಬೇಸಗೆಯ ಬಿಸಿಲೊಳಗೆ
ಬಾಲನಿವನೆನ್ನದಿರು ದುಗುಡವ
ತಾಳಲಾಗದು ಬೊಪ್ಪ ನಿಮ್ಮಡಿ
ಯಾಲಿಗಳಿಗೌತಣವನಿಕ್ಕುವೆನೊರಸಿ ರಿಪುಬಲವ ॥ ೫ ॥

ಅರಿಬಲವ ನೀ ಖಂಡಿಗೆಳೆ ಮೋ
ಹರಸಹಿತ ನಾ ಬಹೆನು ನಡೆ ಯೆಂ
ದರಸನಭಿಮನ್ಯುವಿಗೆ ನೇಮವ ಕೊಟ್ಟನಾಹವಕೆ
ಜನಪನಂಘ್ರಿಗೆ ಮಣಿದು ಕೈ ಮುಗಿ
ದೆನಗೆ ಬೆಸಸ್ಸೈ ಬೊಪ್ಪ ತಾ ಬ
ಲ್ಲೆನು ಮಹಾಹವದೊಳಗೆ ಪದ್ಮವ್ಯೂಹ ಭೇದನವ ॥ ೬ ॥

## ಮರು ಓದು

೧. (ಅಭಿಮನ್ಯು) ಜನಪನ ಅಂಘ್ರಿಗೆ ಮಣಿದು, ಕೈ ಮುಗಿದು, "ಎನಗೆ ಬೆಸಸ್ಸೈ ಬೊಪ್ಪ, ತಾ ಬಲ್ಲೆನು ಮಹಾ ಆಹವದ ಒಳಗೆ ಪದ್ಮವ್ಯೂಹ ಭೇದನವ. ಅನುವರವ ಗೆಲುವೆನು, ಕೃತಾಂತನ ಮನೆಗೆ ಕಳುಹುವೆನು ಅಹಿತರನು, ನೀನು ಇನಿತು ಚಿಂತಿಸಲೇಕೆ ಕಾಳಗಕೆ ಎನ್ನ ಕಳುಹು" ಎಂದ.

೨. ಹಸುಳೆಯ ಅದಟಿನ ನುಡಿಯ ಕೇಳಿದು ನಸುನಗುತ ಧರ್ಮಜನು "ಘನ ಪೌರುಷವು ನಿನಗೆ ಉಂಟು" ಎಂದು ಕಂದನ ತೆಗೆದು ಬಿಗಿದು ಅಪ್ಪಿ "ಶಿಶುವು ನೀನೆಲೆ ಮಗನೆ, ಕಾದುವರು ಅಸಮಬಲರು ಕಣಾ, ಮಹಾರಥರ ಎಸುಗೆಯನು ನೀನು ಎಂತು ಸೈರಿಸಲು ಆಪೆ? ಹೇಳು" ಎಂದ.

೩. "ಬಿಡು ಮರೀಚಿಯ ತೊರೆಗೆ ಹರುಗೋಲ ಇಡುವರು ಉಂಟೇ, ಲೆಪ್ಪದ ಉರುಗನ ಹಿಡಿಯಲು ಏತಕೆ ಗರುಡ ಮಂತ್ರವು, ಚಪಲನು ಎನ್ನದಿರು, ಕೊಡನ ಮಗನ ಕುಮಂತ್ರದ ಒಡ್ಡಿನ ಕಡಿತಕೆ ಆನು ಅಂಜುವೆನೆ? ವೆಗ್ಗಳ ನುಡಿಯಲು ಅಮ್ಮೆನು ತನ್ನನ್ನು ಈಗಳೆ ಬಿಟ್ಟು ನೋಡು ಎಂದ.

೪. "ಕಂದ, ವೈರಿವ್ಯೂಹ ಅಸದಳ ಎಂದು ಎನಿಪುದು. ಅದರೊಳಗೆ ಕೃಪ–ಗುರುನಂದನರು, ರಾಧೇಯ, ಭೂರಿಶ್ರವ, ಜಯದ್ರಥರು ಇಂದುಧರನು ಅಡಹಾಯ್ದರೂ ಒಮ್ಮೆಗೆ ಹಿಂದುಮುಂದು ಎನಿಸುವರು, ನೀನು ಗೆಲುವ ಅಂದವು ಎಂತೈ? ಸಮರವಿದು ಸಾಮಾನ್ಯವಲ್ಲ!" ಎಂದ.

೫. "ಗಾಳಿ ಬೆಮರುವುದು ಉಂಟೆ? ವಹ್ನಿಜ್ವಾಲೆ ಹಿಮಕೆ ಅಂಜುವುದೆ? ಮಂಜಿನ ಮೇಲುಗಾಳೆಗ ಉಂಟೆ ಬಲುಬೇಸಗೆಯ ಬಿಸಿಲ ಒಳಗೆ? ಬಾಲನು ಇವನು ಎನ್ನದಿರು, ದುಗುಡವ ತಾಳಲಾಗದು ಬೊಪ್ಪ, ನಿಮ್ಮಡಿ ಆಲಿಗಳಿಗೆ ಔತಣವನು ಇಕ್ಕುವೆನು ಒರಸಿ ರಿಪುಬಲವ!"

೬. "ಅರಿಬಲವ ನೀ ಖಂಡಿಗೆಳೆ, ಮೋಹರ ಸಹಿತ ನಾ ಬಹೆನು ನಡೆ" ಎಂದು ಅರಸನು ಅಭಿಮನ್ಯುವಿಗೆ ನೇಮವ ಕೊಟ್ಟನು ಆಹವಕೆ. ಜನಪನ ಅಂಘ್ರಿಗೆ ಮಣಿದು, ಕೈ ಮುಗಿದು, "ಎನಗೆ ಬೆಸಸ್ಸೈ ಬೊಪ್ಪ ತಾ ಬಲ್ಲೆನು ಮಹಾ ಆಹವದ ಒಳಗೆ ಪದ್ಮವ್ಯೂಹ ಭೇದನವ!"

NOT TO BE REPUBLISHED @KTBS

**ಕೌಶಲ :** ಓದುವುದು, ಬರೆಯುವುದು.

**ಸಾಮರ್ಥ್ಯ : ಛಂದಶಾಸ್ತ್ರದ ಪ್ರಾಸ, ಮಾತ್ರೆ, ಗಣ ಇವುಗಳ ಪರಿಚಯ ಮಾಡಿಕೊಳ್ಳುವುದು. ಲೇಖನ ಚಿಹ್ನೆ ಮತ್ತು ಛಂದೋವಿನ್ಯಾಸಗಳನ್ನು ಅರಿತು ಓದುವುದು.**

**ಆಶಯ :** ಅಭಿಮನ್ಯುವಿನ ಸಾಹಸದ ಮಾತುಗಳನ್ನು ಆತ ಮಂಡಿಸುವ ರೀತಿಯನ್ನು ತಿಳಿಯಬೇಕು. ವೀರನಾದರೂ ನಯವಂತ ಮಾತುಗಳು, ಮಾತುಗಳಲ್ಲಿ ಪರಿಣಾಮ ಕಾರಿಯಾದ ಉಪಮೆ, ರೂಪಕಗಳ ಬಳಕೆ ಇವುಗಳನ್ನು ಅಭಿಮನ್ಯುವಿನ ಮಾತುಗಳಲ್ಲಿ ಗಮನಿಸಬೇಕು. ಅವನ ಮಾತಿನಲ್ಲಿ ಇರುವ ಆತ್ಮಸ್ಥೈರ್ಯ ಮೆಚ್ಚುವಂಥದ್ದು. ಧೈರ್ಯ ಮನುಷ್ಯನಿಗೆ ಅಗತ್ಯ. ಧೈರ್ಯದಿಂದ ಮುನ್ನುಗ್ಗಲು ಕಲಿಯಬೇಕು. ಮೊದಲು ಯಾವುದೇ ಕೌಶಲವನ್ನು ಚೆನ್ನಾಗಿ ಕಲಿಯಬೇಕು ನಂತರ ಸಾಹಸವನ್ನು ಪ್ರದರ್ಶಿಸಬೇಕು. ಯಾವುದೇ ವಿದ್ಯೆಯನ್ನು ಪೂರ್ಣವಾಗಿ ತಿಳಿಯಲು ಪ್ರಯತ್ನಿಸಬೇಕು.

## ಕೃತಿಕಾರರ ಪರಿಚಯ



**ಕುಮಾರವ್ಯಾಸನ** ಮೂಲ ಹೆಸರು ನಾರಣಪ್ಪ. **“ಗದುಗಿನ ನಾರಣಪ್ಪ”** ಎಂದು ಸಾಮಾನ್ಯವಾಗಿ ಕುಮಾರವ್ಯಾಸನನ್ನು ಕರೆಯಲಾಗುತ್ತದೆ. ಕವಿಯ ಕಾವ್ಯನಾಮ **ಕುಮಾರವ್ಯಾಸ.** ಕಾಲ ಸುಮಾರು ಸಾ.ಶ. ೧೪೩೦ಎಂದು ನಿಗದಿಪಡಿಸಲಾಗಿದೆ.

ಕುಮಾರವ್ಯಾಸ ಕವಿಯ ಹುಟ್ಟೂರು ಈಗಿನ ಗದಗ ಜಿಲ್ಲೆಯಲ್ಲಿರುವ ಕೋಳಿವಾಡ ಗ್ರಾಮ. ಕಾವ್ಯರಚನೆಯನ್ನು ಮಾಡಿದ್ದು ಗದುಗಿನ ವೀರನಾರಾಯಣನ ಗುಡಿಯಲ್ಲಿ. ಈಗಲೂ ಸಹ ಆ ಗುಡಿಯಲ್ಲಿರುವ ಒಂದು ಕಂಬಕ್ಕೆ ಕುಮಾರವ್ಯಾಸನ ಕಂಬ ಎಂದು ಕರೆಯಲಾಗುತ್ತದೆ. ಕುಮಾರವ್ಯಾಸ ಈ ಕಂಬದ ಅಡಿಯಲ್ಲೇ ಈ ಕಾವ್ಯವನ್ನು ರಚಿಸಿ ಓದುತ್ತಿದ್ದರು ಎಂಬ ಪ್ರತೀತಿ ಇದೆ.

ಕುಮಾರವ್ಯಾಸನ ಪ್ರಸಿದ್ಧ ಕೃತಿ **ಕರ್ಣಾಟ ಭಾರತ ಕಥಾಮಂಜರಿ.** ಇದಕ್ಕೆ ಗದುಗಿನ ಭಾರತ, ಕನ್ನಡ ಭಾರತ, ಕುಮಾರವ್ಯಾಸ ಭಾರತ ಎಂದೂ ಕರೆಯಲಾಗುತ್ತದೆ. ಕನ್ನಡ ಸಾಹಿತ್ಯದಲ್ಲಿ ಮೇರುಕೃತಿಯಾಗಿ ಪರಿಗಣಿತವಾಗಿರುವ ಕನ್ನಡ ಭಾರತ ಹತ್ತು ಪರ್ವಗಳನ್ನು ಒಳಗೊಂಡಿದೆ. ಸಂಪೂರ್ಣ ಕಾವ್ಯ **ಭಾಮಿನಿ ಷಟ್ಪದಿ** ಛಂದಸ್ಸಿನಲ್ಲಿ ರಚಿತವಾಗಿದೆ. ಕವಿಯ ಕಾವ್ಯಪ್ರತಿಭೆ ಪೂರ್ಣಶಕ್ತಿಯಲ್ಲಿ ಹೊರಹೊಮ್ಮುವುದು ರೂಪಕಗಳಲ್ಲಿ. ಇದೇ ಕಾರಣಕ್ಕಾಗಿ ಕುಮಾರವ್ಯಾಸ **ರೂಪಕ ಸಾಮ್ರಾಜ್ಯ ಚಕ್ರವರ್ತಿ** ಎಂಬ ಖ್ಯಾತಿ ಪಡೆದಿದ್ದಾರೆ. ಕುಮಾರವ್ಯಾಸ ಈ ಪ್ರತಿಭೆಗೆ ಕನ್ನಡಿಯಾಗಿ ರಾಷ್ಟ್ರಕವಿ ಕುವೆಂಪು ಅವರ ಈ ಸಾಲುಗಳನ್ನು ನೋಡಿ.

ಕುಮಾರವ್ಯಾಸನು ಹಾಡಿದನೆಂದರೆ
ಕಲಿಯುಗ ದ್ವಾಪರವಾಗುವುದು
ಭಾರತ ಕಣ್ಣಲಿ ಕುಣಿಯುವುದು ಮೈಯ್ಯಲಿ
ಮಿಂಚಿನ ಹೊಳೆ ತುಳುಕಾಡುವುದು

© KTBS NOT TO BE REPUBLISHED

## ಪದಗಳ ಅರ್ಥ

೧. ಜನಪ-ರಾಜ (ಇಲ್ಲಿ ಧರ್ಮರಾಯ); ಅಂಘ್ರಿ-ಪಾದ; ಮಣಿ-ನಮಸ್ಕರಿಸು; ಬೆಸಸು-ಅಪ್ಪಣೆಮಾಡು; ಬೊಪ್ಪ-ತಂದೆ, (ಇಲ್ಲಿ ದೊಡ್ಡಪ್ಪ); ಆಹವ-ಯುದ್ಧ; ಭೇದನ-ಮುರಿಯುವುದು; ಅನುವರ-ಯುದ್ಧ; ಕೃತಾಂತ-ಯಮ; ಅಹಿತರು-ಹಿತವಲ್ಲದವರು,
ವೈರಿಗಳು; ಕಾಳಗ-ಯುದ್ಧ.

೨. ಹಸುಳೆ-ಮಗು; ಅದಟು-ಪರಾಕ್ರಮ,ಶೌರ್ಯ; ಘನ-ದೊಡ್ಡ; ಶಿಶು-ಮಗು; ಕಾದುವರು-ಯುದ್ಧ ಮಾಡುವವರು; ಅಸಮಬಲ-ಸಮಾನವಲ್ಲದ ಶಕ್ತಿ ಉಳ್ಳವರು; ಎಸುಗೆ-ಬಾಣ ಪ್ರಯೋಗ; ಸೈರಿಸು-ತಡೆದುಕೊಳ್ಳು; ಆಪೆ-ಸಮರ್ಥನಾಗುವೆ.

೩. ತೊರೆ-ನದಿ, ಹೊಳೆ; ಮರೀಚಿ-ಮೃಗಜಲ (ನೀರು ಎಂಬ ಭ್ರಮೆಯ ಸೃಷ್ಟಿ); ಹರುಗೋಲ-ನಾವೆ, ದೋಣಿ; ಲೆಪ್ಪ-ವಿಗ್ರಹಗಳನ್ನು ಮಾಡಲು ಬಳಸುವ ಎರಕ; ಉರಗ-ಹಾವು; ಕೊಡನ ಮಗ- ದ್ರೋಣ; ಕುಮಂತ್ರ-ಮೋಸದ ಆಲೋಚನೆ; ದಂಡು-ಸೈನ್ಯ; ಅಂಜು-ಹೆದರು; ವೆಗ್ಗಳ-ಅತಿಯಾಗಿ; ಅಮ್ಮೆ-ಸಾಧ್ಯವಿಲ್ಲ.

೪. ವೈರಿ-ಶತ್ರು; ವ್ಯೂಹ-ಸೈನ್ಯವನ್ನು ಒಂದು ವಿಶಿಷ್ಟ ರೀತಿಯಲ್ಲಿ ನಿಲ್ಲಿಸುವ ಕ್ರಮ; ಅಸದಳ-ಅಸಾಧ್ಯ, ಅತಿಶಯ; ಇಂದುಧರ-ಚಂದ್ರನನ್ನು ಧರಿಸಿರುವವ, ಶಿವ; ಅಡಹಾಯ್ದರೂ-ಮೇಲೆ ಬಿದ್ದು ಬಂದರೂ; ಸಮರ-ಯುದ್ಧ.

೫. ಬೆಮರು-ಬೆವರು; ವಹ್ನಿಜ್ವಾಲೆ-ಬೆಂಕಿಯ ಜ್ವಾಲೆ; ಹಿಮ-ಚಳಿಗಾಲ, ಮಂಜಿನ ಹನಿ; ಅಂಜು-ಹೆದರು; ಮಂಜು-ಇಬ್ಬನಿ, ಮೇಲುಗಾಳೆಗ-ಸ್ಪರ್ಧಾತ್ಮಕವಾದ ಯುದ್ಧ; ದುಗುಡ-ಚಿಂತೆ, ಆತಂಕ; ನಿಮ್ಮಡಿ ಆಲಿ-ನಿಮ್ಮ ಕಣ್ಣುಗಳಿಗೆ; ಔತಣ-ವಿಶೇಷ ಭೋಜನ; ಇಕ್ಕು-ಇಡು,ಬಡಿಸು; ಒರಸಿ-ನಾಶಮಾಡಿ; ರಿಪುಬಲ-ವೈರಿ ಸೈನ್ಯ.

೬. ಅರಿಬಲ-ವೈರಿ ಸೈನ್ಯ; ಖಂಡಿಗೆಳೆ-ನಾಶಪಡಿಸು; ಮೋಹರ-ಸೈನ್ಯ; ನೇಮ-ಅಪ್ಪಣೆ; ಆಹವ-ಯುದ್ಧ.

NOT TO BE REPUBLISHED @KTBS

## ಪೂರಕ ಟಿಪ್ಪಣಿ

**ಅಭಿಮನ್ಯು** – ಅರ್ಜುನ-ಸುಭದ್ರೆಯರ ಮಗ. ಇವನಿಗೆ ಪದ್ಮವ್ಯೂಹವನ್ನು ಭೇದಿಸಿ ಒಳಗೆ ಹೋಗುವುದು ತಿಳಿದಿತ್ತು. ಅಲ್ಲಿಂದ ಬಿಡಿಸಿಕೊಂಡು ಬರುವುದು ತಿಳಿದಿರಲಿಲ್ಲ. ಆದರೂ ಹೋರಾಟಕ್ಕೆ ಇಳಿಯುತ್ತಾನೆ.

**ಧರ್ಮರಾಯ** – ಪಾಂಡವರಲ್ಲಿ ಹಿರಿಯವ.

**ಪದ್ಮವ್ಯೂಹ** – ಯುದ್ಧದಲ್ಲಿ ಕಮಲದ ಆಕಾರದಲ್ಲಿ ರಚಿಸಿದ ಸೈನ್ಯವ್ಯವಸ್ಥೆ. (ಚಕ್ರವ್ಯೂಹ)

**ಮಹಾರಥರು** – ರಥದಲ್ಲಿದ್ದುಕೊಂಡು ಏಕಾಂಗಿಯಾಗಿ ಹತ್ತುಸಾವಿರ ಸೈನಿಕರೊಡನೆ ಯುದ್ಧ ಮಾಡುವ ಸಾಹಸಿಗಳು.

**ಮರೀಚಿ** – ಬಿಸಿಲುಕುದುರೆ, ಮೃಗಜಲ, ಬಿಸಿಲಿನ ಸಂದರ್ಭದಲ್ಲಿ ದೂರದಲ್ಲಿ ನೀರು ಇದ್ದಂತೆ ಕಣ್ಣಿಗೆ ಗೋಚರವಾಗುತ್ತದೆ, ಹತ್ತಿರದಲ್ಲಿ ಹೋಗಿ ನೋಡಿದರೆ ನೀರಿರುವುದಿಲ್ಲ. ಅದು ಮರೀಚಿ ಅಥವಾ ಮರೀಚಿಕೆ.

**ಗರುಡ ಮಂತ್ರ** – ಹಾವಿಗೂ ಗರುಡನಿಗೂ ವೈರ ಎಂಬ ನಂಬುಗೆಯಿದೆ, ಹಾವನ್ನು ಹಿಡಿಯಲು ಬಳಸುವ ಮಂತ್ರ.

**ಕೊಡನ ಮಗ** – ದ್ರೋಣ. ಇವನು ಕೊಡದಲ್ಲಿ ಹುಟ್ಟಿದ ಎಂಬುದು ಪ್ರತೀತಿ. ಕೌರವರು ಮತ್ತು ಪಾಂಡವರಿಗೆ ವಿದ್ಯೆ ಹೇಳಿಕೊಟ್ಟ ಗುರು.

**ಕೃಪ** – ಕೃಪಾಚಾರ್ಯ ಕೌರವರು ಮತ್ತು ಪಾಂಡವರಿಗೆ ಬಿಲ್ಲು ವಿದ್ಯೆ ಹೇಳಿಕೊಟ್ಟ ಗುರು.

**ಗುರುನಂದನ** – ದ್ರೋಣನ ಮಗನಾದ ಅಶ್ವತ್ಥಾಮ.

**ರಾಧೇಯ** – ಕರ್ಣ ಇವನು ರಾಧೆಯ ಸಾಕುಮಗ.

**ಭೂರಿಶ್ರವ** – ಮಹಾಭಾರತದ ಯುದ್ಧದಲ್ಲಿ ದುರ್ಯೋಧನನಿಗೆ ಸೈನ್ಯದ ನೆರವು ನೀಡಿದ್ದಲ್ಲದೆ ಅವನ ಪರವಾಗಿ ಯುದ್ಧವನ್ನು ಮಾಡಿದ ಯಾದವ ವೀರ.

**ಜಯದ್ರಥ** – ದುರ್ಯೋಧನನ ಪರವಾಗಿ ಯುದ್ಧವನ್ನು ಮಾಡಿದವನು. ದುರ್ಯೋಧನನ ತಂಗಿ ದುಶ್ಶಳೆಯ ಪತಿ.

© KTBS NOT TO BE REPUBLISHED

## ಪೂರ್ವ ಕಥೆ

ಮಹಾಭಾರತದಲ್ಲಿ ಪಾಂಡವರು ಮತ್ತು ಕೌರವರು ರಾಜ್ಯಕ್ಕಾಗಿ ಹೋರಾಟ ಮಾಡಿದ ಕಥೆಯಿದೆ. ಇಬ್ಬರ ನಡುವಿನ ಯುದ್ಧವನ್ನು ಕುರುಕ್ಷೇತ್ರ ಯುದ್ಧ ಎಂದು ಕರೆಯಲಾಗುತ್ತದೆ. ಈ ಕುರುಕ್ಷೇತ್ರ ಯುದ್ಧದಲ್ಲಿ ಕೌರವರ ಕಡೆ ಭೀಷ್ಮ ಮೊದಲ ಸೇನಾಧಿಪತಿಯಾಗಿರುತ್ತಾನೆ. ಅವನ ನಂತರ ದ್ರೋಣ ಸೇನಾಧಿಪತಿಯಾಗುತ್ತಾನೆ. ದ್ರೋಣ ಪಾಂಡವರನ್ನು ಗೆಲ್ಲಲು ಪದ್ಮವ್ಯೂಹವನ್ನು ರಚಿಸುತ್ತಾನೆ. ಈ ವ್ಯೂಹವನ್ನು ಭೇದಿಸಲು ಪಾಂಡವರ ಕಡೆಯಲ್ಲಿ ಕೃಷ್ಣ ಮತ್ತು ಅರ್ಜುನರಿಗೆ ಮಾತ್ರ ತಿಳಿದಿರುತ್ತದೆ. ಆದರೆ ಅವರಿಬ್ಬರೂ ಯುದ್ಧಕ್ಕಾಗಿ ಬಹುದೂರಕ್ಕೆ ಹೋಗಿರುತ್ತಾರೆ. ಅವರು ಬರುವವರೆಗೆ ಯುದ್ಧವನ್ನು ನಡೆಸುವುದು ಅನಿವಾರ್ಯವಾಗಿರುತ್ತದೆ. ಧರ್ಮರಾಯನಿಗೆ ಚಿಂತೆಯಾಗುತ್ತದೆ. ಕೃಷ್ಣಾರ್ಜುನರನ್ನು ಬಿಟ್ಟರೆ ಅಭಿಮನ್ಯುವಿಗೆ ಪದ್ಮವ್ಯೂಹ ಭೇದಿಸುವ ವಿದ್ಯೆ ಅರ್ಧ ಮಾತ್ರ ಗೊತ್ತಿರುತ್ತದೆ. ಅವನಿಗೆ ವ್ಯೂಹವನ್ನು ಭೇದಿಸುತ್ತಾ ಒಳಗೆ ಹೋಗುವುದು ಗೊತ್ತು. ಆದರೆ ಅದರಿಂದ ಬಿಡಿಸಿಕೊಂಡು ಹೊರಬರುವುದು ತಿಳಿದಿಲ್ಲ. ಇಂಥ ಸಂದರ್ಭದಲ್ಲಿ ಅಭಿಮನ್ಯು ದೊಡ್ಡಪ್ಪನಾದ ಧರ್ಮರಾಯನನ್ನು ಭೇಟಿಯಾಗುತ್ತಾನೆ.

## ಅಭ್ಯಾಸ

**ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಧರ್ಮರಾಯನಿಗೆ ನಮಸ್ಕರಿಸಿದ ಅಭಿಮನ್ಯು ಹೇಳುವುದೇನು?

೨. ಅಭಿಮನ್ಯುವಿನ ಮಾತನ್ನು ಕೇಳಿ ಧರ್ಮರಾಯ ಏನು ಹೇಳುತ್ತಾನೆ?

೩. ಧರ್ಮರಾಯನ ಮಾತಿಗೆ ಅಭಿಮನ್ಯು ಕೊಡುವ ಉತ್ತರವೇನು?

**ಆ. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಲೆಪ್ಪದುರುಗನ ಹಿಡಿಯಲೇತಕೆ ಗರುಡಮಂತ್ರವು-ಎಂದರೇನು?

೨. ನಿಮ್ಮಡಿಯಾಲಿಗಳಿಗೆ ಔತಣ ಇಕ್ಕುವನು ಎಂದು ಅಭಿಮನ್ಯು ಹೇಳಲು ಕಾರಣವೇನು ?

೩. ವೈರಿವ್ಯೂಹದೊಳಗೆ ಇರುವ ವೀರರು ಯಾರು?

**ಇ. ಕೆಳಗಿನ ವಾಕ್ಯಗಳನ್ನು ಯಾರು, ಯಾರಿಗೆ ಹೇಳಿದರು? ತಿಳಿಸಿ.**

೧. ಶಿಶುವು ನೀನೆಲೆ ಮಗನೆ ಕಾದುವರಸಮಬಲರು ಕಣಾ!

೨. ಕೊಡನ ಮಗನ ಕುಮಂತ್ರದೊಡ್ಡಿನ ಕಡಿತಕಾನಂಜುವೆನೆ?

೩. ನೀಗೆಲುವಂದವೆಂತೈ ಸಮರವಿದು ಸಾಮಾನ್ಯವಲ್ಲೆಂದ.

೪. ಬಾಲನಿವನೆನ್ನದಿರು ದುಗುಡವ ತಾಳಲಾಗದು ಬೊಪ್ಪ.

**ಈ. 'ಅ' ಪಟ್ಟಿಯಲ್ಲಿನ ಪದಗಳಿಗೆ 'ಆ'ಪಟ್ಟಿಯಲ್ಲಿ ಅರ್ಥ ನೀಡಲಾಗಿದೆ. ಪಟ್ಟಿಗಳ ಪದಗಳನ್ನು ಹೊಂದಿಸಿ ಬರೆಯಿರಿ.**

| | 'ಅ' ಪಟ್ಟಿ | 'ಆ' ಪಟ್ಟಿ |
|---|---|---|
| ೧. | ಅದಟು | ಅಪ್ಪಣೆ |
| ೨. | ಸೈರಿಸಲಾಪೆ | ನಾಶಮಾಡು |
| ೩. | ಅಮ್ಮೆನು | ಪರಾಕ್ರಮ |
| ೪. | ಅಸದಳ | ಸಾಧ್ಯವಾಗುವುದಿಲ್ಲ |
| ೫. | ಖಂಡಿಗೆಳೆ | ಅಸಾಧ್ಯ |
| ೬. | ನೇಮ | ತಡೆದುಕೊಳ್ಳಲು ಸಾಧ್ಯ |

NOT TO BE REPUBLISHED @KTBS

ಉ. ಈ ವಾಕ್ಯವನ್ನು ಹೊಸಗನ್ನಡಕ್ಕೆ ಪರಿವರ್ತಿಸಿ, ಭಾಷೆಯಲ್ಲಾದ ಬದಲಾವಣೆಗಳನ್ನು ಗುರುತಿಸಿ.

(ಅಭಿಮನ್ಯು) ಜನಪನ ಅಂಘ್ರಿಗೆ ಮಣಿದು, ಕೈ ಮುಗಿದು, "ಎನಗೆ ಬೆಸಸೈ ಬೊಪ್ಪ, ಮಹಾ ಆಹವದ ಒಳಗೆ ಪದ್ಮವ್ಯೂಹ ಭೇದನವ ತಾ ಬಲ್ಲೆನು. ಅನುವರವ ಗೆಲುವೆನು, ಅಹಿತರನು ಕೃತಾಂತನ ಮನೆಗೆ ಕಳುಹುವೆನು, ನೀನ್ ಇನಿತು ಚಿಂತಿಸಲೇಕೆ ಕಾಳಗಕೆ ಎನ್ನ ಕಳುಹು" ಎಂದ.

## ಚಟುವಟಿಕೆ

ಪಠ್ಯದಲ್ಲಿರುವ ಈ ಸಾಲುಗಳನ್ನು ಓದಿ-ಅರ್ಥಮಾಡಿಕೊಳ್ಳಿ.

೧. ವಿಷಯವನ್ನು ಮನಸ್ಸಿಗೆ ನಾಟುವಂತೆ ಮಾಡಲು ಅದೇ ರೀತಿಯ ಮತ್ತೊಂದು ವಿಷಯದ ಮೂಲಕ ಹೇಳುವುದನ್ನು ರೂಪಕ ಎನ್ನುತ್ತಾರೆ. ಅಭಿಮನ್ಯು ಧರ್ಮರಾಯನಿಗೆ ತನ್ನ ಧೈರ್ಯ ಪರಾಕ್ರಮ ಸಾಹಸಗಳನ್ನು ತಿಳಿಸಲು ಬಳಸುವ ರೂಪಕಗಳನ್ನು ಕೆಳಗೆ ನೀಡಲಾಗಿದೆ. ಇವುಗಳನ್ನು ಅರ್ಥಮಾಡಿಕೊಂಡು ವಿವರಿಸಿ.

೧. ಮರೀಚಿಯ ತೊರೆಗೆ ಹರುಗೋಲಿಡುವರುಂಟೇ

೨. ಲೆಪ್ಪದುರುಗನ ಹಿಡಿಯಲೇತಕೆ ಗರುಡಮಂತ್ರವು

೩. ಗಾಳಿಬೆಮರುವುದುಂಟೆ

೪. ವಹ್ನಿಜ್ವಾಲೆ ಹಿಮಕಂಜುವುದೆ

೫. ಮಂಜಿನ ಮೇಲುಗಾಳೆಗವುಂಟೆ ಬಲುಬೇಸಗೆಯ ಬಿಸಿಲೊಳಗೆ

೨. ಕೆಳಗೆ ನೀಡಿರುವ ಪದಗಳು ಇಂದಿನ ಕನ್ನಡದಲ್ಲಿ ಬಳಕೆಯಲ್ಲಿಲ್ಲ. ೧೫-೧೬ನೆಯ ಶತಮಾನದಲ್ಲಿ ಬಳಕೆಯಲ್ಲಿದ್ದವು. ಇಂಥ ಕನ್ನಡವನ್ನು ಸೇರಿದಂತೆ ಇರುವ ಕನ್ನಡ ಭಾಷೆಯನ್ನು ನಡುಗನ್ನಡ ಭಾಷೆ ಎಂದು ಕರೆಯುತ್ತೇವೆ.

ಬೆಸಸೈ-ಹೇಳಿ,ಅಪ್ಪಣೆಮಾಡಿ; ಅದಟು-ಪರಾಕ್ರಮ, ಶೌರ್ಯ; ಕೇಳಿದು-ಕೇಳಿ; ಸೈರಿಸಲಾಪೆ-ತಡೆದುಕೊಳ್ಳಲು ಸಾಧ್ಯ; ಅಮ್ಮೆನು-ಸಾಧ್ಯವಾಗುವುದಿಲ್ಲ; ಅಸದಳ-ಅಸಾಧ್ಯ; ಅಡಹಾಯ್ದ-ಮೇಲೆತ್ತಿ ಬಂದರೂ; ಹಿಂದುಮುಂದು-ತಬ್ಬಿಬ್ಬಾಗು; ಎಂತೈ-ಹೇಗೆ; ನಿಮ್ಮಡಿ-ನಿಮ್ಮಲ್ಲಿ; ಖಂಡಿಗೆಳೆ-ನಾಶಮಾಡು; ನೇಮವ-ಅಪ್ಪಣೆಯನ್ನು.

೩. ಮಹಾಭಾರತದಲ್ಲಿ ಬರುವ ವಿವಿಧ ಪುರಾಣ ಪಾತ್ರಗಳ ಹೆಸರುಗಳನ್ನು ಪಟ್ಟಿ ಮಾಡಿ ಸ್ನೇಹಿತರೊಂದಿಗೆ ಹಂಚಿಕೊಂಡು ಅಕಾರಾದಿಯಾಗಿ ಪಟ್ಟಿ ಮಾಡಿ.

@KTBS NOT TO BE REPUBLISHED

## ಛಂದಸ್ಸು

ಕಾವ್ಯ, ಕವನ, ಕವಿತೆ ಎಂದು ಓದುತ್ತೇವಲ್ಲ, ಇದು ತನ್ನ ಸ್ವರೂಪದಲ್ಲಿ ಹೇಗಿರುತ್ತದೆ ಎಂಬುದನ್ನು ತಿಳಿಸುವುದು ಛಂದಸ್ಸು. ಈ ಛಂದಸ್ಸಿನಲ್ಲಿ ಹಲವು ವಿಚಾರಗಳಿವೆ. ನಾವಿಲ್ಲಿ ಮಾತ್ರಾಛಂದಸ್ಸಿನ ಬಗ್ಗೆ ಮಾತ್ರ ತಿಳಿಯುತ್ತೇವೆ.

ಈ ಸಾಲುಗಳನ್ನು ಚಪ್ಪಾಳೆ ತಟ್ಟಿಕೊಂಡು ಗಟ್ಟಿಯಾಗಿ ಓದಿ:

ಅ. **ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ**
**ಜಗ್ಗದೆಯೆ ಕುಗ್ಗದೆಯೆ ಹಿಗ್ಗಿ ನಡೆ ಮುಂದೆ**

ಆ. **ಕೋಟು ಗೀಟು ತೊಟ್ಟುಕೊಂಡು**
**ಹೇಟು ಬೂಟು ಹಾಕಿಕೊಂಡು**
**ಬೂಟಿನಿಂದ ಹೊರಟ ತಮ್ಮ**
**ಡಬ್ ಡಬ್ ಡಬ್**

NOT TO BE REPUBLISHED ©KTBS

ಇದನ್ನು ಹೇಳುವಾಗ ಕಿವಿಗೆ ಒಂದು ಕುಣಿತದ ಸ್ಥಿತಿ ಸಿಗುತ್ತದೆ ಅಲ್ಲವೇ? ಇದೇ ಲಯ. ಇದು ಹೇಗೆ ಬಂತು? ಕೆಲವು ಅಕ್ಷರಗಳು ಚಿಕ್ಕವು, ಕೆಲವು ದೊಡ್ಡವು, ಕೆಲವಕ್ಕೆ ಒತ್ತಕ್ಷರವಿದೆ. ಈ ಅಕ್ಷರಗಳನ್ನು ಓದುವಾಗ ಅವು ತೆಗೆದುಕೊಳ್ಳುವ ಸಮಯದಲ್ಲಿ ವ್ಯತ್ಯಾಸವಿದೆ.

ನಡೆ ಎಂಬ ಪದ ತೆಗೆದುಕೊಳ್ಳುವ ಸಮಯಕ್ಕೂ ಮುಂದೆ ಎಂಬ ಪದ ತೆಗೆದುಕೊಳ್ಳುವ ಸಮಯಕ್ಕೂ ವ್ಯತ್ಯಾಸವಿದೆ, ನುಗ್ಗಿ, ಹಿಗ್ಗಿ ಎಂಬ ಪದ ತೆಗೆದುಕೊಳ್ಳುವ ಸಮಯಕ್ಕೂ ಕೋಟು, ಗೀಟು, ಬೂಟು ಎಂಬ ಪದ ತೆಗೆದುಕೊಳ್ಳುವ ಸಮಯಕ್ಕೂ ವ್ಯತ್ಯಾಸವಿದೆ. ಹೀಗೆ ನಿರ್ದಿಷ್ಟ ಸಮಯ ತೆಗೆದುಕೊಳ್ಳುವ ಪದಗಳನ್ನು ಒಂದು ಕ್ರಮದಲ್ಲಿ ಜೋಡಿಸಲಾಗಿದೆ. ಈ ಜೋಡಣೆ ನೀಡುವ ವ್ಯವಸ್ಥೆಯೇ ಲಯ.

ಈಗ ಕೆಳಗೆ ನೀಡಿರುವ ಅಕ್ಷರಗಳನ್ನು ನಿಲ್ಲಿಸದೇ ಜೋರಾಗಿ ಹೇಳಿ ನೋಡಿ :

**ಅ ಇ ಉ ಋ ಎ ಒ**
**ಕ ಲಿ ಕು ರು ಗೆ ಮೊ**

ಇವುಗಳನ್ನು ಹೇಳಲು ಒಂದು ಚಿಟಿಕೆಯಷ್ಟು ಕಾಲ ಸಾಕಾಗುತ್ತದೆ. ಛಂದಸ್ಸಿನ ಭಾಷೆಯಲ್ಲಿ ಇದನ್ನು "ಲಘು" ಎಂದು ಹೇಳಲಾಗುತ್ತಿದೆ. ಲಘುವನ್ನು ಗುರುತಿಸಲು **'U'** ಎಂಬ ಚಿಹ್ನೆ ಬಳಸಲಾಗುತ್ತದೆ. ಈ ಚಿಹ್ನೆಯನ್ನು ಬಳಸಿ ಅಕ್ಷರಗಳನ್ನು ಬರೆಯುವ ರೀತಿಯನ್ನು ಗಮನಿಸಿ:

U U U U U U
**ಅ ಇ ಉ ಋ ಎ ಒ**
U U U U U U
**ಕ ಲಿ ಕು ರು ಗೆ ಮೊ**

ಈಗ ಕೆಳಗೆ ನೀಡಿರುವ ಅಕ್ಷರಗಳನ್ನು ನಿಲ್ಲಿಸದೇ ಜೋರಾಗಿ ಹೇಳಿ ನೋಡಿ :

**ಆ ಈ ಊ ಏ ಓ ಐ ಔ**

**ನಾ ಯೀ ಗೂ ಗೇ ಲೋ ಸೈ ಕೌ**

ಇವುಗಳನ್ನು ಹೇಳಲು ಹಿಂದಿನ ಎರಡರಷ್ಟು ಕಾಲ (ಎರಡು ಚಿಟಿಕೆಯಷ್ಟು ಕಾಲ) ಬೇಕಾಗುತ್ತದೆ. ಛಂದಸ್ಸಿನ ಭಾಷೆಯಲ್ಲಿ ಇದನ್ನು **'ಗುರು'** ಎಂದು ಹೇಳಲಾಗುತ್ತಿದೆ. ಗುರುವನ್ನು ಗುರುತಿಸಲು **'–'** ಎಂಬ ಚಿಹ್ನೆ ಬಳಸಲಾಗುತ್ತದೆ. ಈ ಚಿಹ್ನೆಯನ್ನು ಬಳಸಿ ಅಕ್ಷರಗಳನ್ನು ಬರೆಯುವ ರೀತಿಯನ್ನು ಗಮನಿಸಿ:

– – – – – – –

**ಆ ಈ ಊ ಏ ಓ ಐ ಔ**

– – – – – – –

**ನಾ ಯೀ ಗೂ ಗೇ ಲೋ ಸೈ ಕೌ**

ಮುಂದೆ ನೀಡಿರುವ ಅಕ್ಷರಗಳನ್ನು ಪ್ರತಿ ಪದಕ್ಕೂ ಒಂದು ಕ್ಷಣ ನಿಲುಗಡೆ ನೀಡಿ ಜೋರಾಗಿ ಹೇಳಿ ಓದಿ :

**ಕಗ್ಗ, ಚಿಕ್ಕ, ಅಜ್ಜ, ಅಮ್ಮ, ಅಯ್ಯ, ಸಣ್ಣ, ದೊಡ್ಡ, ಬಚ್ಚಿ, ಬೆಟ್ಟ, ಕತ್ತೆ, ಬೊಪ್ಪ, ಮುದ್ದ, ಹಬ್ಬ.**

ನೀವು ಓದುವಾಗ ಇದನ್ನು ಹೀಗೆಯೂ ಓದಿರಬಹುದೆಂಬುದನ್ನು ಗಮನಿಸಿ:
**ಕಗ್ಗ, ಚಿಕ್ಕ, ಅಜ್ಜ, ಅಮ್ಮ, ಅಯ್ಯ, ಸಣ್ಣ, ದೊಡ್ಡ, ಬಚ್ಚಿ,ಬೆಟ್ಟ, ಕತ್ತೆ, ಬೊಪ್ಪ, ಮುದ್ದ, ಹಬ್ಬ.**

NOT TO BE REPUBLISHED @KTBS

**ಮೇಲಿನ ಪದಗಳಲ್ಲಿ ಒತ್ತಕ್ಷರದ ಹಿಂದಿನ ಪದ ಎರಡು ಚಿಟಿಕೆಯಷ್ಟು ಕಾಲ ತೆಗೆದುಕೊಳ್ಳುವುದರಿಂದ ಒತ್ತಕ್ಷರದ ಹಿಂದಿನಕ್ಷರ ಗುರು ಒತ್ತಕ್ಷರ ಲಘು.**

ಮೇಲಿನ ಪದಗಳಿಗೆ ಗುರು ಲಘು ಹಾಕೋಣ

– ∪ | – ∪ | – ∪ | – ∪ | – ∪ | – ∪ | – ∪ | – ∪ |

ಕಗ್‌ಗ । ಚಿಕ್‌ಕ । ಅಜ್‌ಜ । ಅಮ್‌ಮ। ಅಯ್‌ಯ । ಸಣ್‌ಣ । ದೊಡ್‌ಡ । ಬಚ್‌ಚಿ ।

– ∪ | – ∪ | –∪ | – ∪ | – ∪ | –∪ | – ∪ | –∪ | –∪ | –∪ | – ∪ |

ಕ ಗ್ಗ । ಚಿ ಕ್ಕ । ಅಜ್ಜ । ಅಮ್ಮ । ಅಯ್ಯ । ಸಣ್ಣ। ದೊಡ್ಡ। ಬಚ್ಚಿ । ಬೆಟ್ಟ। ಕತ್ತೆ । ಬೊಪ್ಪ।

**ಅನುಸ್ವಾರ(ಂ) ಬಂದರೆ ಅದರ ಹಿಂದಿನಕ್ಷರ ಗುರುವಾಗುತ್ತದೆ**

– ∪ | – ∪ | – ∪ | – ∪ | – ∪ | – ∪ | – ∪ | – ∪ | – ∪ |

ಕಂದ । ಮಂಗ । ಚಂಪ । ಸಂತೆ । ಕುಂತಿ । ಗೋಂದು । ಗಿಂಡಿ । ಉಂಡೆ । ಅಂಚೆ ।

## ಗಮನಿಸಿ

### ಗುರು ಎನಿಸುವ ಅಕ್ಷರಗಳು

| | | | |
|---|---|---|---|
| ✦ ದೀರ್ಘಾಕ್ಷರಗಳು | = | — U<br>ಕಾ ಲು | — U U<br>ಆ ಗ ಸ |
| ✦ ಸಂಯುಕ್ತಾಕ್ಷರದ ಹಿಂದಿನ ಅಕ್ಷರ | = | — U U<br>ಅ ಕ್ಷ ರ | — U U<br>ಭ ಕ್ಷ ಣೆ |
| ✦ ಅನುಸ್ವಾರ, ವಿಸರ್ಗಗಳಿಂದ ಕೂಡಿರುವ ಅಕ್ಷರ | = | — U U<br>ಬಂ ದ ನು | — U<br>ದುಃಖ |
| ✦ ವ್ಯಂಜನಾಕ್ಷರದ ಹಿಂದಿನ ಅಕ್ಷರ | = | U U—<br>ಬರುವಳ್ | U U—<br>ಮರಗಳ್ |
| ✦ ಐ, ಔ ಸಹಿತವಾದ ಅಕ್ಷರ | = | — U<br>ಗೈ ಮೆ | — U U<br>ಔ ಷ ಧ |

✦ ಷಟ್ಪದಿಯ ಮೂರು ಮತ್ತು ಆರನೆಯ ಪಾದಗಳ ಕೊನೆಯ ಅಕ್ಷರ : ಈ ಅಕ್ಷರಗಳು ಒಂದು ಮಾತ್ರಾ ಲಕ್ಷಣ ಕೂಡಿದ್ದರೂ ಹಾಡುವಾಗ ಎರಡು ಮಾತ್ರಾಕಾಲಗಳಲ್ಲಿ ಉಚ್ಚರಿಸಲ್ಪಡುತ್ತವೆ. ಹಾಗಾಗಿ ಈ ಅಕ್ಷರಗಳು **ಗುರು** ಎನಿಸಿಕೊಳ್ಳುವ ಯಾವುದೇ ಲಕ್ಷಣಗಳನ್ನು ಪಡೆಯದಿದ್ದರೂ **ಗುರುವಾಗಿಯೇ** ಪರಿಗಣಿಸಲ್ಪಡುತ್ತವೆ.

@KTBS NOT TO BE REPUBLISHED

## ಅಭ್ಯಾಸ

ಅ) ಕೆಳಗಿನ ಅಕ್ಷರಗಳಿಗೆ ಗುರು ಲಘು ಹಾಕಿ :

ಕೋ।ಳಿ।ಕೂ।ಗಿ।ತು ಬೆ।ಳ।ಕು।ಹ।ರಿ।ಯಿ।ತು

ಕಾ।ಗೆ।ಕೋ।ತಿ।ಮೊ।ಲ।

ಆ) ಕೆಳಗಿನ ಪದಗಳಿಗೆ ಗುರು ಲಘು ಹಾಕಿ : ಜನಪ।ಮಣಿ। ಬೊಪ್ಪ।ಆಹವ।ಯುದ್ಧ । ಭೇದನ।ಅನುವರ।ಕೃತಾಂತ। ಅಹಿತರು। ಕಾಳಗ

ಇ) ಕೆಳಗಿನ ಪದಗಳಿಗೆ ಗುರು ಲಘು ಹಾಕಿ :
ಸಂಜೆ।ಬಂಟ।ಸಂಘ।ಪಂಪ।ಸಂಪುಟ।ಹುಂಡಿ।ಗಂಗೆ।ಅಂಬಾ।ಇಂಗು

### ಮಾತ್ರಾಗಣ

ಲಘು ಮತ್ತು ಗುರು ಇವುಗಳನ್ನು ಮಾತ್ರೆ ಎಂದೂ ಕರೆಯಲಾಗುತ್ತದೆ. ಲಘು(∪)ವಿಗೆ ಒಂದು ಮಾತ್ರೆಯ ಬೆಲೆಯಾದರೆ ಗುರುವಿಗೆ (–) ಎರಡು ಮಾತ್ರೆಯಷ್ಟು ಬೆಲೆ.

ಒಂದು ಮಾತ್ರೆ = ∪
ಎರಡು ಮಾತ್ರೆ = – ಅಥವಾ ∪∪
ಮೂರು ಮಾತ್ರೆ = ∪ – ಅಥವಾ ∪∪∪
ನಾಲ್ಕು ಮಾತ್ರೆ = – – ಅಥವಾ ∪∪∪∪
ಐದು ಮಾತ್ರೆ = – – ∪ ಅಥವಾ ∪∪∪∪∪

ಗಣ ಎಂದರೆ ಗುಂಪು. ಒಂದು, ಎರಡು, ಮೂರು, ನಾಲ್ಕು, ಐದು ಮಾತ್ರೆಗಳ ಗುಂಪಿಗೆ ಮಾತ್ರಾಗಣ ಎಂದು ಕರೆಯಲಾಗುತ್ತದೆ. ಅಕ್ಷರಗಳನ್ನು ಮತ್ತು ಪದಗಳನ್ನು ಮಾತ್ರೆಯಲ್ಲಿ ಬೆಲೆಕಟ್ಟಿ ಅದನ್ನು ಗುಂಪು ಗುಂಪಾಗಿ ಮಾಡಿ ಮಾತ್ರಾಗಣದ ಗುಂಪು ಎಂದು ಕರೆಯಲಾಗುತ್ತದೆ.

### ಉದಾಹರಣೆ

∪ ∪ ∪ ∪ ∪
ತ ಕ ತ ಕಿ ಟ = ಒಂದು ಮಾತ್ರೆಯ ಗುಂಪು

∪∪ ∪∪ ∪∪
ತಕ ತಕ ತಕ = ಎರಡು ಮಾತ್ರೆಯ ಗುಂಪು

∪∪∪ ∪∪∪ ∪∪∪
ತಕಿಟ ತಕಿಟ ತಕಿಟ = ಮೂರು ಮಾತ್ರೆಯ ಗುಂಪು

@KTBS NOT TO BE REPUBLISHED

UU UUU UU UUU UU UUU

ತಕ ತಕಿಟ ತಕ ತಕಿಟ ತಕ ತಕಿಟ = ಎರಡು ಮತ್ತು ಮೂರು ಮಾತ್ರೆಯ ಗುಂಪು

UUU UUUU UUU UUUU UUU UUUU

ತಕಿಟ ತಕತಕ ತಕಿಟ ತಕತಕ ತಕಿಟ ತಕತಕ = ಮೂರು ಮತ್ತು ನಾಲ್ಕು ಮಾತ್ರೆಯ ಗುಂಪು

ಮೂರು ಮಾತ್ರೆಯ ನಾಲ್ಕು ಗುಂಪು ಇರುವ ಪದ್ಯವನ್ನು ನೋಡಿ

U U U | – U | U U U | –U

ರಜೆಯ । ಗೌಜಿ । ಮುಗಿಯಿ । ತಲ್ಲ

– U | – U | UUU | –U

ಗುಲ್ಲು । ಸೊಲ್ಲು । ನಿಲಿಸಿ । ಮೆಲ್ಲ

– U | –U | –U | –U | –U | –U | –

ಮಕ್ಕ । ಳೆಲ್ಲ । ಸಿದ್ಧ । ರಾಗಿ । ಮತ್ತೆ । ಓದಿ । ಗೆ

ನಾಲ್ಕು ಮಾತ್ರೆಯ ಎರಡು ಗುಂಪು ಇರುವ ಪದ್ಯವನ್ನು ನೋಡಿ :

–U U | U U U U

ಬೇಸಿಗೆ । ರಜೆಯಲಿ

– U U | – U U

ಅಜ್ಜಿಯ । ಊರಿಗೆ

– U U | – U U | –

ಹೋಗುವು । ದೆಂಥಮ । ಜಾ

@KTBS NOT TO BE REPUBLISHED

### ಷಟ್ಪದಿ

'ಷಟ್' ಎಂದರೆ ಆರು 'ಪದಿ' ಎಂದರೆ ಪಾದದಿಂದ ಕೂಡಿದ್ದು. ಆರು ಪಾದ ಅಥವಾ ಸಾಲುಗಳಿಂದ ಕೂಡಿದ ಪದ್ಯರೂಪ ಷಟ್ಪದಿ. ಆರು ರೀತಿಯ ಷಟ್ಪದಿಗಳಿವೆ. ಅವುಗಳನ್ನು ಶರ,ಕುಸುಮ,ಭೋಗ, ಭಾಮಿನಿ, ಪರಿವರ್ಧಿನಿ ವಾರ್ಧಕ ಎಂದು ಕರೆಯಲಾಗುತ್ತದೆ. ಮಾತ್ರಾಗಣಗಳ ಆಧಾರದ ಮೇಲೆ ಷಟ್ಪದಿಗಳನ್ನು ಬೇರೆ ಬೇರೆ ಹೆಸರಿನಿಂದ ಕರೆಯಲಾಗಿದೆ.

–U U | – U U

೧. **ಬಾಳೆಯ । ತೋಟದ**

–U U | – U U

೨. **ಪಕ್ಕದ । ಕಾಡೊಳು**

– U U | –U U | – UU | –

೩. **ವಾಸಿಸು । ತಿದ್ದವು । ಮಂಗಗ । ಳು**

– ᑌᑌ | –ᑌᑌ

೪.  ಮಂಗಗ । ಳೆಲ್ಲವು

–ᑌᑌ | – ᑌᑌ

೫.  ಒಟ್ಟಗೆ । ಸೇರುತ

– ᑌ ᑌ | –ᑌᑌ | – ᑌᑌ | –

೬.  ಒಂದುಪ । ವಾಸವ । ಮಾಡಿದ । ವು

ಮೇಲಿನ ಪದ್ಯದಲ್ಲಿ ನಾಲ್ಕು ಮಾತ್ರೆಯ ಎರಡು ಗುಂಪು ೧,೨,೪ ಮತ್ತು ೫ನೆಯ ಸಾಲಿನಲ್ಲೂ ನಾಲ್ಕು ಮಾತ್ರೆಯ ಮೂರು ಗುಂಪು ೩ ಮತ್ತು ೬ನೆಯ ಸಾಲಿನಲ್ಲೂ ಇವೆ. ೩ ಮತ್ತು ೬ನೆಯ ಸಾಲಿನ ಕೊನೆಯಲ್ಲಿ ಒಂದು ಅಕ್ಷರ ಮಾತ್ರ ಇದೆ, ಒಂದೇ ಅಕ್ಷರವಾದರೂ ಅದಕ್ಕೆ ಎರಡು ಮಾತ್ರೆಯ ಕಾಲದ ಉಚ್ಚಾರಣೆಯಿದೆ. ಹಾಗೆ ಅದು ಗುರು, ಪದ್ಯ ಹೀಗಿದ್ದರೆ ಅದು ಶರಷಟ್ಪದಿ. ಇರುವ ಪದ್ಯವನ್ನು ಮುಂದೆ ನೋಡಿ....

ಈ ಪದ್ಯಕ್ಕೆ ಮಾತ್ರೆಗಳನ್ನು (ಪ್ರಸ್ತಾರ) ಹಾಕಿ:

೧.  ಹೂವನು/ಮಾರುತ
೨.  ಹೂವಾ।ಡಗಿತ್ತಿ
೩.  ಹಾಡುತ।ಬರುತಿಹ।ಳು;
೪.  ಘಮಘಮ/ಹೂಗಳು
೫.  ಬೇಕೇ/ಎನ್ನುತ/
೬.  ಹಾಡುತ/ಬರುತಿಹ/ಳು

**ಕುಮಾರವ್ಯಾಸ ಬಳಸಿರುವ ಛಂದಸ್ಸು ಭಾಮಿನೀ ಷಟ್ಪದಿ ಇದರ ಸ್ವರೂಪ ನೋಡಿ :**

ᑌᑌᑌ| ᑌ ᑌᑌᑌ| ᑌᑌᑌ | –ᑌᑌ  ೩।೪।೩।೪।

**ಹಸುಳೆ।ಯದಟನ। ನುಡಿಯ। ಕೇಳಿದು**

ᑌᑌᑌ | ᑌᑌ – | ᑌᑌᑌ | ᑌᑌ –  ೩।೪।೩।೪।

**ನಸುನ । ಗುತ ಧ । ರ್ಮಜನು । ಘನ ಪೌ**

ᑌᑌᑌ |ᑌᑌ – | – ᑌ | – ᑌᑌ | ᑌᑌᑌ | ᑌᑌ – | –  ೩।೪।೩।೪।೩।೪।೨।

**ರುಷವು ।ನಿನಗುಂ। ಟೆಂದು । ಕಂದನ । ತೆಗೆದು । ಬಿಗಿಯ । ಪ್ಪಿ**

ᑌᑌᑌ | – ᑌᑌ | ᑌ ᑌᑌ | – ᑌᑌ  ೩।೪।೩।೪।

**ಶಿಶುವು । ನೀನೆಲೆ । ಮಗನೆ । ಕಾದುವ**

ᑌᑌᑌ | ᑌᑌᑌ ᑌ | – ᑌ | – ᑌᑌ  ೩।೪।೩।೪।

**ರಸಮ । ಬಲರು ಕ । ಣಾ ಮ। ಹಾರಥ**

ᑌᑌᑌ | ᑌᑌ – | – ᑌ |– ᑌᑌ | – ᑌ | – – | –  ೩।೪।೩।೪।೩।೪।೨।

**ರೆಸುಗೆ । ಯನು ನೀ । ನೆಂತು ।ಸೈರಿಸ । ಲಾಪೆ । ಹೇಳೆಂ । ದ**

@KTBS NOT TO BE REPUBLISHED

ಮೇಲಿನ ಪದ್ಯದಲ್ಲಿ ಮೂರು|ನಾಲ್ಕು|ಮೂರು|ನಾಲ್ಕು|ಮಾತ್ರೆಯ ಗುಂಪು ೧,೨,೪ ಮತ್ತು ೫ನೆಯ ಸಾಲಿನಲ್ಲೂ ಮೂರು|ನಾಲ್ಕು|ಮೂರು|ನಾಲ್ಕು|ಮೂರು|ನಾಲ್ಕು|ಮಾತ್ರೆಯ ಮೂರು ಗುಂಪು ೩ ಮತ್ತು ೬ನೆಯ ಸಾಲಿನಲ್ಲೂ ಇವೆ. ೩ ಮತ್ತು ೬ನೆಯ ಸಾಲಿನ ಕೊನೆಯಲ್ಲಿ ಒಂದು ಅಕ್ಷರ ಮಾತ್ರ ಇದೆ, ಒಂದೇ ಅಕ್ಷರವಾದರೂ ಅದಕ್ಕೆ ಎರಡು ಮಾತ್ರೆಯ ಕಾಲದ ಉಚ್ಚಾರಣೆಯಿದೆ. ಹಾಗೆ ಅದು ಗುರು. ಪದ್ಯ ಹೀಗಿದ್ದರೆ ಅದು ಭಾಮಿನೀ ಷಟ್ಪದಿ. ಇರುವ ಪದ್ಯವನ್ನು ನೋಡಿ ಮತ್ತು ಈ ಪದ್ಯಕ್ಕೆ ಮಾತ್ರೆಗಳನ್ನು (ಪ್ರಸ್ತಾರ) ಹಾಕಿ.

ಬಾಲನಿವನೆನ್ನದಿರು ದುಗುಡವ

ತಾಳಲಾಗದು ಬೊಪ್ಪ ನಿಮ್ಮಡಿ

ಯಾಲಿಗಳಿಗೌತಣವನಿಕ್ಕುವೆನೊರಸಿ ರಿಪುಬಲವ

**ಚೆನ್ನುಡಿ**

**"ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ–ಈ ಪಂಚಮಂತ್ರಗಳು ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ. ಅಂದರೆ, ನಮಗೆ ಇನ್ನು ಬೇಕಾದುದು ಆ ಮತ ಈ ಮತ ಅಲ್ಲ; ಮನುಜಮತ. ಆ ಪಥ ಈ ಪಥ ಅಲ್ಲ; ವಿಶ್ವಪಥ. ಆ ಒಬ್ಬರ ಈ ಒಬ್ಬರ ಉದಯ ಮಾತ್ರವಲ್ಲ; ಸರ್ವರ ಸರ್ವಸ್ತರದ ಉದಯ. ಪರಸ್ಪರ ವಿಮುಖವಾಗಿ ಸಿಡಿದು ಹೋಗುವುದಲ್ಲ; ಸಮನ್ವಯಗೊಳ್ಳುವುದು. ಮಿತಮತದ ಆಂಶಿಕ ದೃಷ್ಟಿಯಲ್ಲ; ಭೌತಿಕ, ಪಾರಮಾರ್ಥಿಕ ಎಂಬ ಭಿನ್ನ ದೃಷ್ಟಿಯಲ್ಲ; ಎಲ್ಲವನ್ನೂ ಭಗವದ್ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ".**

–ಕುವೆಂಪು (ಜ್ಞಾನಪೀಠ, ಕರ್ನಾಟಕ ರತ್ನ ಮುಂತಾದ ಪ್ರಶಸ್ತಿಗಳಿಂದ ಪುರಸ್ಕೃತರಾದ ರಾಷ್ಟ್ರಕವಿ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ)

© KTBS NOT TO BE REPUBLISHED

# ೩. ಸಾವಿತ್ರಿಬಾಯಿ ಫುಲೆ

– ಡಾ. ಎಚ್.ಎಸ್. ಅನುಪಮ

ಒಂದೂವರೆ ಶತಮಾನದ ಹಿಂದೆ..

ಅದಿನ್ನೂ ಸ್ವಾತಂತ್ರ್ಯ ಚಳುವಳಿ ರೂಪುಗೊಳ್ಳದಿದ್ದ ಕಾಲ. ಗಾಂಧಿ, ಅಂಬೇಡ್ಕರರಂಥ ದೂರದೃಷ್ಟಿಯ ಜನನಾಯಕರು ಹುಟ್ಟಿರದಿದ್ದ ಕಾಲ. ಆಳುವವರ ನಿರಂತರ ಬದಲಾವಣೆಯಿಂದ ಕ್ಷೋಭೆಗೊಂಡ ಸಮಾಜ ಸ್ವವಿಮರ್ಶೆಯನ್ನು ಮರೆತಂಥ ಕಾಲ. ಬಂಗಾಲ ಮತ್ತು ಉತ್ತರ ಭಾರತದ ಕೆಲ ಸಮಾಜ ಸುಧಾರಕರು ಇಂಗ್ಲಿಷ್ ಶಿಕ್ಷಣ ಪಡೆದು ಆಗಷ್ಟೇ ಭಾರತದ ಸಾಮಾಜಿಕ ಅನಿಷ್ಟಗಳ ಬಗೆಗೆ ಮಾತನಾಡತೊಡಗಿದ್ದರು. ಬಾಲ್ಯವಿವಾಹ ಹಾಗೂ ಸತಿಪದ್ಧತಿಯ ರದ್ಧತಿ ಕುರಿತು ಕೇಳಿ ಬರತೊಡಗಿದ್ದವು. ಅಕ್ಷರ ಕಲಿಯಲು ತಾವು ಮಾತ್ರ ಅರ್ಹ ಎಂದುಕೊಂಡ ಜಾತಿಗಳ ಹೊರತು ಮತ್ತಾರಿಗೂ ಕಲಿಕೆಗೆ ಅವಕಾಶವಿರಲಿಲ್ಲ. ಆ ಕಾಲದ ಮಹಿಳೆಯರ ಶಿಕ್ಷಣ ಕುರಿತು ಹೇಳುವಂತೆಯೇ ಇಲ್ಲ. "ಹೆಣ್ಣು ಅಕ್ಷರ ಕಲಿತರೆ ಎಲ್ಲರಿಗೂ ಪತ್ರ ಬರೆಯತೊಡಗುತ್ತಾಳೆ, ಆಗ ಅವಳ ಗಂಡ ತಿನ್ನುವ ಅನ್ನದ ಅಗುಳು ಹುಳವಾಗಿ ಅವನು ಕಾಯಿಲೆ ಹಿಡಿದು ಬೇಗ ತೀರಿಕೊಳ್ಳುತ್ತಾನೆ" ಎಂದು ಹೇಳಲಾಗುತ್ತಿತ್ತು. ಹೆಣ್ಣು ಮಗು ತನ್ನ ಬಾಲ್ಯದ ಮುಗ್ಧತೆಯಲ್ಲಿ ಈ ಜಗತ್ತಿಗೆ ಕಣ್ಣಿಡುವ ಹೊತ್ತಿಗೆ ಅವಳ ಮದುವೆಯಾಗಿ, ಯಾರದೋ ಹೆಂಡತಿಯಾಗಿ, ಸೊಸೆಯಾಗಿ ಕೊನೆಗೆ ಅಮ್ಮನಾಗಿ ಬಿಟ್ಟಿರುತ್ತಿದ್ದಳು. ಕುಟುಂಬ ನಿರ್ವಹಣೆಗಾಗಿ, ಕುಟುಂಬ ನಿರ್ವಹಣೆಯಿಂದಲೇ ಅವಳ ವ್ಯಕ್ತಿತ್ವ ರೂಪುಗೊಂಡು ಅಲ್ಲೇ ಕಳೆದುಹೋಗುತ್ತಿತ್ತು. ಹೆಣ್ಣು ಮಕ್ಕಳು ಯಾವತ್ತೂ ಪ್ರಶ್ನಿಸಬಾರದಂತೆ ಹೊರುವ, ಹೆರುವ, ಪೊರೆಯುವ ಕೊನೆಮೊದಲಿಲ್ಲದ ಕೆಲಸಗಳಲ್ಲಿ ಅವರನ್ನು ತೊಡಗಿಸಲಾಗುತ್ತಿತ್ತು. ಒಟ್ಟಾರೆ ಹೇಳುವುದಾದರೆ ದಲಿತ-ಶೂದ್ರ, ಮಹಿಳೆಯರಿಗೆ ಶಾಲೆ ಎನ್ನುವುದು ಕನಸಿನಲ್ಲೂ ಮೂಡಲಾಗದ ಅಸ್ಪಷ್ಟ ಕಲ್ಪನೆಯಾಗಿಯೇ ಉಳಿದಿತ್ತು.



ಈ ಪರಿಸ್ಥಿತಿ ಇರುವ ಕಾಲದಲ್ಲಿಯೇ ಸಾವಿತ್ರಿಬಾಯಿ ಫುಲೆಯವರು ಮಹಾರಾಷ್ಟ್ರದ ಸತಾರ ಜಿಲ್ಲೆಯ ನಾಯಗಾಂವ ಹಳ್ಳಿಯಲ್ಲಿ ೧೮೩೧ ಜನವರಿ ೩ ರಲ್ಲಿ ಜನಿಸಿದರು. ಸಾವಿತ್ರಿ ಬಾಯಿಯ ವರಿಗೆ ೯ ವರ್ಷವಾದಾಗ ಮದುವೆಯಾಯಿತು. ಅವರನ್ನು ಮದುವೆಯಾದ ಹುಡುಗ ಸಾಮಾನ್ಯ ವರನಾಗಿರಲಿಲ್ಲ. ಅವರು ಇಂಗ್ಲಿಷ್ ಕಲಿತು ಅರಿವಿನ ಸ್ಫೋಟಕ್ಕೆ ಒಳಗಾಗಿದ್ದ ಜ್ಯೋತಿಬಾ ಫುಲೆ. ಶಾಲೆ ಕಲಿಯದ ಹೆಂಡತಿ ಸಾವಿತ್ರಿರವರಿಗೆ ಗಂಡನೇ ಮೊದಲ ಶಿಕ್ಷಕರಾಗಿ ಅಕ್ಷರ ಕಲಿಸಿದರು. ನಂತರ ಜ್ಯೋತಿಬಾ ಫುಲೆಯವರು ಅಸ್ಪೃಶ್ಯ ಹಾಗೂ ತಳ ಸಮುದಾಯದ ಮಕ್ಕಳಿಗೆಂದು ಶಾಲೆ ತೆರೆದಾಗ ಗಂಡುಮಕ್ಕಳಂತೆಯೇ ಹೆಣ್ಣುಮಕ್ಕಳಿಗೂ ಶಿಕ್ಷಣದ ಅವಶ್ಯಕತೆ ಇದೆ

©KTBS NOT TO BE REPUBLISHED

ಎಂದು ಅರಿತರು. ಹೆಣ್ಣುಮಕ್ಕಳ ಶಾಲೆ ತೆರೆಯಲು ಶಿಕ್ಷಕಿಯರ ಕೊರತೆಯಿತ್ತು. ಆಗ ಜ್ಯೋತಿಬಾ ಫುಲೆ ರವರು ಶಿಕ್ಷಕ ತರಬೇತಿ ಪಡೆಯಲೆಂದು ಸಾವಿತ್ರಿಬಾಯಿಯವರನ್ನು ಅಹ್ಮದ್ ನಗರದ ಫಾರ್ಮಲ್ ಸ್ಕೂಲಿಗೆ ಕಳಿಸಿದರು. ಸಾವಿತ್ರಿಬಾಯಿಯವರ ಜೊತೆಗೆ ಫಾತಿಮಾ ಶೇಕ್ ಎನ್ನುವ ಮಹಿಳೆಯೂ ತರಬೇತಿ ಪಡೆದು ನಂತರ ಜ್ಯೋತಿಬಾ ಫುಲೆಯವರ ಶಾಲೆಗಳಲ್ಲಿ ಕೆಲಸ ಮಾಡಿದರು.

ತರಬೇತಿ ಮುಗಿಸಿ ಸಾವಿತ್ರಿಬಾಯಿಯವರು ಬಂದ ಮೇಲೆ ೯ ವಿದ್ಯಾರ್ಥಿಗಳೊಂದಿಗೆ ಪುಣೆಯಲ್ಲಿ ೧೮೪೮ರಲ್ಲಿ ಮೊದಲ ಶಾಲೆ ಶುರುಮಾಡಿದರು. ಅಹ್ಮದ್ ನಗರದ ಸದಾಶಿವ ಗೋವಂದೆ ಮಕ್ಕಳಿಗೆ ಉಚಿತ ಪುಸ್ತಕ ಒದಗಿಸಿದರು. ಆದರೆ ಶಾಲೆಗಾಗಿ ಸ್ಥಳ ಕೊಡುವವರು ಮನಸ್ಸು ಬದಲಾಯಿಸುತ್ತ ಇದ್ದುದ್ದರಿಂದ ಶಾಲೆಯೂ ನಿರಂತರ ಸ್ಥಳ ಬದಲಾಯಿಸುತ್ತ, ಮುಚ್ಚುತ್ತ–ತೆರೆಯುತ್ತ ಹೋಯಿತು. ೧೮೫೧ರಲ್ಲಿ ಎರಡನೇ ಶಾಲೆ ಶುರುವಾಯಿತು. ೧೮೫೨ರಲ್ಲಿ ಮಹಿಳಾ ಸೇವಾಮಂಡಲ ಶುರುವಾಯಿತು. ಧಾರ್ಮಿಕ, ಆಧ್ಯಾತ್ಮಿಕ ವ್ಯಕ್ತಿಯಾಗಿದ್ದ ಸಾವಿತ್ರಿಬಾಯಿಯವರು ತಾವು ಮಾಡುತ್ತಿರುವ ಕೆಲಸದ ಬಗೆಗೆ ಅಚಲ ಶ್ರದ್ಧೆಯನ್ನಿಟ್ಟುಕೊಂಡಿದ್ದರು. ಶಾಲೆಗೆ ಹೋಗುವಾಗ ದಾರಿ ಮೇಲೆ ತೂರಿ ಬರುವ ಕಲ್ಲು, ಮಣ್ಣು, ಸಗಣಿಗಳ ದಾಳಿಗೆ ಎದೆಗುಂದದೇ ಪಾಠ ಹೇಳಿದರು.

ಫುಲೆ ದಂಪತಿಗಳು ಒಂದಾದ ಮೇಲೊಂದು ಶಾಲೆ ತೆರೆಯತೊಡಗಿದಾಗ ಅಕ್ಷರ ಕಲಿಯಬಾರದವರಿಗೆ ಕಲಿಸುತ್ತ ಧರ್ಮದ್ರೋಹ ಮಾಡುತ್ತಿದ್ದಾರೆ ಎಂಬ ಆಪಾದನೆಗಳು ಬಂದವು. ಬೆದರಿಕೆಗಳೂ ಬಂದವು. ಅದೆಲ್ಲದರಿಂದ ಒತ್ತಡಕ್ಕೊಳಗಾದ ಜ್ಯೋತಿಬಾ ಫುಲೆಯವರ ತಂದೆ ಮಗಸೊಸೆಯನ್ನು ಮನೆಯಿಂದ ಹೊರಕಳಿಸಿದರು. ಯುವದಂಪತಿ ಅಂಜದೆ ಬೇರೆ ಮನೆ ಮಾಡಿಕೊಂಡರು. ಸಾವಿತ್ರಿ ಬಾಯಿಯವರ ಅಣ್ಣ ಕೂಡಾ ಅಸ್ಪೃಶ್ಯರಿಗೇಕೆ ಶಿಕ್ಷಣ ಕೊಡುತ್ತಿದ್ದೀ ಎಂದು ಅವರ ಬಳಿ ವಾದಿಸಿದ್ದರು. ಬಂಧುಬಳಗಕ್ಕೂ ಹಿತೈಷಿಗಳಿಗೂ ಉತ್ತರಿಸುತ್ತ, ಮನವೊಲಿಸುತ್ತ ಫುಲೆ ದಂಪತಿಗಳು ತಮ್ಮ ಕೆಲಸ ಮುಂದುವರೆಸಿದರು.

ಬೋಧಿಸುವವರು ಎಷ್ಟು ಯಶಸ್ವಿ ಎಂದು ತಿಳಿಯಬೇಕಾದರೆ ಅವರ ಶಿಷ್ಯಗಣವನ್ನು ನೋಡಬೇಕಲ್ಲವೇ? ಫುಲೆ ಶಾಲೆಯಲ್ಲಿ ಕಲಿತ ಹೆಣ್ಣುಮಕ್ಕಳು ವೈಚಾರಿಕ ಜಾಗೃತಿ ಪಡೆದು ಕೆಲವರು ಬರಹಗಾರರಾದರು. ಭಾರತದ ಮೊತ್ತಮೊದಲ ಸ್ತ್ರೀವಾದಿ ಲೇಖಕಿ ತಾರಾಬಾಯಿ ಶಿಂಧೆ ಇವರ ಶಿಷ್ಯೆ. ಅವರು ಬರೆದ 'ಸ್ತ್ರೀ–ಪುರುಷ ತುಲನ' ಎಂಬ ಪುಟ್ಟ ಹೊತ್ತಗೆ ಇವತ್ತಿಗೂ ದಿಟ್ಟವಾಗಿ ಯುವತಿಯೊಬ್ಬಳು ಬರೆದ ಮೊದಲ ಭಾರತೀಯ ಸ್ತ್ರೀವಾದಿ ಬರಹವಾಗಿದೆ. ಮತ್ತೊಬ್ಬ ದಲಿತ ವಿದ್ಯಾರ್ಥಿನಿ ಮುಕ್ತಾಬಾಯಿಯವರು ಪ್ರಬಂಧಗಳು, ಹುಡುಗಿಯರು ಪಡೆಯುತ್ತಿದ್ದ ಅರಿವಿನ ಶಿಕ್ಷಣದ ಗುಣಮಟ್ಟ ತಿಳಿಸುತ್ತದೆ.

ಅದುವರೆಗೂ ಅಸ್ಪೃಶ್ಯ ಸಮುದಾಯದ ಜನ ಬಾಯಾರಿದಾಗ ಹನಿ ನೀರನ್ನು ತಂತಾವೇ ಕೆರೆ, ಬಾವಿ, ನದಿಗಳಿಂದ ತೆಗೆದುಕೊಳ್ಳುವಂತಿರಲಿಲ್ಲ. ಫುಲೆ ದಂಪತಿಗಳು ೧೮೬೮ರಲ್ಲಿ ಎಲ್ಲರಿಗೂ ಬಳಕೆಗೆ ಮುಕ್ತವಾದ ನೀರಿನ ತೊಟ್ಟಿ ಕಟ್ಟಿದರು. ಜಾತಿ ತಾರತಮ್ಯ ಮತ್ತು ಶೋಷಣೆಯನ್ನು ಕೊನೆಗೊಳಿಸಬೇಕೆಂದರೆ ಚಿಂತನಾಶೀಲತೆಯನ್ನು, ಸತ್ಯ ತಿಳಿಯಬೇಕೆಂಬ ಹಂಬಲವನ್ನು ಜನರಲ್ಲಿ

©KTBS NOT TO BE REPUBLISHED

ಬಿತ್ತಬೇಕೆಂಬ ಮಹದಾಸೆಯಿಂದ ೧೮೭೩ ರಲ್ಲಿ 'ಸತ್ಯಶೋಧಕ ಸಮಾಜ' ಕಟ್ಟಿದರು. ಅದರ ಮೂಲತತ್ವ 'ನಾವೆಲ್ಲರೂ ದೇವರ ಮಕ್ಕಳು; ದೇವರಿಗೂ ನಮಗೂ ಯಾವ ಮಧ್ಯವರ್ತಿಯ ಅವಶ್ಯಕತೆಯೂ ಇಲ್ಲ' ಎನ್ನುವುದು. ಅದೇ ವರ್ಷ ಪುರೋಹಿತರಿಲ್ಲದೆ ಮೊದಲ ಮದುವೆ ಮಾಡಿಸಿದರು. ೧೮೭೪ರಲ್ಲಿ ಬ್ರಾಹ್ಮಣ ವಿಧವೆ ಕಾಶೀಬಾಯಿಯವರ ಮಗ ಯಶವಂತನನ್ನು ದತ್ತು ತೆಗೆದುಕೊಂಡು ಸಾಕಿದರು. ಮುಂದೆ ಆತ ಓದಿ ವೈದ್ಯನಾದ.

ಇಂಥ ಸಂಕಟಕಾಲದಲ್ಲಿ ಮಕ್ಕಳಲ್ಲಿ ವೈಚಾರಿಕ ಮನೋಭಾವ ಬೆಳೆಸುವ, ಜಾತ್ಯತೀತ ಮೌಲ್ಯ ತುಂಬುವ ಅವಶ್ಯಕತೆಯಿದೆ. ನೆಲದಾಳದಲ್ಲಿ ಇಂದಿಗೂ ಅಲ್ಲೆಲ್ಲೋ ಇರುವ ಶುದ್ಧಜಲವನ್ನು, ಜಲದ ಕಣ್ಣನ್ನು ಅರಸಬೇಕಿದೆ. ಅಲ್ಪಸೂಚಿಯ ಕೆಲಸವನ್ನು ಶಿಕ್ಷಕಬಂಧುಗಳು ನಿಭಾಯಿಸಬೇಕಾಗಿದೆ. ದಿಕ್ಸೂಚಿಯಾಗಬಲ್ಲ, ಸತ್ಯದರ್ಶಿಯಾಗಬಲ್ಲ ಶಿಕ್ಷಣ ನೀಡುವಂಥ ಅತಿ ಮಹತ್ತರ ಜವಾಬ್ದಾರಿ ಶಿಕ್ಷಕರ ಮೇಲಿದೆ.

## ಕೃತಿಕಾರರ ಪರಿಚಯ



ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ವೇದಿಕೆ 'ಮಂಥನ'ದ ಸಂಚಾಲಕರಾದ ಡಾ. ಎಚ್.ಎಸ್. ಅನುಪಮ ವೃತ್ತಿಯಲ್ಲಿ ವೈದ್ಯರು. ಇವರ ಸ್ಥಳ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನ ಹೆಬ್ಬಾಗಿಲು. ಜನಿಸಿದ್ದು ೬-೨-೧೯೭೦ರಲ್ಲಿ. 'ಕಾಡುಹಕ್ಕಿಯ ಹಾಡು' ಮತ್ತು 'ಸಹಗಮನ' (ಕವನ ಸಂಕಲನ), 'ಹೂವರಳಿದ್ದಕ್ಕೆ ಯಾಕೆ ಸಾಕ್ಷಿ?' (ಕಥಾ ಸಂಕಲನ), 'ಜೀವಕೋಶ' ವೈದ್ಯಲೋಕದ ಕಥನ (ಚಿಂತನ ಬರೆಹ), 'ನೈಲ್ ನದಿಯಗುಂಟ ಶರಾವತಿಯನರಸುತ್ತ' ಮತ್ತು 'ಅಂಡಮಾನ್: ಕಂಡ ಹಾಗೆ' (ಪ್ರವಾಸ ಕಥನ), 'ಛತ್ರಪತಿ ಶಾಹೂ: ಜನರ ನೋವಿಗೆ ಮಿಡಿದ ಪ್ರಾಣಮಿತ್ರ' ಮತ್ತು 'ಕ್ರಾಂತಿಜ್ಯೋತಿ ಸಾವಿತ್ರಿಬಾಯಿ ಫುಲೆ' (ಜೀವನ ಚರಿತ್ರೆ)- ಇವು ಪ್ರಮುಖ ಕೃತಿಗಳು. ಇವರ 'ನೋಯುವ ಹಲ್ಲಿಗೆ ಹೊರಳುವ ನಾಲಿಗೆ' ಎಂಬ ಅಂಕಣ ಬರಹ ಜನಪ್ರಿಯವಾಗಿದೆ. ಇವರಿಗೆ 'ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ' ದೊರೆತಿದೆ.

ಪ್ರಸ್ತುತ ಗದ್ಯಭಾಗವನ್ನು ಡಾ. ಎಚ್.ಎಸ್. ಅನುಪಮ ಅವರ 'ಕ್ರಾಂತಿಜ್ಯೋತಿ ಸಾವಿತ್ರಿಬಾಯಿ ಫುಲೆ' ಎಂಬ ಜೀವನ ಚರಿತ್ರೆಯಿಂದ ಆರಿಸಿಕೊಳ್ಳಲಾಗಿದೆ.

@KTBS NOT TO BE REPUBLISHED

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಸಾವಿತ್ರಿಬಾಯಿಯವರು ಯಾವ ಊರಿನಲ್ಲಿ ಜನಿಸಿದರು?

೨. ಸಾವಿತ್ರಿಬಾಯಿಯವರ ಮೊದಲನೆಯ ಗುರು ಯಾರಾಗಿದ್ದರು?

೩. ಭಾರತದ ಮೊತ್ತಮೊದಲ ಸ್ತ್ರೀವಾದಿ ಲೇಖಕಿ ಯಾರು?

೪. ಸತ್ಯಶೋಧಕ ಸಮಾಜದ ಮೂಲತತ್ವವೇನು?

೫. ಫುಲೆ ದಂಪತಿಗಳು ಯಾರನ್ನು ದತ್ತು ಪಡೆದರು?

# ೪. ರಮ್ಯಸೃಷ್ಟಿ

– ಮಧುರಚೆನ್ನ

ಮಹಾಕಾಶ ಶಿರದ ಮೇಲೆ
ಆಹಾ–ಪೃಥ್ವಿ ರಮ್ಯ ಮುಂದೆ
ಬಾನುಭೂಮಿ ಅಪ್ಪಿದಲ್ಲಿ
ಏನು ರಮ್ಯ ದೂರದಲ್ಲಿ

ಪ್ರಭಾಮಯನು ವಿಭಾಕರನು
ನಭಾಂಗಣದಿ ವಿರಾಜಿಪನು
ಹಾಲು ಮೋಡ ಅಲ್ಲಿ ಇಲ್ಲಿ
ನೀಲಗಗನ ಅಲ್ಲಿ ಇಲ್ಲಿ

ಹೊನ್ನ ಬಿಸಿಲು ಸೂಸಿ ಸೂಸಿ
ರನ್ನನೆಲದಿ ಹಾಸಿ ಹಾಸಿ
ತರುವು ಹಸಿರು ಮರವು ಹಸಿರು
ಮೆರೆವ ಹುಲ್ಲು ಹಚ್ಚಹಸಿರು

ಮರದ ಸಾಲು ಮೇವ ಮೇಕೆ
ತೆರೆದ ಹಕ್ಕಿ ಏನು ಚೆಲುವು
ಎತ್ತು ಎಮ್ಮೆ ಆಡು ಆವು
ಚಿತ್ತಗೊಟ್ಟು ಮೇವ ರೀವು

ಹೆಣ್ಣು ಗಂಡು ಕೂಸು ಕುನ್ನಿ
ದಿನ್ನಿ ದಿಬ್ಬ ಹಾದಿ ಬೀದಿ
ಏನು ಚಂದ ಏನು ಚೆಲುವು
ಏನು ಬೇಕು ಇದಕು ಮಿಗಿಲು

ಮಹಾಕಾಶ ಶಿರದ ಮೇಲೆ
ಆಹಾ–ಪೃಥ್ವಿ ರಮ್ಯ ಮುಂದೆ
ಬಾನು ಭೂಮಿ ಅಪ್ಪಿದಲ್ಲಿ
ಏನು ರಮ್ಯ ದೂರದಲ್ಲಿ

@KTBS NOT TO BE REPUBLISHED

## ಕೃತಿಕಾರರ ಪರಿಚಯ



**ಮಧುರಚೆನ್ನ** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ಚನ್ನಮಲ್ಲಪ್ಪ ಹಲಸಂಗಿ** ಅವರು **(ಸಾ. ಶ. ೧೯೦೩) ವಿಜಯಪುರ ಜಿಲ್ಲೆ ಇಂಡಿ ತಾಲೂಕಿನ ಹಲಸಂಗಿ ಗ್ರಾಮ**ದವರು. ಮುಲ್ಕಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ ಇವರು ಸ್ವಂತ ಪರಿಶ್ರಮದಿಂದ **ಬಂಗಾಳಿ, ಇಂಗ್ಲಿಷ್, ಮರಾಠಿ, ಗುಜರಾತಿ, ತಮಿಳು, ಪರ್ಷಿಯನ್** ಭಾಷೆಗಳನ್ನು ಕಲಿತರು. ಜಾನಪದ ಮತ್ತು ವಚನವಾಙ್ಮಯವನ್ನು ವಿಸ್ತಾರವಾಗಿ ಅಧ್ಯಯನ ಮಾಡಿದ್ದರು. **ಪೂರ್ವರಂಗ, ಪೂರ್ವಯೋಗದ ಪಥದಲ್ಲಿ, ಕಾಳರಾತ್ರಿ, ಬೆಳಗು** ಇವರ ಪ್ರಮುಖ ಕೃತಿಗಳು. **ನನ್ನ ನಲ್ಲ** – ಕವನ ಸಂಕಲನ. ಜನಪದಗೀತೆಗಳ ಸಂಕಲನಗಳನ್ನು ಸಂಪಾದಿಸಿದ್ದಾರೆ. ಸಿಂಪಿಲಿಂಗಣ್ಣನವರೊಂದಿಗೆ **ಕನ್ನಡದ ಕುಲಗುರು ವಿದ್ಯಾರಣ್ಯ** ಕೃತಿಯನ್ನು ರಚಿಸಿದ್ದಾರೆ.

@KTBS NOT TO BE REPUBLISHED

## ಅಭ್ಯಾಸ

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. 'ರಮ್ಯಸೃಷ್ಟಿ' ಕವಿತೆಯಲ್ಲಿ ಯಾವ ಸಂದರ್ಭವನ್ನು ವರ್ಣಿಸಲಾಗಿದೆ?

೨. ಸೂರ್ಯ ಎಲ್ಲಿ ವಿರಾಜಿಸುತ್ತಿದ್ದಾನೆ?

೩. ಸೂರ್ಯೋದಯದ ಪ್ರಕೃತಿಸೌಂದರ್ಯ ಹೇಗಿದೆ?

೪. ಜೀವರಾಶಿಯ ವರ್ಣನೆ 'ರಮ್ಯಸೃಷ್ಟಿ' ಕವನದಲ್ಲಿ ಹೇಗೆ ಮೂಡಿಬಂದಿದೆ?

೫. 'ರಮ್ಯಸೃಷ್ಟಿ' ಪದ್ಯದಲ್ಲಿ ಯಾವ ಯಾವ ಪ್ರಾಣಿಗಳು ಮೇಯುವ ರೀತಿಯನ್ನು ವರ್ಣಿಸಲಾಗಿದೆ?

೬. ಯಾವುದರ ಚೆಲುವಿಗೆ ಮಿಗಿಲಿಲ್ಲದಂತಾಗಿದೆ?

# ೫. ನನ್ನ ಬಾಲ್ಯ

– ಏಣಗಿ ಬಾಳಪ್ಪ

**ನಿರೂಪಣೆ : ಡಾ. ಗಣೇಶ ಅಮೀನಗಡ**

**ಪ್ರವೇಶ:** ಕಲೆಗಳಲ್ಲಿ ರಂಗಕಲೆಯ ಸ್ಥಾನ ಬಲು ಹಿರಿದು. ಮಾತುಗಾರಿಕೆ, ನಟನೆ, ವೇಷಭೂಷಣ ಇಲ್ಲಿ ಮುಖ್ಯ. ನಾಟಕದ ಕಲಾವಿದರು ನೋಡುಗರ ಮನಸ್ಸನ್ನು ತಿಳಿದವರಾಗಿರುತ್ತಾರೆ. ಇಲ್ಲಿ ಸ್ನೇಹ, ಆರಾಧನೆಗೆ ಮೊದಲ ಸ್ಥಾನ. ರಂಗಕಲಾವಿದರು ರಾಗಋಷಿಗಳು. ಕಷ್ಟದಲ್ಲೂ ಸಂತೋಷವನ್ನು ಕಾಣುತ್ತಾ ಕಲಾರಸಿಕರನ್ನು ಸಂತೋಷಪಡಿಸುತ್ತಾ ಬಾಳುತ್ತಾರೆ. ಜನಮನದಲ್ಲಿ ಶಾಶ್ವತವಾಗಿ ಉಳಿಯುತ್ತಾರೆ.

ನಾನೊಬ್ಬ ರಂಗಭೂಮಿಯ ಸಾಮಾನ್ಯ ನಟ. ನಟನು ಯಾವಾಗಲೂ ಸಮುದಾಯದ ಎದುರಿನಲ್ಲಿಯೇ ನಟನಾಗಿ ಬಾಳುತ್ತಾನೆ. ಈ ಸಮುದಾಯದ ಆಶ್ರಯ ತಪ್ಪಿದರೆ ನಟ ಬದುಕಿರಲಾರ. ಮೀನಿಗೆ ನೀರಿನ ಸಂಗವಿದ್ದಂತೆ ನಟನಿಗೆ ಪ್ರೇಕ್ಷಕರ ಸಂಗವಿರುತ್ತದೆ.



ನಟನಾಗಿರುವುದು ನಿಂತು ಹೋಗಿ ಪ್ರೇಕ್ಷಕರ ಸಮ್ಮುಖತೆ ತಪ್ಪಿ ಬಹಳ ದಿನಗಳಾಗಿದ್ದರೂ ನನ್ನನ್ನು ಇಂದಿಗೂ ಸಮುದಾಯದ ಎದುರಿಗೆ ರಂಗಕರ್ಮಿಯಾಗಿ ನಿಲ್ಲಿಸುತ್ತಿರುವುದರಿಂದ ಜೀವನವು ನನ್ನ ಪಾಲಿಗೆ ಎಷ್ಟೊಂದು ಉದಾರವಾಗಿ ವರ್ತಿಸಿದೆ ಎಂದು ಗೊತ್ತಾಗುತ್ತದೆ. ಜನರು ನನಗೆ ತೋರಿರುವ ಮತ್ತು ಈಗಲೂ ತೋರುತ್ತಿರುವ ಪ್ರೀತಿಯಿಂದ ನನ್ನ ಕಂಠ ಕೃತಜ್ಞತೆಯಿಂದ ಬಿಗಿದು ಬರುತ್ತದೆ. ಈ ಪ್ರಸಂಗದಲ್ಲಿ ಏನೇನೋ ಹೇಳಬೇಕು ಎನಿಸಿದರೂ ಸಮಾಜದ ಋಣಭಾರದಿಂದ ನನಗೆ ಮಾತೇ ಬರದಂತಾಗಿದೆ. ಎಷ್ಟೊಂದು ಜನರ ಋಣ ನನ್ನ ಮೇಲಿದೆ. ಅವರ ಪ್ರೀತಿ ಅಪಾರವಾದುದು. ಅದನ್ನು ಸ್ವೀಕರಿಸಲು ನನ್ನ ಜೋಳಿಗೆ ಚಿಕ್ಕದು. ನನ್ನನ್ನು ಕಲಾವಿದನನ್ನಾಗಿ ಮಾಡಿದ ಪರಿಯು ಚಿತ್ರಪಟದಂತೆ ನನ್ನ ಕಣ್ಮುಂದೆ ನಿಂತಿದೆ.

ನಾನು ಒಂದು ತೀರ ಸಾದಾ ಕುಟುಂಬದಲ್ಲಿ ೧೯೧೪ರಲ್ಲಿ ಹುಟ್ಟಿದವ. ತಾರೀಖು ಗೊತ್ತಿಲ್ಲ. ಅವ್ವ ಬಾಳಮ್ಮ, ತಂದೆ ಕರಿಬಸಪ್ಪ. ಇವರಿಗೆ ನಾವು ಮೂರು ಮಕ್ಕಳು. ಅಣ್ಣ ಬಸಪ್ಪ, ಅಕ್ಕ ವೀರವ್ವ ಮತ್ತು ನಾನು. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಏಣಗಿ ನನ್ನೂರು. ನಮಗೆ ಪೂರ್ವಾರ್ಜಿತವಾಗಿ ಹದಿನಾಲ್ಕು ಎಕರೆ ಹೊಲವಿತ್ತು. ಅದು ಬಾಗಾಯತಲ್ಲ ಅಥವಾ ನೀರಾವರಿಯಲ್ಲ. ತಂದೆ ಇದ್ದಿದ್ದರೆ ಅಷ್ಟರಲ್ಲಿಯೇ ಉಂಡುಟ್ಟು ಬದುಕಬಹುದಿತ್ತೇನೋ. ಆದರೆ ನನ್ನ ಬಾಲ್ಯದಲ್ಲಿ ಆ ಭಾಗ್ಯ ನನಗಿಲ್ಲವಾಯಿತು. ನಾನು ಹುಟ್ಟಿದ ಮೂರು ವರ್ಷಕ್ಕೆ ತಂದೆ ತೀರಿಕೊಂಡರು. ೧೨–೧೩ ವರ್ಷದವನಿದ್ದಾಗ ಅಕ್ಕ, ಅಣ್ಣನು ತೀರಿಕೊಂಡರು. ಹೊಲವು ಸಾಲದಲ್ಲಿ ಒತ್ತೆ ಬಿತ್ತು. ನನ್ನ ತಾಯಿ ಸ್ವಲ್ಪ ಸ್ಥಿತಿವಂತರ ಮನೆಯಿಂದ ಬಂದವಳು.

©KTBS NOT TO BE REPUBLISHED

ಅದರಿಂದ ಅವಳಿಗೆ ಹೊಲದಲ್ಲಿ ಕೂಲಿಮಾಡುವ ಅಭ್ಯಾಸವಿರಲಿಲ್ಲ. ಆದರೆ ದುರ್ದೈವ ಆಕೆಯಿಂದ ಅದನ್ನೂ ಮಾಡಿಸಿತು.

ನನ್ನ ಅವ್ವ ಬೇರೆಯವರ ಹೊಲದಲ್ಲಿ ಕೆಲಸಕ್ಕೆ ಹೋಗಲು ಮನಸ್ಸು ಗಟ್ಟಿ ಮಾಡಿದಳು. ದುಡೀಲಿಕ್ಕೂ ಹೋದಳು. ಆದರೆ ಬೇರೆ ಆಳುಗಳಂತೆ ಇವಳಿಂದ ಕೆಲಸವಾಗುವುದಿಲ್ಲವೆಂದು ಕಂಡ ಸಾಹುಕಾರರು ನಾಳೆಯಿಂದ ಕೆಲಸಕ್ಕೆ ಬರಬೇಡವೆಂದು ಹೇಳಿದರು. ಕಣ್ಣೀರು ಹಾಕುತ್ತಿದ್ದ ಅವ್ವನಿಗೆ ಆಗ ನಾನು ನನ್ನ ಬಾಲಬುದ್ಧಿಗೆ ತಕ್ಕಂತೆ ಹೇಳಿದೆ.

‘ಅವ್ವ, ನಾನೂ ನಿನ್ನ ಕೂಡ ಕೆಲಸಕ್ಕೆ ಬರ್ತೀನಿ. ಇಬ್ಬರೂ ದುಡಿದ್ರೆ ಒಂದೇ ಆಳಿನ ಲೆಕ್ಕ ಸಾಹುಕಾರರು ಕೊಡ್ಲಿ’ ಎಂದೆ.

ಅವ್ವನಿಗೆ ನನ್ನನ್ನು ದುಡಿಸಲು ಮನಸ್ಸಿರಲಿಲ್ಲ. ನನ್ನ ಒತ್ತಾಯಕ್ಕೆ ಒಪ್ಪಿದಳು. ಇಬ್ಬರೂ ದುಡಿಯಲು ಯತ್ನಿಸಿದೆವು. ಆದರೆ ದುಡಿದು ಗೊತ್ತೇ ಇಲ್ಲದ ನನ್ನ ಕೈ ತುಂಬ ಗುಳ್ಳೆಗಳೆದ್ದವು. ಹಾಗಾಗಿ ಅದೂ ಸಾಗಲಿಲ್ಲ. ಒಮ್ಮೆಯಂತೂ ಕಿತ್ತು ತಿನ್ನುವ ಬಡತನ ನಮ್ಮ ಮೇಲೆ ಎಂತಹ ಸ್ಥಿತಿ ತಂದಿತೆಂದರೆ ಅದು ನೆನಪಾದರೆ ಈಗಲೂ  ಕಣ್ಣಲ್ಲಿ ನೀರು ಬರುತ್ತದೆ. ಒಂದು ದಿನ ರಾತ್ರಿ ಅವ್ವ ನನಗೆ ಊಟ ಬಡಿಸಿದಳು. ನಾನು ಉಂಡೆ. ಕೂಡಲೆ ಆಕೆ ಮಲಗಲು  ಹಾಸಿಗೆ ತಯಾರಿಸಿದಳು. ಆಗ ನಾನು ‘ಅವ್ವಾ, ನೀ ಊಟಮಾಡುವಂಗಿಲ್ಲೇನು?’ ಅಂತ ಕೇಳಿದೆ.

ಆಕೆ ಏನೇನೋ ಹಾರಿಕೆ ಉತ್ತರ ಕೊಟ್ಟಳು. ಅಂದು ಇಬ್ಬರಿಗೂ ಆಗುವಷ್ಟು ರೊಟ್ಟಿ ಮನೆಯಲ್ಲಿರಲಿಲ್ಲವೆಂಬ ಸತ್ಯ ಸಂಗತಿ ನನಗೆ ತಿಳಿಯಿತು.

‘ಅವ್ವಾ, ನಾಳೆಯಿಂದ ನಾವಿಬ್ರೂ ಕೂಡಿಯೇ ಊಟ ಮಾಡೋಣ. ಒಂದೇ ರೊಟ್ಟಿ ಇದ್ದರೆ ಅರ್ಧ ಅರ್ಧ ತಿನ್ನೋಣ’ ಎಂದು ಹೇಳಿದೆ.

ಆಗ ಆಕೆ ನನ್ನನ್ನು ತಬ್ಬಿಕೊಂಡು ಅತ್ತಾಗ ನಾನೂ ಅತ್ತುಬಿಟ್ಟೆ.

ಇದಕ್ಕೂ ಮೊದಲು ಒಂದು ಘಟನೆ ಹೇಳ್ತೀನಿ. ನಾನು ಆರೇಳು ವರ್ಷದವನಿದ್ದಾಗ ನಡೆದ ಘಟನೆಯಿದು. ನಮ್ಮೂರಿನ ಸಮೀಪ ಸಂತಿಯಾಗೋ ಊರು ಅಂದ್ರೆ ಬೈಲಹೊಂಗಲ. ಆ ಸಂತಿಗೆ ಪ್ರತಿ ಶುಕ್ರವಾರ ಎಲ್ಲಾರೂ ಹೋಗ್ತಿದ್ರು. ಅದ್ರಂತೆ ನಮ್ಮವ್ವನೂ ಹೋಗಿದ್ಲು. ಸಂತಿಯಿಂದ ಬರೋವಾಗ ಮಕ್ಕಳಿಗೆ ತಿನ್ನಲಾಕ ಏನಾದ್ರೂ ತರ್ತಾಳೆಂಬ ಆಸೆಯಿಂದ ಕಾಣಲು ಹೊಂಟೆ. ಆದರೆ ದೊಡ್ಡ ಮಳೆಯಿಂದಾಗಿ ಮುಂದೆ ಹೋಗಲಾರದೆ ಕಾಲುವೆಯಲ್ಲಿ ಜಾರಿ ಬಿದ್ದೆನಂತೆ. ಮ್ಯಾಲೆ ಬರಾಕ ತ್ರಾಣವುಳಿದಿರಲಿಲ್ಲ. ತೇಲುತ್ತ ತೇಲುತ್ತ ಹೊಂಟಾಗ ಹಿರಿಯರೆಲ್ಲ ಕೂಡುವ ಮಠಪತಿಯವರ ಕಟ್ಟೆಯಲ್ಲಿ ಕುಂತವರು ನೋಡಿ ಮ್ಯಾಲ ಎತ್ತಿ ಉಪಚರಿಸಿದರಂತೆ.

ಇಂತಹ ಅನೇಕ ಪ್ರಸಂಗಗಳನ್ನು ದಾಟಿ ಬಂದಿರುವ ನನ್ನ ಬದುಕಿನಲ್ಲಿ ನನಗೆ ಐಶ್ವರ್ಯವೂ ಲಭಿಸಿತು. ಆದರೆ ಗರ್ವ ಬರಲಿಲ್ಲ. ದುಡ್ಡಿನಿಂದ ನನಗೆ ಮದ ಬರಲಿಲ್ಲ. ಅದರಿಂದ ಯಾವ

©KTBS NOT TO BE REPUBLISHED

ವ್ಯಸನಕ್ಕೂ ನಾನು ತುತ್ತಾಗಲಿಲ್ಲ. ಇದು ನನ್ನ ಅವ್ವಳ ಸ್ಮರಣೆಯ ಫಲ ಎಂದು ಇಲ್ಲಿ ನೆನಸಿಕೊಳ್ಳಲಾರದೆ ಇರಲಾರೆ.

ಇನ್ನು ನಾನು ಓದಿದ್ದು ನಾಲ್ಕನೇ ಇಯತ್ತೆಯವರೆಗೆ ಮಾತ್ರ. ನನ್ನ ಬಡತನ, ಅಜ್ಞಾನ– ಇವನ್ನು ಮುಚ್ಚಿಡಲು ನಾನು ಬಯಸುವುದಿಲ್ಲ. ಇಂಥಾದ್ದರಲ್ಲಿ ದೈವದತ್ತವಾಗಿ ನನಗೆ ಇದ್ದದ್ದು ಒಳ್ಳೆಯ ಕಂಠ. ಅದರಿಂದ ಶಾಲೆಯಲ್ಲಿ ನನ್ನಿಂದ ಕವಿತೆಗಳನ್ನು ಹಾಡಿಸಿ, ಗುರುಗಳು ಸಂತೋಷಪಡುತ್ತಿದ್ದರು. ಭಜನೀ ಮೇಳದಲ್ಲಿ ನನ್ನಿಂದ ಹಾಡಿಸಿ ನಮ್ಮೂರವರು ಸಂತೋಷ ಪಡುತ್ತಿದ್ದರು. ನಮ್ಮೂರ ರಸಿಕರು ಬಯಲಾಟ ಮಾಡಿದರೆ ಅದರಲ್ಲಿ ನನಗೆ ಬಾಲ ಪಾತ್ರ ಕೊಡುತ್ತಿದ್ದರು. ನನ್ನ ಬಾಲಪಾತ್ರವನ್ನು ಮೆಚ್ಚಿ ಬೆನ್ನು ತಟ್ಟುತ್ತಿದ್ದರು.

ಅಲ್ಲಿಯವರೆಗೂ ಆಟ ಆಡ್ತಿದ್ರು. ನಾಟಕ ಆಡಿರಲಿಲ್ಲ. ಗರುಡ ಸದಾಶಿವರಾಯರು ಬರೆದ 'ಪಾದುಕಾ ಪಟ್ಟಾಭಿಷೇಕ' ನಾಟಕ ಪ್ರಾರಂಭ ಮಾಡಿದ್ರು. ಅದರಲ್ಲಿ ನನಗೆ ಭರತನ ಪಾತ್ರ ಕಟ್ಟಿಟ್ಟಿದ್ದು. ಜನರ ಮೆಚ್ಚಿಗೆಯಂತೂ ಇದ್ದದ್ದೇ.

ಈ ಮೆಚ್ಚಿಗೆಯಿಂದ ಆಗ ನನ್ನನ್ನು ಕಂಪನಿಯವರು ಪಾತ್ರ ಮಾಡಾಕ ಕರ್ಯಾಕ ಬಂದ್ರು. ನಮ್ಮೂರವರೆಲ್ಲರಿಗೂ ಸಂತೋಷ. ಹೆಮ್ಮೆ. ನಮ್ಮೂರ ಹಿರಿಯರ ಜೊತೆಗೆ ಹೋಗಿ ಭರತನ ಪಾತ್ರ ಮಾಡಿದೆ. ಜನ ಮೆಚ್ಚಿದರು. ವಿಶೇಷವೆಂದರೆ, ಆ ನಾಟಕದಲ್ಲಿ ದಶರಥನ ಪಾತ್ರ ವಹಿಸಿದವರು ಚಿಕ್ಕೋಡಿ ಶಿವಲಿಂಗ ಸ್ವಾಮಿಗಳು. ನನ್ನ ಪಾತ್ರ ನೋಡಿ ಬೆನ್ನು ತಟ್ಟಿದರು. ಮುಂದೆ ಕೆಲವು ದಿನಗಳ ನಂತರ ಧಾರವಾಡದಿಂದ ಶಿವಲಿಂಗ ಸ್ವಾಮಿಗಳು ನನ್ನನ್ನು ತಮ್ಮ ಲಿಂಗರಾಜ ನಾಟ್ಯ ಸಂಘಕ್ಕೆ ಕರೆಸಿಕೊಂಡರು. ಅದು ೧೯೨೧ನೇ ಇಸವಿ. ಅವರು ಕಲ್ಲಾಗಿದ್ದ ನನ್ನನ್ನು ಕಟೆದು ಮೂರ್ತಿ ಮಾಡಿದರು. ಎಲ್ಲೋ ಬಿದ್ದು ಹೋಗಬಾರದೆಂದು ರಂಗಭೂಮಿ ಗುಡಿಯ ಒಂದು ಮೂಲೆಯಲ್ಲಿ ನನ್ನನ್ನು ನಿಲ್ಲಿಸಿದರು.

## ಕೃತಿಕಾರರ ಪರಿಚಯ

**ಡಾ. ಗಣೇಶ ಅಮೀನಗಡ** ಅವರು **ಬಾಗಲಕೋಟೆ ಜಿಲ್ಲೆಯ ಅಮೀನಗಡದವರು.** ಹಂಪಿ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಪತ್ರಿಕೋದ್ಯಮದಲ್ಲಿ ವಿಶೇಷ ಆಸಕ್ತಿಯುಳ್ಳ ಇವರು ಪ್ರಸ್ತುತ ಮೈಸೂರಿನಲ್ಲಿ ಪ್ರಜಾವಾಣಿ ಪತ್ರಿಕೆಯ ಮುಖ್ಯ ವರದಿಗಾರರಾಗಿರುತ್ತಾರೆ. **'ಕೈದಿಗಳ ಕಥನ'** ಮುಂತಾಗಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಅವರ **'ಏಣಿಯಿಂದ ರಂಗದ ಏಣಿಗೆ'** ಎಂಬ ಕೃತಿಯಿಂದ ಪ್ರಸ್ತುತ ಭಾಗವನ್ನು ಆರಿಸಲಾಗಿದೆ.



©KTBS NOT TO BE REPUBLISHED

## ಅಭ್ಯಾಸ

**ಅ. ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಏಣಗಿ ಬಾಳಪ್ಪನವರು ತಮ್ಮನ್ನು ಏನೆಂದು ಗುರುತಿಸಿಕೊಂಡಿದ್ದಾರೆ?

೨. 'ಪಾದುಕಾ ಪಟ್ಟಾಭಿಷೇಕ' ನಾಟಕವನ್ನು ಬರೆದವರು ಯಾರು?

೩. ಪಾದುಕಾ ಪಟ್ಟಾಭಿಷೇಕ ನಾಟಕದಲ್ಲಿ ಏಣಗಿಯವರು ಯಾವ ಪಾತ್ರ ವಹಿಸುತ್ತಿದ್ದರು?

೪. ರಂಗಕಲಾವಿದ ಬಾಳಪ್ಪನವರ ಹುಟ್ಟೂರು ಎಲ್ಲಿದೆ?

@KTBS
NOT TO BE REPUBLISHED